31 December 2025 Wednesday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಸಮಯವೇ ಪ್ರತಿಯೊಂದನ್ನೂ ನಿರ್ಧರಿಸುವುದು! ನಾನು ಮಾಡಿದೆ ಎನ್ನುವುದು ಹುಸಿ ಸುಳ್ಳು!

-ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ಪುಸ್ತಕ ಕಲಿಸುವಾಗ
ನಿದ್ದೆ ಬರಿಸುತ್ತದೆ
ಜೀವನ ಕಲಿಸುವಾಗ
ನಿದ್ದೆ ಕೆಡಿಸುತ್ತದೆ

ಮೈಲಾರ ಸಾವಿತ್ರಿಬಾಯಿ

info.varthaman@gmail.com

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 66 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3


# ಬಂಡೀಪುರ: ಮೋಜು, ಮಸ್ತಿಗೆ ಬ್ರೇಕ್

## ಹೊಸ ವರ್ಷಾಚರಣೆ ಹಿನ್ನಲೆ ವಾಸ್ತವ್ಯ, ಸಫಾರಿ ಬಂದ್

**ಮೈಸೂರು:** ರಾಜ್ಯದ ಪ್ರಸಿದ್ಧ ವನ್ಯಜೀವಿಧಾಮ ಬಂಡೀಪುರ ರಾಷ್ಟ್ರೀಯ ಅಭಯಾರಣ್ಯದಲ್ಲಿ ನೂತನ ವರ್ಷಾಚರಣೆಗೆ ಪ್ರವಾಸಿಗರಿಗೆ ಸರ್ಕಾರ ಕಡಿವಾಣ ಹಾಕಿದೆ. ವಾಸ್ತವ್ಯ ಅಷ್ಟೇ ಅಲ್ಲ, ಸಫಾರಿಗೂ ಕೂಡ ಬ್ರೇಕ್ ಬಿದ್ದಿದೆ.

ಬಂಡೀಪುರದಲ್ಲಿ ಹೊಸ ವರ್ಷಾಚರಣೆ ನೆಪದಲ್ಲಿ ವಾಸ್ತವ್ಯ ಹೂಡುವ ಪ್ರವಾಸಿಗರು ಮೋಜು–ಮಸ್ತಿ ಮಾಡಿ ಕಾಡು ಪ್ರಾಣಿಗಳ ಸಹಜ ಜೀವನಕ್ಕೆ

ಪುಟ 2ಕ್ಕೆ




### ರೆಸಾರ್ಟ್‌ಗಳಿಗೂ ಬಿಗಿ ನಿಯಮ

ಈ ಬಾರಿ ಬಂಡೀಪುರದಲ್ಲಿ ಹೊಸ ವರ್ಷ ಆಚರಣೆ ದಿನ ಮೋಜು, ಮಸ್ತಿಗೆ ಪ್ಲಾನ್ ಮಾಡಿದ್ದ ಪ್ರವಾಸಿಗಳಿಗೆ ನಿರಾಶೆ ಆಗಿದೆ. ಅರಣ್ಯ ಇಲಾಖೆ ವಸತಿ ಗೃಹಗಳು ಮಾತ್ರವಲ್ಲದೆ ಬಂಡೀಪುರ ವ್ಯಾಪ್ತಿಯಲ್ಲಿ ಬರುವ ಖಾಸಗಿ ರೆಸಾರ್ಟ್‌ಗಳು ಹಾಗೂ ಹೋಂಸ್ಟೇಗಳಿಗೂ ಕೂಡ ಹಲವು ನಿಯಮ ಜಾರಿ ಮಡಲಾಗಿದೆ. ಹೊಸ ವರ್ಷಾಚರಣೆ ಸಂದರ್ಭದಲ್ಲಿ ಕಾಡು ಪ್ರಾಣಿಗಳ ಸಹಜ ಜೀವನಕ್ಕೆ ಅಡಚಣೆಯಾಗಬಾರದೆಂಬ ಉದ್ದೇಶದಿಂದ ಖಾಸಗಿ ರೆಸಾರ್ಟ್‌ಗಳು ಹಾಗೂ ಹೋಂಸ್ಟೇಗಳಲ್ಲಿ ಈ ನಿಯಮಗಳನ್ನು ಎಲ್ಲರೂ ಕಡ್ಡಾಯವಾಗಿ ಅನುಸರಿಸುವಂತೆ ಅರಣ್ಯ ಇಲಾಖೆ ಸೂಚಿಸಿದೆ.

ಖಾಸಗಿ ರೆಸಾರ್ಟ್‌ಗಳು, ಹೋಂ ಸ್ಟೇಗಳನ್ನು ರಾತ್ರಿ 10 ಗಂಟೆಗೆ ಬಂದ್ ಮಾಡಬೇಕು. ಅಧಿಕ ಪ್ರಮಾಣದ ಶಬ್ದ ಮಾಡುವಂತಿಲ್ಲ. ಪ್ರತಿಯೊಬ್ಬರೂ ಕಡ್ಡಾಯವಾಗಿ ನಿಯಮ ಪಾಲನೆ ಮಾಡುವಂತೆ

ಪುಟ 2ಕ್ಕೆ

# ಒಂದೇ ಮಗು ಇದ್ದರೂ ಸರ್ಕಾರಿ ಶಾಲೆ ಮುಚ್ಚಲ್ಲ

***ಬರಗೂರು ಆಗ್ರಹಕ್ಕೆ ಮಧು ಬಂಗಾರಪ್ಪ ಹೇಳಿಕೆ**

**ಬೆಂಗಳೂರು:** ಒಂದೇ ಒಂದು ಮಗು ಇದ್ದರೂ ಸರ್ಕಾರಿ ಶಾಲೆ ಮುಚ್ಚುವುದಿಲ್ಲ. ವಿಲೀನ ಕೂಡ ಮಾಡುವುದಿಲ್ಲ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಸಾಹಿತಿ ಬರಗೂರು ರಾಮಚಂದ್ರಪ್ಪ ಸರ್ಕಾರಿ ಶಾಲೆಗಳನ್ನ ಮುಚ್ಚ ಬೇಡಿ ಎಂದು ಸರ್ಕಾರಕ್ಕೆ ಮನವಿ ಮಾಡಿರುವ ವಿಚಾರಕ್ಕೆ ವಿಧಾನ ಸೌಧದಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಶಾಲೆಗಳನ್ನು ವಿಲೀನ ಮಾಡುವ ಅಧಿಕಾರ ನಮಗೆ ಇಲ್ಲ. ಈ ಬಗ್ಗೆ ಬರಗೂರು ರಾಮಚಂದ್ರಪ್ಪ ಅವರಿಗೂ ಮಾಹಿತಿ ಕೊಡಲಾಗಿದೆ ಎಂದು ತಿಳಿಸಿದರು.



ಸರ್ಕಾರಿ ಶಾಲೆಗಳಲ್ಲಿ ಟೀಚರ್ ಇರ್ತಾರೆ, ಮಧ್ಯಾಹ್ನದ ಊಟವೂ ಇರುತ್ತದೆ. ಗುಣಮಟ್ಟದ ಶಿಕ್ಷಣ ಸಿಗಲಿದೆ.

ಪುಟ 2ಕ್ಕೆ

# ಚಾ.ಬೆಟ್ಟದಲ್ಲಿ ಅಗತ್ಯ ವ್ಯವಸ್ಥೆ ಕಲ್ಪಿಸಿ

## ಹೊಸ ವರ್ಷಾಚರಣೆಗೆ ಸಿದ್ಧತೆ | ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸೂಚನೆ

**ಮೈಸೂರು:** ಚಾಮುಂಡಿ ಬೆಟ್ಟಕ್ಕೆ ಹೊಸ ವರ್ಷದ ಹಿನ್ನೆಲೆಯಲ್ಲಿ ಜನವರಿ 1ರಂದು ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಲಿದ್ದಾರೆ. ಅಗತ್ಯ ವ್ಯವಸ್ಥೆ ಮಾಡಲು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದರು. ಚಾಮುಂಡಿ ಬೆಟ್ಟದಲ್ಲಿ ಜನವರಿ 2ರಂದು ಲಲಿತಾ ಸಹಸ್ರನಾಮ ಕಾರ್ಯಕ್ರಮ, ಜನವರಿ 3 ಹಾಗೂ 4 ರಂದು ವಾರಾಂತ್ಯ ಇದೆ. ದರ್ಶನಕ್ಕೆ ಬರುವ ಭಕ್ತಾದಿಗಳಲ್ಲಿ ನೂಕು ನುಗ್ಗಲು ಉಂಟಾಗದಂತೆ ಸರದಿ ಸಾಲುಗಳನ್ನು ಹೆಚ್ಚಿಗೆ ಮಾಡುವಂತೆ ತಿಳಿಸಿದರು.

ಸುಗಮ ವಾಹನ ಸಂಚಾರಕ್ಕೆ ಹಾಗೂ ವಾಹನ ನಿಲುಗಡೆಗೆ ಸಂಬಂಧಿಸಿದಂತೆ ಯಾವುದೇ ಸಮಸ್ಯೆ ಉಂಟಾಗದಂತೆ ವ್ಯವಸ್ಥೆ ಮಾಡಿ. ಹೆಚ್ಚಿನ ಜನದಟ್ಟಣೆ ಉಂಟಾದ ಸಂದರ್ಭದಲ್ಲಿ ಗಣ್ಯ ವ್ಯಕ್ತಿಗಳ ವಾಹನಗಳನ್ನು ಸಹ ಮಹಿಷಾಸುರ ಪ್ರತಿಮೆ ಬಳಿ ನಿಲ್ಲಿಸಿ ನಂತರ ಬ್ಯಾಟರಿ ಚಾಲಿತ ವಾಹನದ ವ್ಯವಸ್ಥೆ ಮಾಡುವಂತೆ ಸೂಚಿಸಿದರು.

ಹೆಚ್ಚಿನ ಸ್ಥಳಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿ.



ಸ್ವಚ್ಛತೆ ಕಾಪಾಡಲು ಹೆಚ್ಚಿನ ಸ್ವಚ್ಛತಾ ಸಿಬ್ಬಂದಿಗಳನ್ನು ನಿಯೋಜಿಸಿ. ಕೆಎಸ್‌ಆರ್‌ಟಿಸಿ ನಗರ ವಿಭಾಗದಿಂದ ಹೆಚ್ಚಿನ ಬಸ್ ಟ್ರಿಪ್ ಗಳನ್ನು ಮಾಡಬೇಕು. ಆರೋಗ್ಯ ಇಲಾಖೆ ವತಿಯಿಂದ ಎರಡು ಅಂಬ್ಯೂಲೆನ್ಸ್ ನಿಯೋಜಿಸಬೇಕು ಹಾಗೂ ದಾನಿಗಳು ನೀಡುವ ಆಹಾರ ಪದಾರ್ಥಗಳಲ್ಲಿ ದಾಸೋಹ ಭವನದಲ್ಲಿ ಪ್ರಸಾದ ಸಿದ್ಧಪಡಿಸಿದರೂ ನೀಡಿರುವ ಆಹಾರ ಪದಾರ್ಥಗಳ ಗುಣಮಟ್ಟವನ್ನು ಪರಿಶೀಲಿಸಿ. ಯಾವುದೇ ಅಹಿತಕರ ಘಟನೆ ನಡೆಯದಂತೆ ಎಚ್ಚರಿಕೆ ವಹಿಸಿ ಎಂದು ಹೇಳಿದರು.

ಪುಟ 2ಕ್ಕೆ

# ಚಿನ್ನಾಭರಣ ದರೋಡೆ ಪ್ರಕರಣ: 5 ವಿಶೇಷ ತನಿಖಾ ತಂಡ ರಚನೆ

**ಮೈಸೂರು:** ಹುಣಸೂರು ಚಿನ್ನದಂಗಡಿಯಲ್ಲಿ ಸುಮಾರು 10 ಕೋಟಿಗೂ ಹೆಚ್ಚು ಬೆಲೆಯ 8 ಕೆ.ಜಿ ಚಿನ್ನಾಭರಣ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆಗೆ 5 ವಿಶೇಷ ತಂಡಗಳನ್ನು ರಚಿಸಲಾಗಿದೆ.

ದರೋಡೆಕೋರರ ಪತ್ತೆಗಾಗಿ ಡಿವೈಎಸ್‌ಪಿ ನೇತೃತ್ವದಲ್ಲಿ ಐವರು ಇನ್ಸ್ಪೆಕ್ಟರ್ ಗಳನ್ನು ಒಳಗೊಂಡ ಐದು ವಿಶೇಷ ತಂಡಗಳನ್ನು ರಚನೆ ಮಾಡಲಾಗಿದೆ. ಈ ತಂಡಗಳು ದರೋಡೆಕೋರರು ಮುಖಚಹರೆಯನ್ನು ಸಿಸಿಟಿವಿ ದೃಶ್ಯಾವಳಿಗಳಿಂದ ಪಡೆದಿದ್ದಾರೆ. ದರೋಡೆಗೆ ಬಳಸಿದ್ದ ಬೈಕ್ ಗಳ ನಂಬರ್ ಹಾಗೂ ಚಿನ್ನಾಭರಣ ತುಂಬಲು ತಂದಿದ್ದ ಒಂದು ಬ್ಯಾಗನ್ನು ಅಂಗಡಿಯಲ್ಲೇ ಬಿಟ್ಟು ಹೋಗಿರುವ ಬಗ್ಗೆ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಹುಣಸೂರು ಪಟ್ಟಣದ ಸ್ಕೈಗೋಲ್ಡ್ ಶಾಪ್‌ನಲ್ಲಿ ಭಾನುವಾರ ಮಧ್ಯಾಹ್ನ 5 ನಿಮಿಷದಲ್ಲಿ ಸಮಯದಲ್ಲಿ ಬಂದ ದರೋಡೆಕೋರರು ಅಂಗಡಿಯ ಸಿಬ್ಬಂದಿಗೆ ಗನ್



ತೋರಿಸಿ ಸುಮಾರು 8 ಕೆ.ಜಿ 34 ಗ್ರಾಂ ಚಿನ್ನ ಹಾಗೂ ಡೈಮಂಡ್ ಆಭರಣಗಳನ್ನು ದರೋಡೆ ಮಾಡಿದ್ದರು. ಇದರ ಮೌಲ್ಯ ಸುಮಾರು 10 ಕೋಟಿ ಆಗಿದೆ ಎಂದು ಮಾಲೀಕರಾದ ಫಾತಿಮಾ ಮಂಜಿಲ್ ದೂರು ಸಲ್ಲಿಸಿದ್ದಾರೆ.

ಚಿನ್ನ ಹಾಗೂ ವಜ್ರದ ಆಭರಣಗಳನ್ನು ತುಂಬಿಕೊಂಡು ಹುಣಸೂರಿನಿಂದ ಕೆ. ಆರ್. ನಗರದ ಮಾರ್ಗ ಮಧ್ಯೆ ಸುಮಾರು ಎರಡು ಕಿ.ಮೀ ದೂರದಲ್ಲಿ ಕಾರನ್ನು ನಿಲ್ಲಿಸಿದ್ದ ದರೋಡೆಕೋರರು ಎರಡು ಬೈಕ್ ಗಳಲ್ಲಿ ದರೋಡೆ ಮಾಡಿದ ಚಿನ್ನಾಭರಣಗಳ ಜೊತೆ ಪರಾರಿಯಾಗಿರುವ ಬಗ್ಗೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

# ನಾಯಕತ್ವ ಬದಲು: ಫೆಬ್ರವರಿ 'ಡೆಡ್‌ಲೈನ್'

## ಆನಂತರ ಬಜೆಟ್ ಸಿದ್ಧತೆಗೆ ಮೀಸಲು: ಸಚಿವ ಜಿ.ಪರಮೇಶ್ವರ್ ಬಾಂಬ್

**ಬೆಂಗಳೂರು:** ರಾಜ್ಯದಲ್ಲಿ ಫೆಬ್ರವರಿಯಲ್ಲಿ ಬಜೆಟ್ ಸಿದ್ಧತೆಗೂ ಮೊದಲೇ ನಾಯಕತ್ವ ವಿಚಾರದಲ್ಲಿ ಹೈಕಮಾಂಡ್ ನಿರ್ಧಾರ ಕೈಗೊಳ್ಳಬೇಕು. ಆನಂತರ ಕಷ್ಟ ಎಂದು ಗೃಹ ಸಚಿವ ಜಿ.ಪರಮೇಶ್ವರ್ ಬಾಂಬ್ ಸಿಡಿಸಿದ್ದಾರೆ.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ಬಜೆಟ್ ಸಿದ್ಧತೆ ಫೆಬ್ರುವರಿಯಲ್ಲಿ ಆರಂಭವಾಗಲಿದೆ. ಅದಕ್ಕೆ ಸುಮಾರು ಒಂದು ತಿಂಗಳು ಬಾಕಿ ಇದೆ. ನಾಯಕತ್ವ ಬದಲಾವಣೆ ಬಗ್ಗೆ ಹೈಕಮಾಂಡ್ ಏನನ್ನಾದರೂ ನಿರ್ಧರಿಸಬೇಕಾದರೆ ಅದಕ್ಕೂ ಮೊದಲೇ ನಿರ್ಧರಿಸಬೇಕು ಎಂದು ಉತ್ತರಿಸಿದರು.

ರಾಜ್ಯದಲ್ಲಿ ನಾಯಕತ್ವವನ್ನು ಬದಲಾಯಿಸಬೇಕೆ ಅಥವಾ ಬೇಡವೇ ಎಂಬುದನ್ನು ಕಾಂಗ್ರೆಸ್ ಹೈಕಮಾಂಡ್ ನಿರ್ಧರಿಸುತ್ತದೆ. ಆದರೆ, ಯಾರಾದರೂ ಬಜೆಟ್ ಸಿದ್ಧಪಡಿಸಬೇಕು ಅಲ್ಲವೇ? ರಾಜ್ಯದ ಜನರಿಗೆ ನಾವು ನೀಡಿದ ಭರವಸೆ ಆಧಾರದ ಮೇಲೆ ಬಜೆಟ್ ಮಂಡಿಸಬೇಕು. ಹೀಗಾಗಿ ಅದಕ್ಕೂ ಮೊದಲೇ ನಿರ್ಧಾರವಾಗಬೇಕು ಎಂದು ಹೇಳಿದರು.

ಪರಮೇಶ್ವರ್ ಸಿಎಂ ಆಗಬೇಕು ಎಂಬ ಒತ್ತಾಯದ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಅವರು, ನನ್ನ ಮೇಲಿನ ಪ್ರೀತಿಯಿಂದ ಹಾಗೆ ಹೇಳುತ್ತಿದ್ದಾರೆ. ಅಂತಹ ಮಾತುಗಳನ್ನು ಹೇಳಬೇಡಿ ಎಂದು ನಾನು ಅವರಿಗೆ ಹೇಗೆ ಹೇಳಲಿ? ಹಾಗೆ ಹೇಳಬೇಕೆಂದು ನೀವೂ ಸೂಚಿಸುತ್ತಿರುವಂತೆ ತೋರುತ್ತಿದೆ ಎಂದು ಹೇಳಿದರು.

ಕಾಂಗ್ರೆಸ್ ಹೈಕಮಾಂಡ್ ಎಲ್ಲ ಮಾಹಿತಿ ಹೊಂದಿರುತ್ತದೆ. ಅವರು ಪ್ರಧಾನ ಕಾರ್ಯದರ್ಶಿಯಿಂದ ಮಾಹಿತಿ ಪಡೆಯುತ್ತಾರೆ. ಅವರು ತಮ್ಮದೇ ಆದ ರೀತಿಯಲ್ಲಿ ಮಾಹಿತಿ ಸಂಗ್ರಹಿಸುತ್ತಾರೆ.



ಏನು ಮತ್ತು ಯಾವಾಗ ನಿರ್ಧರಿಸಬೇಕು ಎಂಬುದು ಅವರಿಗೆ ತಿಳಿದಿದೆ. ನಾಯಕತ್ವವನ್ನು ಬದಲಾಯಿಸಬೇಕೇ ಅಥವಾ ಬೇಡವೇ ಎಂಬುದನ್ನೂ ಅವರೇ ನಿರ್ಧರಿಸುತ್ತಾರೆ ಎಂದು ಅವರು ಹೇಳಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಾಜ್ಯದ ಮುಖ್ಯಮಂತ್ರಿಯಾಗಲು ಶೇ 200ರಷ್ಟು ಅವಕಾಶವಿದೆ. ಜನವರಿ 6 ಅಥವಾ 9ರಂದು ಸಿಎಂ ಆಗಲಿದ್ದಾರೆಂದು ಶಾಸಕ ಇಕ್ಬಾಲ್ ಹುಸೇನ್ ಹೇಳಿಕೆ ಬಗ್ಗೆ ಕೇಳಿದಾಗ, 'ಇಕ್ಬಾಲ್ ಹುಸೇನ್ ಒಮ್ಮೆ ಹೇಳಿದ್ದು ಅಂತಿಮ. ನಾನು ಅದನ್ನು ಸ್ವೀಕರಿಸುತ್ತೇನೋ ಇಲ್ಲವೋ ಎಂಬುದು ಪ್ರಶ್ನೆಯಲ್ಲ' ಎಂದು ಪರಮೇಶ್ವರ್ ತಮಾಷೆಯಾಗಿ ಹೇಳಿದರು.

ನಾಯಕತ್ವ ಬದಲಾವಣೆಯ ಬಗ್ಗೆ ಊಹಾಪೋಹಗಳ ನಡುವೆಯೂ, ಸಿದ್ದರಾಮಯ್ಯ ಅವರು ಕಳೆದ ತಿಂಗಳು ಮುಂದಿನ ವರ್ಷ ತಮ್ಮ ದಾಖಲೆಯ 17ನೇ ಬಜೆಟ್ ಮಂಡಿಸುವುದಾಗಿ ಹೇಳಿದ್ದಾರೆ. ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಮಾರ್ಚ್‌ನಲ್ಲಿ ತಮ್ಮ 16ನೇ ಬಜೆಟ್ ಮಂಡಿಸಿದ್ದರು. 2026–27ನೇ ಸಾಲಿನ ಬಜೆಟ್ ಮುಂದಿನ ವರ್ಷ ಮಾರ್ಚ್‌ನಲ್ಲಿ ಮಂಡನೆಯಾಗುವ ಸಾಧ್ಯತೆ ಇದೆ.

ಅಲ್ಲದೆ, ನಾಯಕತ್ವ ಬದಲಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್‌ನೊಳಗೆ 'ದಲಿತ ಮುಖ್ಯಮಂತ್ರಿ' ಕೂಗು ಕೇಳಿಬರುತ್ತಿದ್ದು, ಪರಮೇಶ್ವರ ಅವರ ಹೆಸರು ಮುಂಚೂಣಿಯಲ್ಲಿದೆ. ನಾಯಕತ್ವ ಬದಲಾವಣೆಗಳಿದ್ದಲ್ಲಿ, ಸಿದ್ದರಾಮಯ್ಯ ಬಣದ ಪರಮೇಶ್ವರ್ ಅಥವಾ ಇತರ ಹಿರಿಯ ನಾಯಕರನ್ನು ಮುಖ್ಯಮಂತ್ರಿ ಹುದ್ದೆಗೆ ಪರಿಗಣಿಸುವ ಬಗ್ಗೆ ಪಕ್ಷದ ವಲಯದಲ್ಲಿ ಒತ್ತಾಯ ಬಂದಿದೆ.

# ಮುಸ್ಲಿಂ ತುಷ್ಟೀಕರಣದ ಶರವೇಗ

**ಸರ್ಕಾರಿ ಭೂಮಿ ಅತಿಕ್ರಮಣದಾರರಿಗೆ ಮಣೆ: ಪ್ರಹ್ಲಾದ್ ಜೋಶಿ ಕಿಡಿ**

**ನವದೆಹಲಿ:** ಬೆಂಗಳೂರಿನ ಕೋಗಿಲು ಸರ್ಕಾರಿ ಭೂಮಿ ಅತಿಕ್ರಮಣದಾರರಿಗೆ ಕರ್ನಾಟಕದ ಕಾಂಗ್ರೆಸ್ ಸರ್ಕಾರ ಕೇವಲ ಎರಡು ದಿನದಲ್ಲಿ ಪರಿಹಾರ ವ್ಯವಸ್ಥೆಗೆ ಮುಂದಾಗಿರುವುದು ಮುಸ್ಲಿಂ ತುಷ್ಟೀಕರಣದ ಶರವೇಗವನ್ನು ತೋರಿಸುತ್ತದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಕಿಡಿಕಾರಿದರು.



ನವದೆಹಲಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ರಾಜ್ಯದಲ್ಲಿ ರೈತರು, ಬೆಳೆಹಾನಿ ಸಂತ್ರಸ್ತರು ಮತ್ತು ಇತರೆ ನಿರಾಶ್ರಿತರು ಪರ್ಯಾಯ ವ್ಯವಸ್ಥೆ ಹಾಗೂ ಪರಿಹಾರಕ್ಕಾಗಿ ವರ್ಷಾನುಗಟ್ಟಲೆ ಕಾಯುತ್ತಿದ್ದಾರೆ. ಗೃಹಲಕ್ಷ್ಮಿ ಫಲಾನುಭವಿಗಳೂ

ಪುಟ 2ಕ್ಕೆ

# ವೈಭವದ ವೈಕುಂಠ ಏಕಾದಶಿ

**ಮೈಸೂರು:** ನಗರದ ಅವಧೂತ ದತ್ತಪೀಠದ ಸೇರಿದಂತೆ ವೆಂಕಟೇಶ್ವರ ದೇಗುಲಗಳಲ್ಲಿ ವೈಭವದ ವೈಕುಂಠ ಏಕಾದಶಿ ಆಚರಿಸಲಾಯಿತು. ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ವೈಕುಂಠ ಏಕಾದಶಿಯ ಪ್ರಯುಕ್ತ ಶ್ರೀ ದತ್ತ ವೆಂಕಟೇಶ್ವರ ಸ್ವಾಮಿ ಉತ್ತರ ದ್ವಾರ ದರ್ಶನ ವಿಜೃಂಭಣೆಯಿಂದ ಜರುಗಿತು.

ಸಹಸ್ರಾರು ಭಕ್ತರು ಸಾಲಿನಲ್ಲಿ ನಿಂತು ವೈಕುಂಠ ದ್ವಾರದ ಮೂಲಕ ಸ್ವಾಮಿ ದರ್ಶನ ಪಡೆದರು. ಈ ಸಂದರ್ಭದಲ್ಲಿ ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಆಶೀರ್ವಚನ ನೀಡಿದರು.

ದತ್ತ ವೆಂಕಟೇಶ್ವರನಿಗೆ ಪ್ರಸಿದ್ಧ ಗುರುವಾಯೂರಪ್ಪನ ಅಲಂಕಾರ ಮಾಡಲಾಗಿತ್ತು. ಯೋಗ ನಿದ್ರೆಯಿಂದ ಎದ್ದ ಸ್ವಾಮಿಗೆ ಸಾಕ್ಷಾತ್ ಲಕ್ಷ್ಮೀದೇವಿಯೇ ಅಲಂಕಾರ

ಪುಟ 2ಕ್ಕೆ

# ಮೇಲ್ಮನೆ ಚುನಾವಣೆ: ಕೈ ಅಭ್ಯರ್ಥಿಗಳ ಘೋಷಣೆ

**ನವದೆಹಲಿ:** ಕರ್ನಾಟಕ ವಿಧಾನ ಪರಿಷತ್ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರಗಳಿಗೆ ನಡೆಯಲಿರುವ ಚುನಾವಣೆಗಳಿಗೆ ಕಾಂಗ್ರೆಸ್ ಅಭ್ಯರ್ಥಿಗಳನ್ನು ಘೋಷಿಸಿದೆ. ಮೇಲ್ಮನೆಯ 4 ಸ್ಥಾನಗಳಿಗೆ ಅಭ್ಯರ್ಥಿ ಗಳನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ



ಅನುಮೋದಿಸಿದ್ದಾರೆ. 2026ರ ನವೆಂಬರ್‌ನಲ್ಲಿ ಚುನಾವಣೆ ನಡೆಯಲಿದೆ. ಪಶ್ಚಿಮ ಪದವೀಧರ ಕ್ಷೇತ್ರ– ಮೋಹನ್ ಲಿಂಬಿಕಾಯಿ, ಆಗ್ನೇಯ ಪದವೀಧರ ಕ್ಷೇತ್ರ– ಶಶಿ ಹುಲಿಕುಂಟೆಮಠ, ಈಶಾನ್ಯ ಶಿಕ್ಷಕರ ಕ್ಷೇತ್ರ– ಶರಣಪ್ಪ ಮತ್ತೂರ್ ಹಾಗೂ

ಪುಟ 2ಕ್ಕೆ

# ಸುರಕ್ಷತೆಗೆ ಕಾಳಜಿ ವಹಿಸಿ: ಸಿದ್ದರಾಮಯ್ಯ

**ಬೆಂಗಳೂರು:** ಹೊಸ ವರ್ಷವನ್ನು ಅತ್ಯಂತ ಸಂತೋಷ ಸಂಭ್ರಮದಿಂದ ಬರಮಾಡಿಕೊಳ್ಳುವ ಜೊತೆಗೆ ಸುರಕ್ಷತೆ ಬಗ್ಗೆಯೂ ಕಾಳಜಿ ವಹಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.




ಹೊಸವರ್ಷದ ಸಂಭ್ರಮಾಚರಣೆಯ ಸಂದರ್ಭದಲ್ಲಿ ನಿಮ್ಮ ಸುರಕ್ಷತೆಯನ್ನು ನಾವು ಆದ್ಯತೆಯಾಗಿಟ್ಟುಕೊಂಡಿದ್ದೇವೆ. ಹೀಗಾಗಿ ಹೆಚ್ಚುವರಿ ಗಸ್ತು ವ್ಯವಸ್ಥೆ, ತುರ್ತು ಪ್ರತಿಕ್ರಿಯಾ ಘಟಕ ಹಾಗೂ ಅಗತ್ಯ ಬೆಂಬಲ ವ್ಯವಸ್ಥೆಯೊಂದಿಗೆ ಬೆಂಗಳೂರು ನಗರ ಪೊಲೀಸರು ಸಕಲ ತಯಾರಿ

ಪುಟ 2ಕ್ಕೆ

# ಶಾಸಕ ಪಪ್ಪಿಗೆ ಜಾಮೀನು

**ಬೆಂಗಳೂರು:** ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಕಳೆದ 4 ತಿಂಗಳಿನಿಂದ ಜೈಲಿನಲ್ಲಿದ್ದ ಚಿತ್ರದುರ್ಗ ಕಾಂಗ್ರೆಸ್ ಶಾಸಕ ವೀರೇಂದ್ರ ಪಪ್ಪಿಗೆ ಕೋರ್ಟ್ ಜಾಮೀನು ಮಂಜೂರು ಮಾಡಿದೆ.



ಜಾರಿ ನಿರ್ದೇಶನಾಲಯ ವೀರೇಂದ್ರ ಪಪ್ಪಿ ಅವರನ್ನು ಬಂಧಿಸಿತ್ತು. ಜಾಮೀನು ಅರ್ಜಿ ವಿಚಾರಣೆ ನಡೆಸಿದ ಜನಪ್ರತಿನಿಧಿಗಳ ಕೋರ್ಟ್ ಮಂಗಳವಾರ ಜಾಮೀನು ಮಂಜೂರು ಮಾಡಿದೆ.

ಅಕ್ರಮ ಆನ್‌ಲೈನ್ ಬೆಟ್ಟಿಂಗ್ ಪ್ರಕರಣದಲ್ಲಿ ಇಡಿ ವೀರೇಂದ್ರ ಪಪ್ಪಿ ಅವರನ್ನು ಬಂಧಿಸಿ ವಿಚಾರಣೆ ನಡೆಸಿತ್ತು. ದಾಳಿ ನಡೆಸಿದ ಬಳಿಕ ಪಪ್ಪಿ ಬ್ಯಾಂಕ್ ಖಾತೆಯಿಂದ 55 ಕೋಟಿ ನಗದು ಫ್ರೀಜ್ ಮಾಡಿರುವುದಾಗಿ ಇಡಿ ಪ್ರಕಟಣೆ ಹೊರಡಿಸಿತ್ತು. ಕೆ.ಸಿ.ವೀರೇಂದ್ರ ಅವರ 9 ಬ್ಯಾಂಕ್ ಖಾತೆಗಳಲ್ಲಿ ಅಂದಾಜು 40.69 ಕೋಟಿ ನಗದು ಪತ್ತೆಯಾಗಿತ್ತು. 262 ಮ್ಯೂಲ್ ಖಾತೆಗಳಲ್ಲಿ

ಪುಟ 2ಕ್ಕೆ

# ಅರಣ್ಯಾಧಿಕಾರಿಗಳಿಗೆ 'ಲೋಕಾಶಾಕ್'

**ಗುಂಡ್ಲುಪೇಟೆ:** ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಕುಂದಕರೆ ವಲಯ ಅರಣ್ಯಾಧಿಕಾರಿ ನಾಗೇಂದ್ರ ನಾಯಕ್ ಮನೆ ಮೇಲೆ ಮಂಗಳವಾರ ಬೆಳಗ್ಗೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಲೋಕಾಯುಕ್ತ ಡಿವೈಎಸ್ಪಿ ಗಜೇಂದ್ರ ಪ್ರಸಾದ್ ನೇತೃತ್ವದಲ್ಲಿ ದಾಳಿ ನಡೆಸಿದ ಅಧಿಕಾರಿಗಳು ನಾಗೇಂದ್ರ ನಾಯಕ ಮನೆಯಲ್ಲಿ ಶೋಧ ನಡೆಸಿದರು.

ಪಟ್ಟಣದ ದರ್ಶನ್ ಬಡವಾಣೆಯ ವಲಯ ಅರಣ್ಯಾಧಿಕಾರಿ ನಾಗೇಂದ್ರ ನಾಯಕ ಮನೆ ಹಾಗೂ ನಾಗೇಂದ್ರ ನಾಯಕ ಅವರ ಮಾವನ ಮನೆ ಮೇಲೂ ದಾಳಿ ನಡೆಸಲಾಗಿದೆ. ದಾಖಲೆಗಳನ್ನು ಪರಿಶೀಲನೆ ಮಾಡುತ್ತಿದ್ದಾರೆ. ಅಲ್ಲದೇ ನಾಗೇಂದ್ರ ನಾಯಕ್ ಅವರ ಕಚೇರಿ ಮೇಲೂ ದಾಳಿ ನಡೆಸಲಾಗಿದೆ. ತಾಲೂಕಿನ ಅರಣ್ಯ ಇಲಾಖೆ ಅಧಿಕಾರಿಗಳ ಮನೆ ಮೇಲೂ ಲೋಕಾಯುಕ್ತ ಅಧಿಕಾರಿಗಳು ದಾಳಿ ಮಾಡಿದ್ದಾರೆ. ಚಿನ್ನಾಭರಣ, ಬ್ಯಾಂಕ್ ಖಾತೆ ವಿವರ ಹಾಗೂ ಆಸ್ತಿ ದಾಖಲೆಗಳನ್ನು ಲೋಕಾಯುಕ್ತ ಅಧಿಕಾರಿಗಳು ಪರಿಶೀಲನೆ ನಡೆಸಿದರು.




ಮೈಸೂರಿನಲ್ಲಿ ಡಿಸಿಎಫ್ ನಿವಾಸದ ಮೇಲೆಯೂ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದರು.

ಆದಾಯಕ್ಕಿಂತ ಮೀರಿದ ಆಸ್ತಿ ಸಂಪಾದನೆ ಆರೋಪದ ಹಿನ್ನೆಲೆಯಲ್ಲಿ ಕಾರ್ಯಾಚರಣೆ ನಡೆಸಿದ ಲೋಕಾಯುಕ್ತ ಪೊಲೀಸರು ಮನೆಗೆ ತೆರಳಿ ಕೆಲವು ದಾಖಲೆಗಳನ್ನು ಪರಿಶೀಲಿಸಿದರು.

# ಪವಿತ್ರಾ ಗೌಡಗೆ ಮನೆಯೂಟ ನೀಡಲು ಕೋರ್ಟ್ ಅನುಮತಿ

**ಬೆಂಗಳೂರು:** ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಸೇರಿರುವ ಆರೋಪಿ ಪವಿತ್ರಾ ಗೌಡ ಸೇರಿದಂತೆ ಮೂವರಿಗೆ ಮನೆಯೂಟ ನೀಡಲು ಅವಕಾಶ ನೀಡಲು ಕೋರ್ಟ್ ಅನುಮತಿ ನೀಡಿದೆ.



ಜೈಲಿನಲ್ಲಿ ಒಳ್ಳೆಯ ಊಟ ಇಲ್ಲ. ಇದರಿಂದ ಅನಾರೋಗ್ಯ ಉಂಟಾಗುತ್ತಿದೆ. ಹೀಗಾಗಿ ಮನೆ ಊಟ ಬೇಕೆಂದು ಆರೋಪಿ ಪವಿತ್ರಗೌಡ ಮನವಿ ಮಾಡಿದ್ದರು. ಪ್ರಕರಣದ ಆರೋಪಿಗಳಾದ ನಾಗರಾಜು, ಲಕ್ಷ್ಮಣ್ ಕೂಡ ಕೋರ್ಟ್ಗೆ ಅರ್ಜಿ ಸಲ್ಲಿಸಿದ್ದರು. ಮನವಿಯನ್ನು ಪುರಸ್ಕರಿಸಿದ ನ್ಯಾಯಾಲಯ ಮೂವರಿಗೆ ದಿನಕ್ಕೊಂದು ಬಾರಿ ಮನೆಯೂಟ ನೀಡಲು ಅವಕಾಶ ನೀಡಿದೆ.

ಈಗಾಗಲೇ ರೇಣುಕಾಸ್ವಾಮಿ ಕೊಲೆ ಕೇಸಲ್ಲಿ ಟ್ರಯಲ್ ಶುರುವಾಗಿದೆ. ರೇಣುಕಾಸ್ವಾಮಿ ತಂದೆ–ತಾಯಿ ಸಾಕ್ಷ್ಯ ದಾಖಲಿಸಲಾಗುತ್ತಿದೆ. ಈ ಸಂದರ್ಭ ಪ್ರಕರಣಕ್ಕೆ ಬಿಗ್ ಟ್ವಿಸ್ಟ್ ಸಿಕ್ಕಿದೆ. ಪ್ರಾಸಿಕ್ಯೂಷನ್ ವಿರುದ್ಧವೇ

ಪುಟ 2ಕ್ಕೆ

# ರಾಜ್ಯದ ಸಂತ್ರಸ್ತರಿಗೆ ಮಾತ್ರ ಮನೆ

**ಹೊರ ರಾಜ್ಯದ ಅಕ್ರಮ ನಿವಾಸಿಗಳಿಗೆ ಕೊಡಲ್ಲ: ಸಚಿವ ಜಮೀರ್**

**ಬೆಂಗಳೂರು:** ಕೋಗಿಲು ಲೇಔಟ್‌ನಲ್ಲಿ ಮನೆ ಕಳೆದುಕೊಂಡಿರುವ ರಾಜ್ಯದ ನಿವಾಸಿಗಳಿಗೆ ಮಾತ್ರ ಮನೆ ಕೊಡುತ್ತೇವೆ. ಹೊರಗಿನಿಂದ ಬಂದವರಿಗೆ ಮನೆ ಕೊಡುವುದಿಲ್ಲ ಎಂದು ವಸತಿ ಸಚಿವ ಜಮೀರ್ ಅಹ್ಮದ್ ತಿಳಿಸಿದರು.

ಕೋಗಿಲು ಲೇಔಟ್ ಅಕ್ರಮ ಮನೆ ತೆರವು ವಿಚಾರದಲ್ಲಿ ಪಾಕಿಸ್ತಾನ ಪ್ರತಿಕ್ರಿಯೆಗೆ ಸಚಿವ ಜಮೀರ್ ಕಿಡಿಕಾರಿದ್ದಾರೆ. ಪಾಕಿಸ್ತಾನಕ್ಕೂ ಈ ವಿಷಯಕ್ಕೂ ಏನು ಸಂಬಂಧ? ನಮ್ಮ ಬಗ್ಗೆ ಹೇಳೋಕೆ ಅರ‍್ಯಾರು? ಮುಸ್ಲಿಮರನ್ನ ನೋಡಿಕೊಳ್ಳೋಕೆ, ಅವರು ಯಾರು ನಮಗೆ ಹೇಳೋಕೆ. ಮೊದಲು ಪಾಕಿಸ್ತಾನದವರು ಅವರ ದೇಶ ನೋಡಿಕೊಳ್ಳಲಿ. ಪಾಕಿಸ್ತಾನದಲ್ಲಿ ಬಡತನ ಇದೆ. ಮೊದಲು ಅದನ್ನ ನೋಡಿಕೊಳ್ಳಲಿ ಎಂದು ವಾಗ್ದಾಳಿ ನಡೆಸಿದರು.

ಅಕ್ರಮ ಮನೆಗಳನ್ನ ಸಕ್ರಮ ಮಾಡ್ತಿರುವ ವಿಚಾರಕ್ಕೆ ಕುರಿತು ಮಾತನಾಡಿ, ನಾಳೆ ಸುದ್ದಿಗೋಷ್ಠಿ ಮಾಡಿ ಸಂಪೂರ್ಣ ಮಾಹಿತಿ ಕೊಡ್ತೀನಿ. ಡಾಕ್ಯುಮೆಂಟ್ ಪರಿಶೀಲನೆ ಮಾಡಿ ಅಂತ ಸಿಎಂ, ಡಿಸಿಎಂ ಅವರು ಸೂಚನೆ ನೀಡಿದ್ದಾರೆ. ನಮ್ಮ ಕರ್ನಾಟಕದವರು ಇದ್ದರೆ ಮಾತ್ರ ಮನೆ ಕೊಡೋದಕ್ಕೆ ತೀರ್ಮಾನ ಮಾಡಿದ್ದೇವೆ. ಆಚೆಯಿಂದ ಬಂದವರಿಗೆ ನಾವು ಮನೆ ಕೊಡುವುದಿಲ್ಲ ಎಂದು ತಿಳಿಸಿದರು.




ಪ್ರಕರಣದಲ್ಲಿ ವೇಣುಗೋಪಾಲ್ ಹಸ್ತಕ್ಷೇಪ ಇಲ್ಲ. ವೇಣುಗೋಪಾಲ್ ಅವರು ಟಿವಿಯಲ್ಲಿ ಹೀಗೆ ಬಂದಿದೆ ನೋಡಿ ಅಂತ ಹೇಳಿದ್ದಾರೆ. ನಮ್ಮದು ರಾಷ್ಟ್ರೀಯ ಪಕ್ಷ. ಅವರು ನಮ್ಮ ನಾಯಕರು. ಕರ್ನಾಟಕದಲ್ಲಿ ಹೀಗೆ ಸುದ್ದಿ ನಡೆಯುತ್ತಿದೆ ಅಂತ ಹೇಳಿದ್ದಾರೆ. ದಾಖಲಾತಿ ನೋಡಿ ಯಾರಿಗೂ ಅನ್ಯಾಯವಾಗಬಾರದು. ಆಧಾರ್, ರೇಷನ್ ಕಾರ್ಡ್, ಐಡಿ ಕಾರ್ಡ್ ಇದ್ದವರಿಗೆ ಮಾತ್ರ ಮನೆ ಕೊಡ್ತೀವಿ ಎಂದು ಹೇಳಿದರು.

# ಮುಸ್ಲಿಂ ಓಲೈಕೆ ರಾಜಕೀಯ ಮಾಡಲ್ಲ

## ಅರ್ಹರಿಗೆ ಮಾತ್ರ ಮನೆ ಮಂಜೂರು: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ

**ಬೆಂಗಳೂರು:** ರಾಜ್ಯದಲ್ಲಿ ಒತ್ತುವರಿ ಮಾಡಿದವರಿಗೆ ಗಿಫ್ಟ್ ಕೊಡಲು ನಾವು ತಯಾರಿಲ್ಲ. ಯಾವ ರೀತಿಯಲ್ಲೂ ಓಲೈಕೆ ರಾಜಕಾರಣ ಮಾಡುವ ಪ್ರಶ್ನೆ ಬರುವುದಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ನಗರದಲ್ಲಿ ಬಿಜೆಪಿ ನಾಯಕರ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಮುಸ್ಲಿಂಮರ ಓಲೈಕೆ ಮಾಡಲಾಗುತ್ತಿದೆ ಎನ್ನುವ ಪ್ರತಿಪಕ್ಷದ ಟೀಕೆಗಳಿಗೆ ತಿರುಗೇಟು ನೀಡಿದರು. ಸರ್ಕಾರ ಯಾರನ್ನೂ ಓಲೈಕೆ ಮಾಡುತ್ತಿಲ್ಲ. ಒತ್ತುವರಿಗೆ ಕಾರಣರಾದವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುತ್ತೇವೆ. ಕೆಲವರು ಹಣ ಸಂಗ್ರಹಿಸಿದ್ದಾರೆ ಎಂದು ನಿವಾಸಿಗಳು ಹೇಳಿಕೆ ನೀಡಿದ್ದಾರೆ. ಮಾನವೀಯತೆ ದೃಷ್ಟಿಯಿಂದ ಯಾರಿಗೆ ಅರ್ಹತೆ ಇದೆಯೋ ಅವರಿಗೆ ಪ್ರಧಾನಮಂತ್ರಿ ಆವಾಸ್ ಯೋಜನೆ ಮೂಲಕ ಮನೆ ನೀಡಲಾಗುವುದು ಎಂದು ಹೇಳಿದರು.



ಈ ಹಿಂದೆ ಕೆಲವು ಭಾಗಗಳಲ್ಲಿ ಹಕ್ಕುಪತ್ರ ನೀಡಿದ್ದ ಬಗ್ಗೆ ಪರಿಶೀಲನೆ ನಡೆಸಲು ತಿಳಿಸಿದ್ದೇನೆ. ಹೊರಗಿನಿಂದ ಬಂದವರು ಸಹ ಹೊಸದಾಗಿ ಸೇರಿಕೊಂಡಿದ್ದಾರೆ. ನೈಜ ಮತದಾರರು ಎಷ್ಟಿದ್ದಾರೆ ಎಂಬ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿ, ಅವರಿಗೆ ಪುನರ್ವಸತಿ ಕಲ್ಪಿಸಲಾಗುವುದು ಎಂದು ತಿಳಿಸಿದರು.

ಕರ್ನಾಟಕದ ವಿಚಾರದಲ್ಲಿ ಕೇರಳದ ಹಸ್ತಕ್ಷೇಪ ಬೇಡ ಎನ್ನುವ ಹೇಳಿಕೆಯನ್ನು ಕೇರಳದ ಸಂಸದರು ಖಂಡಿಸಿರುವ ಬಗ್ಗೆ ಕೇಳಿದಾಗ, ನಾವು ಉತ್ತಮವಾಗಿ ಸರ್ಕಾರವನ್ನು ನಡೆಸಿಕೊಂಡು ಹೋಗುತ್ತಿದ್ದೇವೆ. ಅವರು ಏನು

ಪುಟ 2ಕ್ಕೆ

### ಕೋಗಿಲು 2016ಕ್ಕೆ ಹಿಂದೆ ಖಾಲಿ ಜಾಗ: ಸ್ಯಾಟಲೈಟ್ ಚಿತ್ರ ಬಿಡುಗಡೆ

**ಬೆಂಗಳೂರು:** ಯಲಹಂಕದ ಕೋಗಿಲು ಬಡಾವಣೆಯಲ್ಲಿ ಕಳೆದ 25 ವರ್ಷಗಳಿಂದ ವಾಸ ಮಾಡುತ್ತಿದ್ದೇವೆ ಎಂಬ ಸ್ಥಳೀಯರ ಆರೋಪಕ್ಕೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಸ್ಯಾಟಲೈಟ್ ಫೋಟೋ ಬಿಡುಗಡೆ ಮಾಡುವ ಮೂಲಕ ತಿರುಗೇಟು ನೀಡಿದೆ.

ಈ ಸ್ಯಾಟಲೈಟ್ ಫೋಟೋಗಳಲ್ಲಿ 2016ರ ಮೊದಲು ಆ ಪ್ರದೇಶದಲ್ಲಿ ಯಾವುದೇ ಮನೆಗಳೂ ಇರಲಿಲ್ಲ ಎಂಬುದನ್ನು ಸ್ಪಷ್ಟಪಡಿಸಿವೆ.

ವಾಸಿಮ್ ಎಂಬ ವ್ಯಕ್ತಿ 1.5ರಿಂದ 2 ಲಕ್ಷ ರೂ. ನೀಡಿ ಮನೆ ನಿರ್ಮಿಸಿಕೊಂಡಿರುವುದಾಗಿ

ಪುಟ 2ಕ್ಕೆ

## ಮುಸ್ಲಿಂ ಓಲೈಕೆ ರಾಜಕೀಯ ಮಾಡಲ್ಲ

ಬೇಕಾದರೂ ಹೇಳಿಕೆ ನೀಡಲಿ. ನಾವು ಅಕ್ರಮ ಒತ್ತುವರಿಗೆ ಅವಕಾಶ ನೀಡುವುದಿಲ್ಲ. ಅವರು ಈ ಹಿಂದೆ ಕೊಟ್ಟ ಭರವಸೆ, ಪ್ರವಾಹದ ಸಂದರ್ಭದಲ್ಲಿ ನೀಡಿದ ಮಾತನ್ನೇ ಈಡೇರಿಸಿಲ್ಲ. ಅಂತಹವರು ನಮಗೆ ಹೇಳುವ ಅವಶ್ಯಕತೆ ಇಲ್ಲ. ನಮ್ಮ ರಾಜ್ಯದ ವಿಚಾರವನ್ನು ಹೇಗೆ ನಿಭಾಯಿಸಬೇಕು ಎಂಬುದು ನಮಗೆ ತಿಳಿದಿದೆ ಎಂದು ತಿರುಗೇಟು ನೀಡಿದರು.

## ಸ್ಯಾಟಲೈಟ್ ಚಿತ್ರ ಬಿಡುಗಡೆ

ಹೇಳಿ ಹಣ ವಸೂಲಿ ಮಾಡಿರುವ ವಿಚಾರ ಉಪ ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಸ್ಥಳಕ್ಕೆ ಭೇಟಿ ನೀಡಿದಾಗ ಉಲ್ಬಣಗೊಂಡಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ ಡಿಕೆ.ಶಿವಕುಮಾರ್ ಅವರು, ಈ ಕುರಿತು ತನಿಖೆ ನಡೆಸುವುದಾಗಿ ನಿವಾಸಿಗಳಿಗೆ ಭರವಸೆ ನೀಡಿದರು.

ರಾಜೀವ್ ಗಾಂಧಿ ವಸತಿ ನಿಗಮದ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ವಿವರಗಳನ್ನು ಸಂಗ್ರಹಿಸುತ್ತಿದ್ದಾರೆ. ಈ ಬಗ್ಗೆ ರಾಜೀವ್ ಗಾಂಧಿ ವಸತಿ ನಿಗಮದ ಹಿರಿಯ ಅಧಿಕಾರಿ ಪ್ರತಿಕ್ರಿಯೆ ನೀಡಿ, ರಾಜೀವ್ ಗಾಂಧಿ ವಸತಿ ನಿಗಮ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮತ್ತು ಕಂದಾಯ ಇಲಾಖೆಗೆ ಸಮೀಕ್ಷೆ ನಡೆಸಲು ಸರ್ಕಾರ ನಿರ್ದೇಶನ ನೀಡಿದೆ. ಸ್ಥಳದ ದಾಖಲೆಗಳು ಮತ್ತು ಜಿಪಿಎಸ್ ಸ್ಥಳವನ್ನು ಎರಡು ದಿನಗಳಲ್ಲಿ ಪರಿಶೀಲಿಸಲಾಗುವುದು ಎಂದು ತಿಳಿಸಿದರು.

## ಕೈ ಅಭ್ಯರ್ಥಿಗಳ ಘೋಷಣೆ

ಬೆಂಗಳೂರು ಶಿಕ್ಷಕರ ಕ್ಷೇತ್ರದಿಂದ ಪುಟ್ಟಣ್ಣ ಅವರಿಗೆ ಟಿಕೆಟ್ ಘೋಷಣೆ ಮಾಡಲಾಗಿದೆ.

## ಶಾಸಕ ಪಪ್ಪಿಗೆ ಜಾಮೀನು

ಒಟ್ಟು 14.46 ಕೋಟಿ ರೂ. ಸೇರಿದಂತೆ 55 ಕೋಟಿ ರೂ. ಹಣದ ಜೊತೆಗೆ 5 ಐಷಾರಾಮಿ ಕಾರುಗಳನ್ನೂ ಸೀಜ್ ಮಾಡಲಾಗಿದೆ.

## ಮೋಜು, ಮಸ್ತಿಗೆ ಬ್ರೇಕ್

ಅಡ್ಡಿಯುಂಟು ಮಾಡುತ್ತಿದ್ದರು. ಹೀಗಾಗಿ ಈ ಬಾರಿ ಬಂಡೀಪುರ ಅಭಯಾರಣ್ಯದಲ್ಲಿ ನೂತನ ವರ್ಷಾಚರಣೆಗೆ ಕಡಿವಾಣ ಹಾಕಲಾಗಿದೆ. ವರ್ಷದ ಕೊನೆಯ ದಿನ ಡಿಸೆಂಬರ್ 31 ಹಾಗೂ ಹೊಸ ವರ್ಷದ ಮೊದಲ ದಿನವಾದ ಜನವರಿ 1ರಂದು ಬಂಡೀಪುರದ ಅರಣ್ಯ ಇಲಾಖೆ ಕಾಟೇಜ್‌ಗಳಲ್ಲಿ ವಾಸ್ತವ್ಯಕ್ಕೆ ಬ್ರೇಕ್ ಹಾಕಲಾಗಿದೆ.

## ರೆಸಾರ್ಟ್‌ಗಳಿಗೂ ಬಿಗಿ ನಿಯಮ

ಬಂಡೀಪುರದ ಸಿಎಫ್ ಪ್ರಭಾಕ ರನ್ ತಿಳಿಸಿದ್ದಾರೆ. ನಿಮಯ ಪಾಲನೆ ಮಾಡದವರ ವಿರುದ್ಧ ಕಾನೂನು ಕ್ರಮಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

## ಚಾ.ಬೆಟ್ಟದಲ್ಲಿ ಅಗತ್ಯ ವ್ಯವಸ್ಥೆ ಕಲ್ಪಿಸಿ

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್, ಚಾಮುಂಡಿ ಬೆಟ್ಟ ಪ್ರಾಧಿಕಾರ ಕಾರ್ಯದರ್ಶಿ ರೂಪ, ದೇವಸ್ಥಾನದ ಅರ್ಚಕರಾದ ಶಶಿಶೇಖರ್ ದೀಕ್ಷಿತ್ ಭಾಗವಹಿಸಿದ್ದರು.

## ಸುರಕ್ಷತೆಗೆ ಕಾಳಜಿ ವಹಿಸಿ

ಮಾಡಿಕೊಂಡಿದ್ದಾರೆ ಎಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದರೆ.

ಯಾವುದೇ ಅಹಿತಕರ ಘಟನೆಗಳು, ಜೀವಹಾನಿಯಾಗದಂತೆ ಸಡಗರದಿಂದ ಹೊಸ ವರ್ಷವನ್ನು ಸ್ವಾಗತಿಸಲು ಬೆಂಗಳೂರನ್ನು ಸಜ್ಜುಗೊಳಿಸಲಾಗುತ್ತಿದೆ. ಸಂಭ್ರಮಾಚರಣೆಯ ಸಂದರ್ಭದಲ್ಲಿ ಪೊಲೀಸರು ನೀಡುವ ಸಲಹೆ, ಸೂಚನೆಗಳನ್ನು ತಪ್ಪದೇ ಪಾಲಿಸಿ ಪೊಲೀಸರೊಂದಿಗೆ ಸಹಕರಿಸಿ ಎಂದೂ ಮನವಿ ಮಾಡಿದ್ದಾರೆ.

## ಮನೆಯೂಟ ನೀಡಲು ಅನುಮತಿ

ರೇಣುಕಾಸ್ವಾಮಿ ತಾಯಿ ರತ್ನಪ್ರಭಾ ಹೇಳಿಕೆ ನೀಡಿದ್ದಾರೆ. ಹಿಂದಿನ ಹೇಳಿಕೆಗೂ, ಈಗಿನ ಹೇಳಿಕೆಗೂ ದ್ವಂದ್ವ ಹಿನ್ನೆಲೆ ರತ್ನಪ್ರಭಾ ಅವರನ್ನು ಪ್ರತಿಕೂಲ ಸಾಕ್ಷ್ಯವಾಗಿ ಪರಿಗಣಿಸಲು ಎಸ್‌ಪಿಪಿ ಮನವಿ ಮಾಡಿದ್ದಾರೆ. ಕೋರ್ಟ್‌ಗೆ ಎಸ್‌ಪಿಪಿ ಪ್ರಸನ್ನಕುಮಾರ್ ಸಲ್ಲಿಸಿದ ಮನವಿ ಬಗ್ಗೆ ಸೋಮವಾರ ಜ.5ರಂದುನಿರ್ಧಾರ ಆಗಲಿದೆ.

## ವೈಭವದ ವೈಕುಂಠ ಏಕಾದಶಿ

ಮಾಡಿದ್ದು ವಿಶೇಷ. ಲೋಕ ಕಲ್ಯಾಣಕ್ಕಾಗಿ ಹಾಗೂ ದೇಶದ ಸುಭಿಕ್ಷೆಗಾಗಿ ದೇವಸ್ಥಾನದಲ್ಲಿ ಹೋಮ, ನಿರಂತರ ಚತುರ್ವೇದ ಪಾರಾಯಣ, ವಿಷ್ಣು ಸಹಸ್ರನಾಮ ಮತ್ತು ಭಗವದ್ಗೀತೆ ಪಾರಾಯಣಗಳನ್ನು ಹಮ್ಮಿಕೊಳ್ಳಲಾಗಿತ್ತು.

ಮೊದಲ ಪುಟದಿಂದ

## ಸರ್ಕಾರಿ ಶಾಲೆ ಮುಚ್ಚಲ್ಲ

ಉತ್ತೀರ್ಣ ಅಂಕ ಕಡಿಮೆ ಮಾಡಿರುವುದಕ್ಕೆ ಬರಗೂರು ಅವರ ವಿರೋಧ ಇದೆ. ಬೇರೆ ರಾಜ್ಯದಲ್ಲಿ ಏನಿದೆ ಅಂತ ಬರಗೂರು ರಾಮಚಂದ್ರಪ್ಪ ನೋಡಿಕೊಂಡು ಬರಲಿ. ಬರಗೂರು ಅವರಿಗೆ ಹೇಳ್ತೀನಿ. ಬೇರೆ ಅವರ ಮಾತು ಕೇಳಿ ಅವರು ಹೇಳಿಕೆ ಕೊಡಬಾರದು ಎಂದರು.

ಬರಗೂರು ರಾಮಚಂದ್ರಪ್ಪ ಹೇಳಿಕೆ ಹಿಂದೆ ಕೆಲವರು ಇದ್ದಾರೆ. ವ್ಯವಹಾರಿಕವಾಗಿ ಶಿಕ್ಷಣ ಸಂಸ್ಥೆ ನಡೆಸುವರು ಇರುತ್ತಾರೆ. ಮಕ್ಕಳಿಗೆ ಉಚಿತ, ಗುಣಮಟ್ಟದ ಶಿಕ್ಷಣ ಕೊಡೋದು ನಮ್ಮ ಸರ್ಕಾರದ ಗ್ಯಾರಂಟಿ. ಮಕ್ಕಳನ್ನು ಇಟ್ಟುಕೊಂಡು ಆಟ ಆಡೋದು ಬೇಡ ಎಂದು ತಿಳಿಸಿದರು.

## ಮುಸ್ಲಿಂ ತುಷ್ಟೀಕರಣದ ಶರವೇಗ

ಗ್ಯಾರಂಟಿ ಹಣಕ್ಕಾಗಿ ಕಾಯುತ್ತಿದ್ದಾರೆ. ಆದರೆ, ಸರ್ಕಾರ ಕೋಗಿಲು ಅತಿಕ್ರಮಣದಾರರಿಗೆ ಮಾತ್ರ ಕ್ಷಣಾರ್ಧದಲ್ಲಿ ಪರಿಹಾರ, ಪರ್ಯಾಯ ವ್ಯವಸ್ಥೆಗೆ ಮುಂದಾಗಿದೆ. ಇದು ಕಾಂಗ್ರೆಸ್ ಸರ್ಕಾರದ ಮಿತಿಮೀರಿದ ಧರ್ಮ ಓಲೈಕೆ ಆಡಳಿತವನ್ನು ಪ್ರದರ್ಶಿಸುತ್ತಿದೆ ಎಂದು ಕಿಡಿಕಾರಿದರು.

ಸರ್ಕಾರಿ ಭೂಮಿ ಅತಿಕ್ರಮಣದಾರರಿಗೆ ಮನೆ ಕಟ್ಟಿಕೊಳ್ಳಲು ನೆರವು ನೀಡುವುದಾಗಿ ಸಹ ಘೋಷಿಸಿದೆ. ಪ್ರತಿ ಮನೆಗೆ 8 ರಿಂದ 11 ಲಕ್ಷ ರೂ. ಮತ್ತು ಸಬ್ಸಿಡಿ ನೀಡುವುದಾಗಿ ಹೇಳಿದೆ. ಇದೊಂದು ಬಾರಿ ಪರಿಹಾರ ಕಲ್ಪಿಸಲಾಗುತ್ತದೆ ಎಂದಿರುವುದು ವಿಪರ್ಯಾಸ. ಸರ್ಕಾರದ್ದು ಅದ್ಯಾವ ರೀತಿಯ ಪರಿಹಾರ ಕ್ರಮ ಎಂದು ಜೋಶಿ ಪ್ರಶ್ನಿಸಿದರು. ಕರ್ನಾಟಕದ ಕಾಂಗ್ರೆಸ್ ಸರ್ಕಾರ ಕೇವಲ ಒಂದು ಧರ್ಮದ ಓಲೈಕೆಯಲ್ಲೇ ಮುಳುಗಿದೆ. ತುಷ್ಟೀಕರಣಕ್ಕೆ ಶರವೇಗದಲ್ಲಿ ಪರಿಹಾರ ಕ್ರಮಕೈಗೊಂಡಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

## ಅಭಿವೃದ್ಧಿ ಕಾಮಗಾರಿಗೆ ಶಾಸಕರ ಚಾಲನೆ



ಮೈಸೂರು: ಮಹಾನಗರ ಪಾಲಿಕೆಯ ವಾರ್ಡ್ ನಂ.23 ಮತ್ತು 24ರಲ್ಲಿ ವಿವಿಧ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಹರೀಶ್ ಗೌಡ ಚಾಲನೆ ನೀಡಿದರು.

ವಾರ್ಡ್ ನಂ.23ರ ಸೀತಾವಿಲಾಸ ರಸ್ತೆಯಿಂದ ರಾಮವಿಲಾಸ ರಸ್ತೆಯವರೆಗೂ ಚರಂಡಿ ಹಾಗೂ ಪುಟ್‌ಪಾತ್ ಅಭಿವೃದ್ಧಿ ಕಾಮಗಾರಿ ಹಾಗೂ ವಾರ್ಡ್ ನಂ.24ರ ಅಶೋಕ ಮುಖ್ಯರಸ್ತೆ, 15ನೇ ಪಶ್ಚಿಮ ಕ್ರಾಸ್‌ನಿಂದ ಅಜಾಮ್ ಮಸೀದಿ ಯವರೆಗೆ ಮತ್ತು ಅಡ್ಡರಸ್ತೆಗಳಿಗೆ ಡಾಂಬರೀಕರಣ ಕಾಮಗಾರಿಗೆ ಎಸ್.ಎಫ್.ಸಿ. ವಿಶೇಷ ಅನುದಾನದಲ್ಲಿ ಅಂದಾಜು ಮೊತ್ತ 120.00 ಲಕ್ಷಗಳ ವೆಚ್ಚದ ಕಾಮಗಾರಿಗೆ ಗುದ್ದಲಿ ಪೂಜೆ ನೇರವೇರಿಸಿದರು. ಬಳಿಕ ಮೊಹಲ್ಲಾದ ನಿವಾಸಿಗಳ ಇತರೆ ಸಮಸ್ಯೆಗಳನ್ನು ಆಲಿಸಿ ಶೀಘ್ರ ಬಗೆಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಈ ಸಂಧರ್ಭದಲ್ಲಿ ವಾರ್ಡ್ ಅಧ್ಯಕ್ಷ ಆನಂದ್, ಮುಖಂಡರಾದ ಮಹದೇವ್, ಜ್ಞಾನೇಶ್ , ಲೋಕೇಶ್,ಮಂಜು, ಜಗದೀಶ್, ಶ್ರೀನಿವಾಸ್, ಪವನ್, ನಿತಿನ್, ಶಂಕರ್, ನಾಗ ರಾಜ್, ಉತ್ತನಹಳ್ಳಿ ಶಿವಣ್ಣ, ನಂಜುಂಡಿ, ನವೀನ್,ಮಂಜುಳ, ಮಂಗಳ, ಶಾಂತಿ, ಪಾಲಿಕೆಯ ಅಧಿಕಾರಿಗಳಾದ ವೆಂಕಟೇಶ್, ಧನುಷ್, ಕೃಷ್ಣಮೂರ್ತಿ ಸೇರಿ ಇತರರು ಭಾಗವಹಿಸಿದ್ದರು.

# ನಗರಸಭೆ ವ್ಯಾಪ್ತಿ ನಂತರ ಇ-ಖಾತೆ

## ಬೀಡಿ ಕಾರ್ಮಿಕರ ಸಂಘದ ಅಧ್ಯಕ್ಷ ಜಿಯಾವುಲ್ಲಾರ ಆರೋಪಕ್ಕೆ ಪ್ರತಿಕ್ರಿಯೆ

ರಾಮನಗರ: ಬೀಡಿ ಕಾಲೋನಿ ಹುಣಸನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿದೆ. ನಗರಸಭೆ ವ್ಯಾಪ್ತಿಗೆ ಒಳಪಟ್ಟಿಲ್ಲ. ಈ ತಾಂತ್ರಿಕ ಕಾರಣದಿಂದಾಗಿ ಬೀಡಿ ಕಾಲೋನಿಯಲ್ಲಿರುವ ಆಸ್ತಿಗಳಿಗೆ ಇ-ಖಾತ ಗಳು ಸೃಜನೆಯಾಗುತ್ತಿಲ್ಲ. ಈ ವಿಚಾರದಲ್ಲಿ ಜನರ ದಿಕ್ಕು ತಪ್ಪಿಸುವುದು ಸರಿಯಲ್ಲ ಎಂದು ನಗರಸಭಾ ಧ್ಯಕ್ಷ ಕೆ.ಶೇಷಾದ್ರಿ (ಶಶಿ) ಸ್ಪಷ್ಟಪಡಿಸಿದರು.

ನಗರಸಭೆಯ ಸಭಾಂಗಣದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಅವರು ಮಾತನಾಡಿದರು. ಕೆಪಿಸಿಸಿ ಉಪಾಧ್ಯಕ್ಷರೂ ಆಗಿರುವ ಬೀಡಿ ಕಾರ್ಮಿಕರ ವಿವಿ ದೋದ್ದೇಶ ಸಹಕಾರ ಸಂಘ ನಿಯಮಿತದ ಅಧ್ಯಕ್ಷ ಸೈಯದ್ ಜಿಯಾವುಲ್ಲಾ ಇತ್ತೀಚೆಗೆ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಬೀಡಿ ಕಾಲೋನಿಯ ಆಸ್ತಿಗಳಿಗೆ ಅಸಲಿ ಹಕ್ಕುಪತ್ರ ವಿತರಿಸದಿದ್ದರೆ ಪ್ರತಿಭಟನೆ ನಡೆಸುವುದಾಗಿ ನೀಡಿದ್ದ ಎಚ್ಚರಿಕೆ ಹಿನ್ನೆಲೆಯಲ್ಲಿ ಅವರು ಪತ್ರಿಕಾಗೋಷ್ಠಿ ಆಯೋಜಿಸಿದ್ದರು.

### 20 ವರ್ಷಗಳಿಂದ ಇದೇ ಕಥೆ!

13.21 ಎಕರೆ ಪ್ರದೇಶದಲ್ಲಿರುವ ಬೀಡಿ ಕಾರ್ಮಿಕರ ಕಾಲೋನಿ ಶಿಡ್ಲಕಲ್ಲು ಗ್ರಾಮದ ಸರ್ವೆ ಸಂಖ್ಯೆ 19/1, 20/2, 21, 22/1 ಮತ್ತು 25/2ರಲ್ಲಿದೆ. 2005ರಲ್ಲಿ ಎಡಿಬಿ ಪ್ರಾಯೋಜಕತ್ವದಲ್ಲಿ ಕೆ.ಯು.ಐ.ಡಿ ಯೋಜನೆಯ ಮೂಲಕ ಇಲ್ಲಿ ಲೇಔಟ್ ಸ್ಥಾಪಿಸಲು ಸರ್ಕಾರ ಉದ್ದೇಶಿಸಿತ್ತು. ರಾಮನಗರ □ ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರ (ಈಗ ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ) ಇಲ್ಲಿ ನಿವೇಶನಗಳನ್ನು ವಿಂಗಡಿಸಿತ್ತು. ಆದರೆ ಸದರಿ ಭೂಮಿ ಅಂದು ನಗರದಿಂದ ದೂರ ಇದ್ದಿದ್ದರಿಂದ ನಿವೇಶನಗಳನ್ನು ಪಡೆಯಲು ಸಾರ್ವಜನಿಕರಿಂದ ಸ್ಪಂದನೆ ಸಿಗಲಿಲ್ಲ.

ಸದರಿ ಭೂಮಿಯನ್ನು ಅಂದಿನ ನಗರಸಭೆಯ ತದ ನಂತರ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ ಇಲ್ಲಿ ಆರ್ಥಿಕವಾಗಿ ಬಡ ಕುಟುಂಬಗಳಿಗೆ 20*30 ಅಳತೆಯ ನಿವೇಶನಗಳನ್ನು ವಿತರಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತು. ಸರ್ಕರದ ಒಪ್ಪಿಗೆಯ ನಂತರ ಲೇಔಟ್ ಅನ್ನು ರಾಜೀವ್ ಗಾಂಧಿ ವಸತಿ ನಿಗಮ ಖರೀದಿಸಿತು ಎಂದು 20 ವರ್ಷಗಳ ಹಿಂದಿನ ವಿಚಾರಗಳನ್ನು ಅವರು ವಿವರಿಸಿದರು.



### ಪ್ರತಿಭಟನೆಯ ಅವಶ್ಯಕತೆ ಇಲ್ಲ !

ತಾವು ಅಧ್ಯಕ್ಷರಾಗಿ ಅಧಿಕಾರವಹಿಸಿಕೊಂಡ ನಂತರ ರಾಜೀವ್ ಗಾಂಧಿ ವಸತಿ ನಿಗಮದವತಿಯಿಂದ ನೀಡಿರುವ ಹಕ್ಕುಪತ್ರಗಳಿಗೆ ನಗರಸಭೆ ದೃಢೀಕರಿಸಿ ನೀಡಿದೆ. ಬೀಡಿ ಕಾಲೋನಿ ನಗರಸಭೆ ವ್ಯಾಪ್ತಿಗೆ ಒಳಪಟ್ಟ ನಂತರ ಇ-ಖಾತಾಗಳನ್ನು ಮಾಡಿಕೊಡಲು ನಗರಸಭೆ ಬದ್ದವಾಗಿದೆ. ಹೀಗಾಗಿ ಕೆಪಿಸಿಸಿ ಉಪಾಧ್ಯಕ್ಷರೂ ಆಗಿರುವ ಬೀಡಿ ಕಾರ್ಮಿಕರ ವಿವಿದೋದ್ದೇಶ ಸಹಕಾರ ಸಂಘ ನಿಯಮಿತದ ಅಧ್ಯಕ್ಷ ಸೈಯದ್ ಜಿಯಾವುಲ್ಲಾ ಅವರು ಪ್ರತಿಭಟನೆಯನ್ನು ಕೈಬಿಡಬೇಕು. ಅವರು ಸಹ ನಗರಸಭೆಯ ಅಧ್ಯಕ್ಷರಾಗಿದ್ದರು. ತಾಂತ್ರಿಕ ಕಾರಣ ಇ-ಖಾತೆಗಳನ್ನು ಕೊಡಲಾಗುತ್ತಿಲ್ಲ. ಇಲ್ಲಿ ರಾಜಕೀಯ ಮಾಡುವುದು ಅಥವಾ ಜನರ ದಿಕ್ಕು ತಪ್ಪಿಸುವ ಕೆಲಸ ಆಗಬಾರದು ಎಂದು ಅವರು ಮನವಿ ಮಾಡಿದರು.

ಮೂಲಕವೇ ಗುರುತಿಸಲಾಗಿದೆ. ಬಹುಶಃ ಆಗ ಅಧಿಕಾರದಲ್ಲಿ ಇದ್ದವರು ನಗರಸಭಾ ವ್ಯಾಪ್ತಿಯಲ್ಲಿರು ವುದನ್ನ ಗಮನಿಸಿಲ್ಲ. 20 ವರ್ಷಗಳಲ್ಲಿ ಈ ಭೂಮಿಯನ್ನು ನಗರಸಭೆ ವ್ಯಾಪ್ತಿಗೆ ತರಲು ಪ್ರಯತ್ನಗಳು ನಡೆದಿವೆಯೋ ಏನೋ ಗೊತ್ತಿಲ್ಲ. ಮೂಲ ದಾಖಲೆಗಳನ್ನು ಕೊಡುವಂತೆ ರಾಜೀವ್ ಗಾಂಧಿ ವಸತಿ ನಿಗಮಕ್ಕೆ ನಗರಸಭೆವತಿಯಿಂದ ಪತ್ರ ಬರೆಯಲಾಗಿತ್ತು. ಆದರೆ ದಾಖಲೆಗಳು ಜಿಲ್ಲಾಡಳಿತದ ಬಳಿ ಕೇಳುವಂತೆ ಮತ್ತು ಹಕ್ಕುಪತ್ರ ವಿತರಣೆ ಕಂದಾಯ ಇಲಾಖೆಗೆ ಒಳಪಟ್ಟಿದೆ ಎಂದು ನಿಗಮ ಹಿಂಬರಹ ಕೊಟ್ಟಿದೆ. ಬೀಡಿ ಕಾಲೋನಿ ನಗರಸಭೆ ವ್ಯಾಪ್ತಿಯಲ್ಲಿ ಇಲ್ಲದಿದ್ದರೂ ಮಾನವೀಯ ದೃಷ್ಟಿಯಿಂದ ಅಲ್ಲಿ ಕಸ ಸಂಗ್ರಹಣೆ ಮಾಡಿದ್ದೇವೆ ಎಂದು ಕೆ.ಶೇಷಾದ್ರಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ನಗರಸಭೆಯ ನೂತನ ಉಪಾಧ್ಯಕ್ಷೆ ಗಿರಿಜಮ್ಮ, ಸ್ಥಾಯಿ ಸಮಿತಿ ಅಧ್ಯಕ್ಷ ಫೈರೋಜ್ ಪಾಷ, ನಗರಸಭಾ ಸದಸ್ಯರು ಮತ್ತು ಆಯುಕ್ತ ಡಾ.ಜಯಣ್ಣ ಉಪಸ್ಥಿತರಿದ್ದರು.

### ಸೈಯದ್ ಜಿಯಾವುಲ್ಲಾರ ಆರೋಪವೇನು?

ನಗರಸಭೆಯಲ್ಲಿದ್ದ ಅಸಲಿ ಹಕ್ಕು ಪತ್ರಗಳು ಕಳುವಾಗಿದೆ ನಿಮ್ಮ ಬಳಿ ಇರುವ ಜೆರಾಕ್ಸ್ ಪ್ರತಿಗಳನ್ನು ಕೊಡಿ ಎಂದು ನಗರಸಭೆಯ ಅಧಿಕಾರಿಗಳು ನನ್ನಿಂದ ಪಡೆದುಕೊಂಡಿದ್ದಾರೆ. ಆ ಜೆರಾಕ್ಸ್ ಪ್ರತಿಗಳನ್ನೇ ಪುನಃ ಕಲರ್ ಜೆರಾಕ್ಸ್ ಮಾಡಿಸಿ 2025ರ ಮಾರ್ಚ್ 8ರಂದು ಬೀಡಿ ಕಾರ್ಮಿಕರಿಗೆ ನೀಡಿದ್ದಾರೆ. ಈ ಕಲರ್ ಜೆರಾಕ್ಸ್ ಹಕ್ಕುಪತ್ರಗಳಿಂದ ರಿಜಿಸ್ಟ್ರೇಷನ್ ಆಗಲಿ, ಬ್ಯಾಂಕುಗಳಲ್ಲಿ ಸಾಲ ಸೌಲಭ್ಯವಾಗಲಿ ಸಿಗುತ್ತಿಲ್ಲ. ಆದ್ದರಿಂದ ಬೀಡಿ ಕಾರ್ಮಿಕರು ಅಸಲಿ ಹಕ್ಕುಪತ್ರ ನೀಡುವಂತೆ ಒತ್ತಡ ಹೇರುತ್ತಿದ್ದಾರೆ. ಜಿಲ್ಲಾಡಳಿತ, ಶಾಸಕರು ಹಾಗೂ ನಗರಸಭೆ 15 ದಿನದಳೊಗೆ ಅಸಲಿ ಹಕ್ಕು ಪತ್ರ ವಿತರಿಸಲು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಬೀದಿ ಹೋರಾಟದ ಜೊತೆಗೆ ಕಾನೂನು ಹೋರಾಟವನ್ನು ನಡೆಸಲಾಗುವುದು ಎಂದು ಸೈಯದ್ ಜಿಯಾವುಲ್ಲಾ ಇತ್ತೀಚೆಗೆ ಎಚ್ಚರಿಸಿದ್ದರು.

# ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷಗಾದಿಗೆ ಏರಿದ ದೊಡ್ಡಸ್ವಾಮೇಗೌಡ

## ಸಿದ್ದು ಸೂಚನೆ ಬೆನ್ನಲ್ಲೇ ಅವಿರೋಧ ಆಯ್ಕೆ, ಉಪಾಧ್ಯಕ್ಷರಾದ ವೈ.ಎನ್.ಜಯರಾಮು

**ಮೈಸೂರು:** ಮೈಸೂರು ಮತ್ತು ಚಾಮರಾಜ ನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (ಎಂಸಿಡಿಸಿಸಿ) ಅಧ್ಯಕ್ಷರಾಗಿ ದೊಡ್ಡಸ್ವಾಮೇ ಗೌಡ, ಉಪಾಧ್ಯಕ್ಷ ರಾಗಿ ವೈ.ಎನ್.ಜಯ ರಾಮು ಅವಿರೋಧವಾಗಿ ಆಯ್ಕೆಯಾದರು.

ಆಡಳಿತ ಮಂಡಳಿಯ 13 ನಿರ್ದೇಶಕರ ಸ್ಥಾನಗಳಿಗೆ ನಡೆದಿದ್ದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತರು ಹತ್ತು. ಜಾ.ದಳ-ಬಿಜೆಪಿ ಬೆಂಬ ಲಿತ ಮೂವರು ಆಯ್ಕೆಯಾಗಿದ್ದರು. ಕಾಂಗ್ರೆಸ್ ಬೆಂಬಲಿತರಾಗಿ ಅರಣ್ಯ, ವಸತಿ ಮತ್ತು ವಿಹಾ ರಧಾಮಗಳ ಸಂಸ್ಥೆ ಅಧ್ಯಕ್ಷರೂ ಆದ ಶಾಸಕ ಅನಿಲ್ ಚಿಕ್ಕಮಾದು, ಎಂಎಸ್‌ಐಎಲ್ ಅಧ್ಯಕ್ಷರೂ ಆದ ಶಾಸಕ ಸಿ.ಪುಟ್ಟರಂಗಶೆಟ್ಟಿ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್, ಮಾಜಿ ಶಾಸಕ ಆರ್. ನರೇಂದ್ರ, ಕೆ.ಆರ್.ನಗರದ ಶಾಸಕ ಡಿ.ರವಿ ಶಂಕರ್ ಅವರ ತಂದೆ ದೊಡ್ಡಸ್ವಾಮೇಗೌಡ, ಕರ್ನಾ ಟಕ ರಾಜ್ಯ ಸಹಕಾರ ಪತ್ತಿನ



ಮಹಾಮಂಡಳ ಅಧ್ಯಕ್ಷ ಎಸ್. ಚಂದ್ರಶೇಖರ್, ಮುಖ್ಯಮಂತ್ರಿ ಸಿದ್ದರಾ ಮಯ್ಯ ಅವರ ಸಂಬಂಧಿ ಎಂ.ಕೆಂಚಪ್ಪ ಶಾಸಕ ತನೀರ್ ಸೇಠ್ ಆಪ್ತ ಜಿ.ಎನ್. ಮಂಜುನಾಥ್, ವೈ.ಎನ್. ಜಯರಾಮು, ಇ.ಷಿ.ಲೋಕೇಶ್ ಆಯ್ಕೆಯಾಗಿದ್ದರು

ಜಾ.ದಳ-ಬಿಜೆಪಿ ಬೆಂಬಲಿತರಾಗಿ ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್ ಗೌಡ, ಮೈಮುಲ್ ನಿರ್ದೇಶಕ ಬಿ.ಎನ್.ಸದಾನಂದ, ತಿ.ನರಸೀಪುರದ ಟಿ.ಪಿ.ಬೋರೇಗೌಡ ಆಯ್ಕೆಯಾಗಿದ್ದರು. ಕಾಂಗ್ರೆಸ್ ಬೆಂಬಲಿತರು ಹತ್ತು ಸ್ಥಾನಗಳನ್ನು ಗೆದ್ದಿರುವ ಕಾರಣ ನಾಮನಿರ್ದೇಶನ ಅಥವಾ ಸರ್ಕಾರದ ಪ್ರತಿನಿಧಿಗಳ ಬೆಂಬ ಲದ ಅಗತ್ಯವಿಲ್ಲದೆ ಅಧಿಕಾರ ಹಿಡಿದರು.

ಅಪ್ಪನ ಪರ ಮಗನ ಬ್ಯಾಟಿಂಗ್: ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಸ್ಥಾನಕ್ಕೆ ತಮ್ಮ ತಂದೆ ದೊಡ್ಡಸ್ವಾಮೇಗೌಡರನ್ನು ತಂದುಕೂರಿಸಲು ಕೆ.ಆರ್.ನಗರ ಕ್ಷೇತ್ರದ ಶಾಸಕ ಡಿ.ರವಿಶಂಕರ್ ಅವರು ಸಿಎಂ ಮೊರೆ ಹೋಗಿದ್ದರು. ಹಲವು ವರ್ಷಗ ಳಿಂದಲೂ ಹಿಂದುಳಿದ ವರ್ಗಕ್ಕೆ ಸೇರಿದ ವರಿಗೆ ಅಧ್ಯಕ್ಷ ಸ್ಥಾನ ಸಿಗದೆ ಇರುವುದನ್ನು ಮುಂದಿಟ್ಟುಕೊಂಡು ಆಯ್ಕೆ ಮಾಡುವಂತೆ ಮನವೊಲಿಸುವ ಪ್ರಯತ್ನ ನಡೆಸಿದ್ದರು. ಈ ಮಧ್ಯೆ ಒಮ್ಮೆ ಅಧ್ಯಕರಾಗಿದ್ದ ಚಂದ್ರ ಶೇಖರ್ ಶಾಸಕರಾದ ಕೆ.ಹರೀಶ್ ಗೌಡ, ತನ್ನೀರ್ ಸೇಠ್ ಅಲ್ಲದೆ ಇತರೆ ನಿರ್ದೇಶಕರ ಮನವೊಲಿಸಿ ತಮ್ಮ ಪರವಾದ ಅಭಿಪ್ರಾಯ ವ್ಯಕ್ತಪಡಿಸುವಂತೆ ಹೇಳಿದ್ದರು. ಮತ್ತೊಂ ದೆಡೆ ಚಾಮರಾಜನಗರ ಜಿಲ್ಲೆಗೆ ಪ್ರಾತಿನಿ ಧ್ಯದ ಜತೆಗೆ, ತಮ್ಮ ತಂದೆ ಸಹಕಾರ ಸಚಿ ವರಾಗಿ ಕೆಲಸ ಮಾಡಿರುವ ಕಾರಣ ತಮ್ಮನ್ನು ಆಯ್ಕೆ ಮಾಡಿದರೆ ಉತ್ತಮ ವೆಂದು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ವರಿಷ್ಠರ ಗಮನಕ್ಕೆ ತಂದಿದ್ದರು.

ಈ ಹಿನ್ನಲೆಯಲ್ಲಿ ಸೋಮವಾರ ರಾತ್ರಿಯೇ ಸಿಎಂ ಸಂದೇಶವನ್ನು ರಾತ್ರಿ ಎಲ್ಲಾ ನಿರ್ದೇಶಕ ಸಭೆ ನಡೆಸಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಸ್ಪಷ್ಟಪಡಿಸಿದ್ದರು. ಅದರಂತೆ ಮಂಗಳವಾರ ಬೆಳಿಗ್ಗೆ ಶಾಸಕ ಡಿ.ರವಿಶಂಕರ್ ಅವರ ತಂದೆ ದೊಡ್ಡಸ್ವಾಮೇಗೌಡ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದರು. ಬಳಿಕ ಯಾರು ಸಹ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ 12 ಗಂಟೆಗೆ ಅವರನ್ನೇ ಆವಿರೋಧವಾಗಿ ಚುನಾವಣಾಧಿಕಾರಿಗಳು ಘೋಷಣೆ ಮಾಡಿದರು.ಈ ಹಿನ್ನೆಲೆಯಲ್ಲಿ ಬ್ಯಾಂಕ್ ಎದುರು ಅಭಿಮಾನಿಗಳು, ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮಿಸಿದರು. ಶಾಸಕರಾದ ಗಣೇಶ್ ಪ್ರಸಾದ್, ಅನಿಲ್ ಚಿಕ್ಕಮಾದು, ಹರೀಶ್ ಗೌಡ, ಪುಟ್ಟಸಿದ್ದಶೆಟ್ಟಿ ಮೊದಲಾದ ಎಲ್ಲಾ ನಿರ್ದೇಶಕರು ಒಗ್ಗಟ್ಟಿನಲ್ಲಿ ಅಧ್ಯಕ್ಷರಿಗೆ ಶುಭ ಕೋರಿದರು.

### ಜಿಟಿಡಿ ಕೋಟೆ ಕೈ ವಶ

ಶಾಸಕ ಜಿ.ಟಿ.ದೇವೇಗೌಡರ ಪ್ರಬಲ ಕೋಟೆ ಎಂದೆ ಕರೆಸಿಕೊಂಡಿರುವ ಎಂಸಿಡಿಸಿಸಿ ಬ್ಯಾಂಕ್ ಶಾಸಕ ಹರೀಶ್ ಗೌಡರ ರಾಜಕೀಯ ಬೆಳ ವಣಿಗೆಗೆ ಪೂರಕ ಕೇಂದ್ರವಾಗಿತ್ತು. ಮೈಸೂರು, ಚಾಮರಾಜನಗರ ಎರಡೂ ಜಿಲ್ಲೆಗಳಲ್ಲಿ ಜಿ.ಟಿ.ದೇವೇಗೌಡ, ಪುತ್ರ ಹರೀಶ್ ಗೌಡ ಪ್ರಾಬಲ್ಯ ಸಾಧಿಸುವಲ್ಲಿ ಯಶಸ್ವಿಯಾಗಿದ್ದರು. ಆದರೆ, ಜಿಲ್ಲೆಯಲ್ಲಿ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಜಿ.ಟಿ.ದೇವೇಗೌಡ ಮೌನಕ್ಕೆ ಜಾರಿದರೆ, ಶಾಸಕ ಜಿ.ಡಿ.ಹರೀಶ್ ಗೌಡ ಆಡಳಿತ ಪಕ್ಷದ ವಿರುದ್ಧ ಸೆಣಸಿದರಾದರೂ ಹೆಚ್ಚಿನ ನಿರ್ದೇಶಕರ ಗೆಲ್ಲಿಸಿಕೊಳ್ಳುವಲ್ಲಿ ವಿಫಲರಾದ ಹಿನ್ನೆಲೆಯಲ್ಲಿ ಅಪ್ಪ-ಮಗನ ಭದ್ರ ಕೋಟೆ ಎಂದು ಕರೆಸಿಕೊಂಡಿದ್ದ ಎಂಸಿಡಿಸಿಸಿ ಬ್ಯಾಂಕ್ ಕಾಂಗ್ರೆಸ್ ವಶವಾಯಿತು.

ಸಿಎಂ ಸಿದ್ದರಾಮಯ್ಯ, ಸಚಿವ ರಾದ ಡಾ. ಎಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್ ಹಾಗೂ ಎಲ್ಲಾ ನಿರ್ದೇಶಕರ ಸಹಕಾರದಿಂದ ಅಧ್ಯ ಕ್ಷನಾಗಿದ್ದೇನೆ. ನಿರ್ದೇಶಕನಾಗುತ್ತೇ ಎಂದೇ ಭಾವಿಸಿ ಇರಲಿಲ್ಲ. ಆಕಸ್ಮಿಕವಾಗಿ ಜಿಲ್ಲೆಯಲ್ಲಿ ಹೊಸ ಅಲೆಯಾಗಬೇಕು. ಕಾಂಗ್ರೆಸ್ ಅಧಿಕಾ ರಕ್ಕೆ ಬರಬೇಕೆಂದು ಎಲ್ಲಾ ತಾಲ್ಲೂಕಿನಲ್ಲೂ ಕಾಂಗ್ರೆಸ್ ಸ್ಪರ್ಧೆ ಮಾಡಿತು. ಡಾ. ಯತೀಂದ್ರ, ಮಾಜಿ ಶಾಸಕ ಎಚ್.ಪಿ.ಮಂಜುನಾಥ್ ನೇತೃತ್ವದಲ್ಲಿ ಚುನಾವಣೆ ನಡೆಸಿದರು. ಮುಂದಿನ ದಿನಗಳಲ್ಲಿ ಮೈಮುಲ್ ನಲ್ಲೂ ಕಾಂಗ್ರೆಸ್ ಇದೇ ರೀತಿ ಹೋರಾಟ ಮುಂದುವರೆಸಲಿದೆ.

**ದೊಡ್ಡಸ್ವಾಮೇಗೌಡ** ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ

ಮೈಸೂರು ಚಾಮರಾಜನಗರ ಜಿಲ್ಲಾ ಕೇಂದ್ರ ಬ್ಯಾಂಕ್

## ನೂತನ ಅಧ್ಯಕ್ಷರಿಗೆ ನಂಜುಂಡಪ್ರಸಾದ್ ಸನ್ಮಾನ



ಗುಂಡ್ಲುಪೇಟೆ: ಮೈಸೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನ ನೂತನ ಅಧ್ಯಕ್ಷ ರಾಗಿ ಕೆ ಆರ್ ನಗರ ಶಾಸಕ ರವಿಶಂಕರ್ ತಂದೆ ದೊಡ್ಡ ಸ್ವಾಮಿ ಗೌಡ ರವರು ಆಯ್ಕೆಯಾಗಿದ್ದು ಅವರಿಗೆ ಸಹಜಾರ ರತ್ನ ಪ್ರಶಸ್ತಿ ಪುರಸ್ಕೃತ ಹಾಗೂ ಜಿಲ್ಲಾ ಸಹಕಾರ ಒಕ್ಕೂಟ ಅಧ್ಯಕ್ಷ ಮತ್ತು ಚಾಮುಲ್ ನಿರ್ದೇಶಕ ಎಚ್ ಎಸ್ ನಂಜುಂಡಪ್ರಸಾದ್ ಅಭಿನಂದಿಸಿದರು.

ಪೀಪಲ್ಸ್ ಪಾರ್ಕ್ ಬಾಲಕಿಯರ ಸರ್ಕಾರಿ ಪ್ರೌಢಶಾಲೆ ವಾರ್ಷಿಕೋತ್ಸವ

# ಜಿಲ್ಲಾ ಮಟ್ಟದ ಸಂಗೀತ ಸ್ಪರ್ಧೆ ಏರ್ಪಡಿಸಿ: ಉದಯಕುಮಾರ್

ಮೈಸೂರು: ಜಿಲ್ಲೆಯ 232 ಪ್ರೌಢಶಾಲೆಗಳ ಪೈಕಿ 47 ಕಡೆ ಸಂಗೀತ ಶಿಕ್ಷಕರಿದ್ದು ಎಲ್ಲರೂ ಸೇರಿ ಜಿಲ್ಲಾ ಮಟ್ಟದ ಸಂಗೀತ ಸ್ಪರ್ಧೆಗಳನ್ನು ಏರ್ಪಡಿಸಬೇಕು ಎಂದು ಡಿಡಿಪಿಐ ಡಿ.ಉದಯಕುಮಾರ್ ಸಲಹೆ ಮಾಡಿದರು.

ನಗರದ ನಜರ್‌ಬಾದಿನ ಪೀಪಲ್ಸ್ ಪಾರ್ಕ್ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯಲ್ಲಿ ಮಂಗಳ ವಾರ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದರು. ಸಾಧಾರಣ ಭಾಷೆಯಿಂದ ಭಗವಂತನನ್ನು ಒಲಿಸಿಕೊ ಳ್ಳಲಾಗದು. ಆದ್ದರಿಂದಲೇ ಭಗವಂತನ ಭಾಷೆಯಾದ ಸಂಗೀತ ಸೃಷ್ಟಿಯಾಯಿತು ಎಂಬ ಮಾತಿದೆ. ವಿದ್ಯಾ ರ್ಥಿಗಳು ಪಠ್ಯದ ಜೊತೆಗೆ ಕ್ರೀಡೆ, ಸಾಹಿತ್ಯ, ಸಂಗೀತ ಸ್ಪರ್ಧೆಗಳಲ್ಲೂ ಭಾಗವಹಿಸಬೇಕು ಎಂದು ಹೇಳಿದರು.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಮುಂಬರುವ ಪರೀಕ್ಷೆಯನ್ನು ಆತ್ಮವಿಶ್ವಾಸದಿಂದ ಎದುರಿಸಿ, ಉತ್ತಮ ಫಲಿತಾಂಶ ಪಡೆಯಬೇಕು. ನಂತರ ಪಿಯುಸಿಯಲ್ಲಿ ಕೂಡ ಉತ್ತಮ ಅಂಕ ಪಡೆದು, ಮುಂಬರುವ ಜವಾಬ್ದಾರಿಯನ್ನು ನಿರ್ವಹಿಸಬೇಕು.

ಸಂಗೀತಗೋಷ್ಠಿಯನ್ನು ಡಯಟ್ ಪ್ರಾಂಶುಪಾಲ



ನಾಗರಾಜಯ್ಯ ಉದ್ಘಾಟಿಸಿದರು. ಎಸ್‌ಡಿಎಂಸಿ ಅಧ್ಯಕ್ಷ ಎ.ಟಿ.ಆನಂದ್ ಅಧ್ಯಕ್ಷತೆ ವಹಿಸಿದ್ದರು. ಆಕಾಶವಾಣಿ ಹಾಗೂ ದೂರದರ್ಶನ ಕಲಾವಿದ ಕೆ.ಆರ್.ವೆಂಕಟೇಶ್ ವಿಶೇಷ ಆಹ್ವಾನಿತರಾಗಿದ್ದರು. ಉತ್ತರ ವಲಯದ ಬಿಇಒ ರೇವಣ್ಣ, ಜಿಪಂ ಪಿಎಂ ಪೋಷಣ್ ಶಿಕ್ಷಣಾ ಧಿಕಾರಿ ಕೃಷ್ಣ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕು ಮಾರ್, ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕಿ, ಸುಧಾಮಣಿ, ಬಿಆರ್‌ಸಿ ಅರ್ಪಣಾ, ಅಕ್ಷರ ದಾಸೋಹ ಯೋಜನೆಯ ಸಹಾಯಕ ನಿರ್ದೇಶಕ ಲಿಂಗರಾಜು, ಅತಿಥಿಗಳಾಗಿದ್ದರು. ಎಸ್‌ಡಿಎಂಸಿ ಉಪಾಧ್ಯಕ್ಷೆ ವಿಜಯಲಕ್ಷ್ಮಿ, ಸದಸ್ಯ ಆಸೀರ್ ಉಲ್ಲಾ ಖಾನ್ ಉಪಸ್ಥಿತರಿದ್ದರು.

ಉಪ ಪ್ರಾಂಶುಪಾಲ ಡಾ.ಮಲ್ಲಿಕಾರ್ಜುನಸ್ವಾಮಿ ಸ್ವಾಗತಿಸಿದರು. ಲಕುಮಿ, ಮಾನ್ಯಶ್ರೀ, ಮಹಾಲಕ್ಷ್ಮಿ, ಅನುಶ್ರೀ ಮತ್ತು ತಂಡದವರು ಸಂಗೀತ ಶಿಕ್ಷಕ ಎಂ.ಬಿ. ನಾಗರಾಜು ಅವರ ಮಾರ್ಗದರ್ಶನದಲ್ಲಿ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದವರು, ದಸರಾ ಕಾರ್ಯಕ್ರಮದಲ್ಲಿ ಭಾಗವಹಿಸಿದವರು, ಕ್ರೀಡೆಯಲ್ಲಿ ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಭಾಗವಹಿಸಿದವರಿಗೆ, ಸಾಹಿತ್ಯ, ಸಂಗೀತ ಸ್ಪರ್ಧೆ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು. ನಂತರ ಶಾಲಾ ವಿದ್ಯಾರ್ಥಿಗಳು ಹಾಗೂ ಸಂಗೀತ ಶಿಕ್ಷಕರ ನೇತೃತ್ವದಲ್ಲಿ ಪಿಳ್ಳರಿ ಗೀತೆಗಳ ಗಾಯನ ಗೋಷ್ಠಿ, ಕೆ.ಆರ್. ವೆಂಕಟೇಶ್ ಅವರಿಂದ ಭಕ್ತಿ ಸಂಗೀತ ಗೋಷ್ಠಿ, ಚಿಕ್ಕಣ್ಣಾಚಾರ್ ನೇತೃತ್ವದಲ್ಲಿ ವಿವಿಧ ಕಲಾವಿದರಿಂದ ವಾದ್ಯಸಂಗೀತ ಗೋಷ್ಠಿ ನಡೆದವು.

# ಕೌಟುಂಬಿಕ ಸಿನಿಮಾಗೆ ವಿಷ್ಣು ಮಾದರಿ



ಮೈಸೂರು: ನಟ ವಿಷ್ಣುವರ್ಧನ್ ಮೈಸೂರಿನವರಾದರೂ ಕೂಡ ವಿಶ್ವದಲ್ಲೇ ಜನಪ್ರಿಯರಾಗಿದ್ದರು. ಅವರ ನಟನೆಐ ಪ್ರತಿಯೊಂದು ಚಿತ್ರ ಸಹ ಕೌಟುಂಬಿಕ ಜೀವನವನ್ನೇ ಪ್ರಧಾನವಾಗಿದ್ದವು ಎಂದು ಶಾಸಕ ಕೆ.ಹರೀಶ್ ಗೌಡ ಅಭಿಪ್ರಾಯ ಪಟ್ಟರು.

ನಗರದ ಜಗನ್ಮೋಹನ ಅರಮನೆಯ ಮುಂಭಾಗ ಕರುಣಾಮಯಿ ವಿಷ್ಣುವರ್ಧನ್ ಅಭಿಮಾನಿ ಬಳಗದ ವತಿಯಿಂದ ಕರ್ನಾಟಕ ರತ್ನ ಸಾಹಸಸಿಂಹ ವಿಷ್ಣುವರ್ಧನ್ 16ನೇ ವರ್ಷದ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಪೌರಕಾರ್ಮಿಕರಿಗೆ ಮಾಸ್ಕ ಹಾಗೂ ಮಫ್ಲರ್ ಟೋಪಿ, ವಿತರಿಸಿ ಅವರು ಮಾತನಾಡಿದರು. ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಜೊತೆಯಲ್ಲೆ ಚಿತ್ರರಂಗದಲ್ಲಿ ಹೊಸ ಆಯಾಮ ಸೃಷ್ಟಿಸುವಲ್ಲಿ ಕಲಾವಿದರಿಗೆ ಮಾದರಿಯಾಗಿದ್ದರು, ಕನ್ನಡ ನೆಲ ಜಲ ಭಾಷೆಯ ವಿಚಾರಕ್ಕೆ ಧಕ್ಕೆ ಬಂದಾಗ ಧ್ವನಿ ಎತ್ತುತ್ತಿದ್ದದ್ದರು. ಚಿತ್ರನಗರಿ ಮೈಸೂರಿನಲ್ಲಿ ಸ್ಥಾಪನೆಯ ಪರಿಕಲ್ಪನೆ ನೀಡಿದ್ದೇ ವಿಷ್ಣುವರ್ಧನ. ಅವರ ಸರಳಜೀವನ ಪ್ರತಿಯೊಬ್ಬರಿಗೂ ಮಾದರಿಯಾಗಿದ್ದರೆಂದು ಹೇಳಿದರು

ಸಮಾಜ ಸೇವಕ ಕೆ.ರಘುರಾಮ ವಾಜಪಾಯಿ, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್ ಕುಮಾರ್, ನಗರಪಾಲಿಕಾ ಮಾಜಿ ಸದಸ್ಯ ಎಂ.ಡಿ.ಪಾರ್ಥ ಸಾರಥಿ, ಜೀವದಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕರುಣಾಮಯಿ ವಿಷ್ಣು ಅಭಿಮಾನಿ ಬಳಗದ ಅಧ್ಯಕ್ಷ ಎಸ್.ಎನ್.ರಾಜೇಶ್, ಶ್ರೀ ಕನಕದಾಸ ಪತ್ತಿನ ಸಹಕಾರ ಸಂಘದ ನಿರ್ದೇಶಕ ರವಿಚಂದ್ರ, ನಿರೂಪಕ ಅಜಯ್ ಶಾಸ್ತ್ರಿ, ಗುರುರಾಜ್ ಶೆಟ್ಟಿ ನವೀನ್, ವಿಪ್ರ ಮುಖಂಡರಾದ ಟಿ.ಎಸ್.ಅರುಣ್, ಉತ್ತನಹಳ್ಳಿ ಶಿವಣ್ಣ, ಹೆಲ್ತ್ ಇನ್ಸ್ಪೆಕ್ಟರ್ ಕೃಷ್ಣಪ್ಪ, ನಂಜುಂಡಿ, ನಾಗೇಶ್, ಯಾದವ್ ಇತರರು ಹಾಜರಿದ್ದರು.

# ವಿದ್ಯಾರ್ಥಿಗಳು ಸಂವಿಧಾನ ಓದುವ ಮೂಲಕ ಉಳಿಸಿ

ಚಾಮರಾಜನಗರ,ಅಪಾಯದಲ್ಲಿರುವ ಸಂವಿಧಾನವನ್ನು ವಿದ್ಯಾರ್ಥಿಗಳು ಸಂವಿಧಾನ ಓದುವ ಮೂಲಕ ಉಳಿಸಬೇಕು ಎಂದು ಪ್ರಾಂಶುಪಾಲ ಸಂತೋಷ ಹೇಳಿದರು.

**▶▶ ಪ್ರಾಂಶುಪಾಲ ಸಂತೋಷ ಕರೆ**

**▶▶ ಬಂಜಾರ ಇಂಡಿಯನ್ ಶಾಲೆಯಲ್ಲಿ ಸಂವಿಧಾನ ಮೂಲಭೂತ ತತ್ವಗಳ ವಿಷಯ ಕುರಿತ ಸ್ಪರ್ಧಾತ್ಮಕ ಪರೀಕ್ಷೆ**

ನಗರದ ಬಂಜಾರ ಇಂಡಿಯನ್ ಸ್ಕೂಲ್ ನಲ್ಲಿ ಭಾರತ ಸಂವಿಧಾನ ಮೂಲಭೂತ ತತ್ವಗಳ ವಿಷಯ ಕುರಿತು 2025–26ನೇ ಸಾಲಿನ ಸ್ಪರ್ಧಾತ್ಮಕ ಪರೀಕ್ಷೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಪ್ರಸ್ತುತ ದಿನಗಳಲ್ಲಿ ಭಾರತ ಸಂವಿಧಾನ ಅಪಾಯದಲ್ಲಿದೆ. ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರು ಬರೆದಿರುವ ಸಂವಿಧಾನ ವಿಶ್ವದಲ್ಲೇ ಒಂದು ಶ್ರೇಷ್ಠ ಸಂವಿಧಾನವಾಗಿದೆ. ಬಂಜಾರ ಶಾಲೆಯಲ್ಲಿ ಮಕ್ಕಳಿಗೆ ಸಂವಿಧಾನ ಅರಿವು ಮೂಡಿಸುವ ಸಲುವಾಗಿ ಸಂವಿಧಾನ ಮೂಲಭೂತ ತತ್ವಗಳ ಕುರಿತು ಸ್ಪರ್ಧಾತ್ಮಕ ಪರೀಕ್ಷೆ ಹಮ್ಮಿಕೊಳ್ಳಲಾಗಿದೆ. ಇದೊಂದು ಒಳ್ಳೆಯ ಕಾರ್ಯಕ್ರಮ ವಾಗಿದ್ದು, ಶಾಲೆಯಲ್ಲಿ ಪಠ್ಯ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ಒತ್ತು ನೀಡಿದೆ ಎಂದರು.



ಅಧ್ಯಕ್ಷ ತೆ ವಹಿಸಿದ್ದ ಬಂಜಾರ ಎಜುಕೇಶನ್ ಮತ್ತು ಸೋಷಿಯಲ್ ಟ್ರಸ್ಟ್ ಅಧ್ಯಕ್ಷ ಶಿವಾಜಿ ಮಾತನಾಡಿ, ನಮ್ಮ ಶಾಲೆಯಲ್ಲಿ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳು ಬಗ್ಗೆಯೂ ಅರಿವು ಮೂಡಿಸಲಾಗುತ್ತದೆ.

ಚಾಮರಾಜನಗರ ತಾಲ್ಲೂಕಿನ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಾಲೆಯಲ್ಲಿ ವ್ಯಾಸಾಂಗ ಮಾಡುತ್ತಿರುವ 5, 6 ಮತ್ತು 7ನೇ ತರಗತಿಯ ವಿದ್ಯಾರ್ಥಿ ಗಳಿಗೆ ಭಾರತ ಸಂವಿಧಾನದ ಮೂಲಭೂತ ತತ್ತ್ವಗಳು "ಎಂಬ ವಿಷಯದ ಬಗ್ಗೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗುತ್ತಿದೆ. ಈ ಸ್ಪರ್ಧೆ ಯುವ ವಿದ್ಯಾರ್ಥಿಗಳಲ್ಲಿ ಭಾರತದ ಸಂವಿಧಾನದ ಪ್ರಮುಖ ತತ್ತ್ವಗಳ ಬಗ್ಗೆ ಅರಿವು ಮತ್ತು ಅರ್ಥೈಸುವಿಕೆಯನ್ನು ಬೆಳೆಸುವ ಉದ್ದೇಶವನ್ನು ಹೊಂದಿದೆ. ವಿಜೇತರಿಗೆ ಆಕರ್ಷಕ ಬಹುಮಾನಗಳನ್ನು ನೀಡಲಾಗುತ್ತದೆ. ಪ್ರಥಮ ಬಹುಮಾನ 5 ಸಾವಿರ, ಪದಕ ಹಾಗೂ ಪ್ರಮಾಣಪತ್ರ, ದ್ವಿತೀಯ ಬಹುಮಾನ 3 ಸಾವಿರ , ಪದಕ, ಪ್ರಮಾಣಪತ್ರ, ಗೌರವ ಬಹುಮಾನಗಳು : 10 ವಿದ್ಯಾರ್ಥಿಗಳಿಗೆ ತಲಾ 1 ಸಾವಿರ, ಪದಕ ಹಾಗೂ ಪ್ರಮಾಣಪತ್ರ, ಪರೀಕ್ಷೆ ಬರೆದ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ, ಪದಕವನ್ನು ಡಿ.30 ರಂದು ನಡೆಯುವ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ ವಿತರಿಸಲಾಗುತ್ತದೆ ಎಂದರು. ಕಾರ್ಯಕ್ರಮದಲ್ಲಿಟ್ರಸ್ಟಿ ಜಗದೀಶ್, ಮುಖ್ಯ ಶಿಕ್ಷಕ ಎನ್.ಸಂತೋಷ, ಶಿಕ್ಷಕರು, ಮಕ್ಕಳು, ಪೋಷಕರು ಭಾಗವಹಿಸಿದ್ದರು.

# ರಾಮನಗರ ನಗರಸಭೆ ಉಪಾಧ್ಯಕ್ಷರಾಗಿ ಗಿರಿಜಮ್ಮ ಗುರುವೇಗೌಡ ಅವಿರೋಧ ಆಯ್ಕೆ



ರಾಮನಗರ: ರಾಮನಗರ ನಗರಸಭೆಯ ನೂತನ ಉಪಾಧ್ಯಕ್ಷರಾಗಿ 17ನೇ ವಾರ್ಡ್‌ನ ಸದಸ್ಯೆ ಕಾಂಗ್ರೆಸ್ ಪಕ್ಷದ ಗಿರಿಜಮ್ಮ ಗುರುವೇಗೌಡ ಅವಿರೋಧವಾಗಿ ಆಯ್ಕೆಗೊಂಡರು.

ಉಪಾಧ್ಯಕ್ಷ ಸ್ಥಾನಕ್ಕೆ ಆಯಿಷಾ ಬಾನು ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಮಂಗಳವಾರ ನಗರಸಭೆಯ ಪ್ರಶಸ್ತಿ ಭವನದಲ್ಲಿ ಚುನಾವಣೆ ನಡೆಯಿತು. ಬೇರ್‍ಯಾರು ನಾಮಪತ್ರ ಸಲ್ಲಿಸದ ಕಾರಣ ಗಿರಿಜಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ಉಪವಿಭಾಗಾಧಿಕಾರಿ ಬಿನೋಯ್ ಘೋಷಿಸಿದರು. ಬೆಳಗ್ಗೆ 11:30ಕ್ಕೆ ಚುನಾವಣಾ ಪ್ರಕ್ರಿಯೆ ಆರಂಭಗೊಂಡಿತು. ಚುನಾವಣಾ ಪ್ರಕ್ರಿಯೆ ಮುಗಿದ ನಂತರ ಆಯ್ಕೆ ಘೋಷಣೆಯಾಗುತ್ತಿದ್ದಂತೆ ಗಿರಿಜಮ್ಮ ಅವರ ಬೆಂಬಲಿಗರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು. ಉಪಾಧ್ಯಕ್ಷ ಸ್ಥಾನದ ಚುನಾವಣಾ ಪ್ರಕ್ರಿಯೆಯಲ್ಲಿ ಬಹುತೇಕ ಜೆಡಿಎಸ್ ಸದಸ್ಯರು ಗೈರಾಗಿದ್ದರು. ಒಟ್ಟು 31 ಸದಸ್ಯ ಬಲ ಹೊಂದಿರುವ ನಗರಸಭೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ನಿಚ್ಚಳ ಬಹುಮತ ಇದ್ದ ಕಾರಣ ಗಿರಿಜಮ್ಮ ಅವರ ಆಯ್ಕೆ ನಿರಾತಂಕವಾಗಿತ್ತು. ನಿಚ್ಚಳ ವಾಗಿತ್ತು.

**ಎಲ್ಲರ ಸಹಕಾರ ಪಡೆದು ಕರ್ತವ್ಯ ನಿರ್ವಹಣೆ ? ಗಿರಿಜಮ್ಮ**

ಈ ಸಂದರ್ಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ನೂತನ ಉಪಾಧ್ಯಕ್ಷೆ ಗಿರಿಜಮ್ಮ ತಮ್ಮ ಆಯ್ಕೆಗೆ ಸಹಕರಿಸಿದ ಡಿಸಿಎಂ ಡಿ.ಕೆ.ಶಿವಕುಮಾರ್, ಮಾಜಿ ಸಂಸದ ಹಾಲಿ ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್, ಮಾಜಿ ಶಾಸಕ ಸಿ.ಎಂ.ಲಿಂಗಪ್ಪ, ಶಾಸಕ ಇಕ್ಬಾಲ್ ಹುಸೇನ್, ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ ಸೇರಿದಂತೆ ಪಕ್ಷದ ಎಲ್ಲಾ ಮುಖಂಡರಿಗೂ ಧನ್ಯವಾದ ತಿಳಿಸಿದರು.

ನಗರಸಭೆಯ ಅಧ್ಯಕ್ಷ ಕೆ.ಶೇಷಾದ್ರಿ ಅವರು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಹಲವು ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿದೆ. ಮೂಲಭೂತ ಸೌಕರ್ಯಗಳಿಗೆ ಒತ್ತು ನೀಡುವ ಜತೆಗೆ ಎಲ್ಲಾ ಸದಸ್ಯರ ಸಹಕಾರ ಸಲಹೆ ಪಡೆದು ಕೆಲಸ ಮಾಡುತ್ತೇನೆ. ಮುಂಬರುವ ದಿನಗಳಲ್ಲಿ ಅಧ್ಯಕ್ಷರ ಜೊತೆಗೂಡಿ ನಗರದ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು. ನೂತನ ಉಪಾಧ್ಯಕ್ಷರಾಗಿ ಆಯ್ಕೆಯಾದ ಗಿರಿಜಮ್ಮ ಗುರುವೇಗೌಡ ಅವರನ್ನು ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ, ಟಿಎಪಿಸಿಎಂಎಸ್ ಅಧ್ಯಕ್ಷ ದೊಡ್ಡಿ ಸುರೇಶ್ ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು ಅಭಿನಂದಿಸಿದರು. ಈ ಸಂದರ್ಭದಲ್ಲಿ ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಪೈರೋಜ್ ಪಾಷ, ಸದಸ್ಯರಾದ ಪಾರ್ವತಮ್ಮ, ಆಯಿಷಾ ಬಾನು, ಪವಿತ್ರ, ವಿಜಯಕುಮಾರಿ, ನಿಜಾಮುದ್ದೀನ್, ದೌಲತ್ ಶರೀಫ್, ಅಕ್ಲಿಂ, ಅಜ್ಮತ್, ಮುತ್ತುರಾಜು, ಗೋವಿಂದರಾಜು, ನರಸಿಂಹ, ಸಮದ್, ಅಣ್ಣು, ಬೈರೇಗೌಡ ಸೇರಿದಂತೆ ಹಲವರು ಇದ್ದರು.

# ಮಾನವೀಯ ಮೌಲ್ಯಗಳ ಹರಿಕಾರ ವಿಷ್ಣು: ಪ್ರತಾಪ್



ಮೈಸೂರು: ಹಿರಿಯ ನಟ ದಿ.ವಿಷ್ಣುವರ್ಧನ್ ಮಾನವೀಯ ಮೌಲ್ಯಗಳ ಹರಿಕಾರರಾಗಿ, ಉತ್ತಮ ನಟನೆಯ ಮೂಲಕ ಜನ ಮಾನಸದಲ್ಲಿ ಇನ್ನು ಅಚ್ಚ ಹಸಿರಾಗಿದ್ದಾರೆ ಎಂದು ಮಾಜಿ ಸಂಸದ ಪ್ರತಾಪಸಿಂಹ ತಿಳಿಸಿದರು.

ಅಲಯನ್ಸ್ ಕ್ಲಬ್ ಅಫ್ ಮೈಸೂರುವತಿಯಿಂದ ದೇವರಾಜ ಅರಸು ರಸ್ತೆಯಲ್ಲಿ ನಟ ದಿ.ವಿಷ್ಣುವರ್ಧನ್ 16ನೇ ವರ್ಷದ ಪುಣ್ಯ ಸ್ಮರಣೆ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದದರು. ಕನ್ನಡ ಚಿತ್ರರಂಗದ ದಂತಕಥೆ, ಅಭಿನಯ ಭಾರ್ಗವ, ಸಾಹಸಸಿಂಹನಾಗಿ ಸದಾ ಎಲ್ಲರ ಮನಸ್ಸಿನಲ್ಲಿದ್ದಾರೆಂದು ಹೇಳಿದರು. ಮೈಸೂರು ವಾಣಿಜ್ಯ ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು, ಅಲಯನ್ಸ್ ಕ್ಲಬ್ ಅಫ್ ಮೈಸೂರು ಬೆಟ್ಟೇಗೌಡ, ಚಾಮರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ದಿನೇಶ್ ಗೌಡ, ನರಸಿಂಹರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಮಂಜು, ಕೆಎಂಪಿ ಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ನಿರೂಪಕ ಅಜಯ್ ಶಾಸ್ತ್ರಿ, ಸಂದೇಶ್ ಪವಾರ್, ವಸಂತ ಮನೀಶ್, ಮೋಹಿತ್ ಗೌಡ, ಉಮೇಶ್, ಯಶವಂತ್, ವಿನೋದ್ ಅರಸ್, ಪ್ರಕಾಶ್, ಶ್ರೀನಿವಾಸ್, ಗೋಪಾಲ್ ಇತರರು ಉಪಸ್ಥಿತರಿದ್ದರು.

# ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣಕ್ಕೆ ಅನುದಾನ: ಯಧುವೀರ್

ಮೈಸೂರು: ದೇಶದಲ್ಲಿ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡುತ್ತಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರ ಕ್ಷೇತ್ರದಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.



ಪಿರಿಯಾಪಟ್ಟಣ ತಾಲೂಕಿನ ಚಿಕ್ಕ ಹೊಸೂರು(ಕೊಪ್ಪ)ದಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣಕ್ಕೆ 65 ಲಕ್ಷ ರೂ. ಅನುದಾನ ಬಿಡುಗಡೆ ಮಾಡಲಾಗಿದೆ. ಈ ಹಿಂದೆ ಸಂಬಂಧಪಟ್ಟ ಸಚಿವರನ್ನು ಭೇಟಿ ಮಾಡಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಬೇಕು ಎಂದು ಮನವಿ ಸಲ್ಲಿಸಲಾಗಿತ್ತು. ಅದಕ್ಕೆ ಪೂರಕವಾಗಿ ಸ್ಪಂದಿಸಿ ಈಗ ಕ್ರಮ ಕೈಗೊಳ್ಳಲಾಗಿದೆ. ಅತಿ ಶೀಘ್ರದಲ್ಲೇ ನಮ್ಮ ಕ್ಷೇತ್ರದ ಪಿರಿಯಾಪಟ್ಟಣ, ಹುಣಸೂರಿನ ವಿವಿಧ ಭಾಗಗಳಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣವಾಗಲಿದೆ ಎಂದು ಹೇಳಿದರು.

ಪಿಎಂ–ಎಬಿಎಚ್ಐಎಂ ಯೋಜನೆಯಡಿ ಮೈಸೂರು ಕ್ಷೇತ್ರದಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರಕ್ಕೆ ಅನುದಾನ ಬಿಡುಗಡೆ ಮಾಡಲಾಗಿದೆ. ಪಿರಿಯಾಪಟ್ಟಣ ತಾಲೂಕಿನ ಚಿಕ್ಕಹೊಸರು (ಕೊಪ್ಪ), ಕೀರನಹಳ್ಳಿ (ದೊಡ್ಡ ಬ್ಯಾಲಾಳು), ದೊಡ್ಡ ಹರವೆ (ಕೊಪ್ಪ), ಎನ್.ಶೆಟ್ಟಿಹಳ್ಳಿ ತಮ್ಮಡ ಹಳ್ಳಿ (ಕಿತ್ತೂರು), ಮಂಟಹಳ್ಳಿ ಬೆಳಗಲಿ (ಚಿಕ್ಕನೇರಳೆ), ಕೊಯಮತ್ತೂರು, ಬಲ್ಲೇನಹಳ್ಳಿ (ರತ್ನಪುರಿ) ಗ್ರಾಮದಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರಗಳನ್ನು ತಲಾ 65 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗುವುದೆಂದರು.

# ಕೊಪ್ಪಳದ ಬಸಾಪುರ ಕೆರೆ ಒತ್ತುವರಿ ತೆರವಿಗೆ ಆಗ್ರಹ



ಮೈಸೂರು: ಕೊಪ್ಪಳದ ಬಸಾಪುರ ಸಾರ್ವಜನಿಕ ಕೆರೆಯನ್ನು ಬಿಎಸ್‌ಪಿಎಲ್ ಕಾರ್ಖಾನೆಯು ಒತ್ತುವರಿ ಮಾಡಿಕೊಂಡು ಅಲ್ಲಿನ ಜನ ಜಾನುವಾರಗಳಿಗೆ ಕುಡಿಯುವ ನೀರಿಗೆ ತೊಂದರೆ ಉಂಟಾಗಿದೆ. ಹೀಗಾಗಿ ಕೂಡಲೆ ಸಿಎಂ ಸಿದ್ದರಾಮಯ್ಯ ಅವರು ಈ ಒತ್ತುವರಿ ತೆರವಿಗೆ ಕ್ರಮ ವಹಿಸಬೇಕೆಂದು ಪ್ರಗತಿಪರ ಚಿಂತಕ ಪ್ರೊ.ಕೆ.ಎಸ್.ಭಗವಾನ್ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಒತ್ತುವರಿಯಿಂದಾಗಿ ಕೊಪ್ಪಳ ಮತ್ತು ಭಾಗ್ಯ ನಗರದ 20 ಹಳ್ಳಿಗಳ ಸುಮಾರು ಒಂದೂವರೆ ಲಕ್ಷ ಜನರಿಗೆ ಕಾರ್ಖಾನೆಯ ಹೊಗೆ ದೂಳಿನಿಂದಾಗಿ ಆರೋಗ್ಯದ ಸಮಸ್ಯೆ ಉಂಟಾಗಿದೆ. ಉಸಿರಾಟದ ಸಮಸ್ಯೆ, ಹೃದಯ ಸಂಬಂಧಿ ಕಾಯಿಲೆ, ಚರ್ಮದ ಅಲರ್ಜಿ, ಕಣ್ಣು ಉರಿ, ಹಾಗೂ ಕ್ಯಾನ್ಸರ್‌ನಂತಹ ಕಾಯಿಲೆಯ ಭೀತಿಯಿಂದ ಬಳಲುತ್ತಿದ್ದಾರೆ. ಜಾನುವಾರುಗಳು ದೂಳಿನ ಮೇವು ತಿಂದು, ಕಲುಷಿತ ನೀರು ಕುಡಿದು ಗರ್ಭಿಣಿಯರು ಅತಿಸಾರದಿಂದ ಸಾಯುತ್ತಿರುವುದು ಮನಕಲಕುವಂತದ್ದಾಗಿದೆ ಎಂದರು. ಬಸಾಪುರ ಗ್ರಾಮದ ಸರ್ವೆ ನಂಬರ್ 143ರ 44.35 ಎಕರೆಯ ಈ ಸಾರ್ವಜನಿಕ ಕೆರೆಯನ್ನು ಈ ಕಂಪನಿಯವರು ಕಬಳಿಸಿ ಕಾಂಪೌಂಡ್ ಕಟ್ಟಿಕೊಂಡು ರಸ್ತೆ ಬಂದು ಮಾಡಿದ ಕಾರಣ ಜನರಿಗೆ ಜಾನುವಾರುಗಳಿಗೆ ತಿರುಗಾಡಲು ಮತ್ತು ಕೆರೆಯ ನೀರನ್ನು ಕುಡಿಯಲು ಅನುವಾಗುವಂತೆ ರಸ್ತೆಯನ್ನು ಮುಕ್ತವಾಗಬೇಕೆಂದು ಅಲ್ಲಿನ ಜನರು ಒತ್ತಾಯಿಸಿದ್ದಾರೆ ಎಂದರು. ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಮೈಸೂರಿನಲ್ಲಿಯೂ ಇದೇ ರೀತಿಯ ಸಮಸ್ಯೆಯುಂಟಾಗಿವೆ. ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಹಾಗೂ ಅದಕ್ಕೆ ಹೊಂದಿಕೊಂಡ ಪ್ರದೇಶಗಳಲ್ಲಿ ಯಾರ್‍ಯಾರೋ ಸರ್ಕಾರಿ ಭೂಮಿ ಆಕ್ರಮಿಸಿಕೊಂಡಿದ್ದಾರೆ. ಇದರಿಂದಾಗಿ ಪ್ರವಾಸೀ ಹಾಗೂ ಧಾರ್ಮಿಕ ಸ್ಥಳವಾದ ಚಾಮುಂಡಿಬೆಟ್ಟಕ್ಕೆ ಕುತ್ತು ಒದಗಿದೆ. ರಾಜ್ಯದೆಲ್ಲೆಡೆ ಅರಣ್ಯ ಸಹಾ ಒತ್ತುವರಿಯಾಗಿ ಕಾಡು ಪ್ರಾಣಿಗಳು ನಾಡಿಗೆ ಬರುವಂತಾಗಿದೆ. ಹೀಗಾಗಿ ಸರ್ಕಾರ ಇವುಗಳ ಬಗ್ಗೆ ಕೂಡಲೇ ಗಮನ ಹರಿಸಬೇಕೆಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಸೋಮಯ್ಯ ಮಲೆಯೂರು, ವಿಷಕಂಠ, ಸಿದ್ದಸ್ವಾಮಿ, ಸಿ.ಶಿವಣ್ಣ ಮತ್ತಿತರರು ಉಪಸ್ಥಿತರಿದ್ದರು.

# ಹಿರಿಯ ವಿದ್ಯಾರ್ಥಿಗಳ ಸಮಾವೇಶಕ್ಕೆ ಚಾಲನೆ

**▶▶ – ಸಿಎನ್‌ಎಂ ಅವರಿಗೆ ಗುರುವಂದನೆ**



ಚಾಮರಾಜನಗರ, ನಗರದ ಜೆಎಸ್‌ಎಸ್ ಪ್ರೌಢಶಾಲೆಯ ಹಿರಿಯ ವಿದ್ಯಾರ್ಥಿಗಳ ಸಮಾವೇಶ ಹಾಗೂ ಗುರುವಂದನಾ ಕಾರ್ಯಕ್ರಮಕ್ಕೆ ಹಿರಿಯ ಶಿಕ್ಷಕರಾದ ಸಿ.ಎನ್. ಮಲ್ಲಣ್ಣ ಅವರು ಚಾಲನೆ ನೀಡಿದರು.

ನಗರದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮುಂದೆ ನಡೆಸಲು ಉದ್ದೇಶಿಸಿರುವ ಹಿರಿಯ ವಿದ್ಯಾರ್ಥಿಗಳ ದೊಡ್ಡ ಸಮಾವೇಶಕ್ಕೆ ಚಾಲನೆ ನೀಡಿದಲ್ಲದೇ , ಹಿರಿಯ ಶಿಕ್ಷಕರಾದ ಸಿ.ಎನ್. ಮಲ್ಲಣ್ಣ (ಸಿಎನ್‌ಎಂ) ಅವರಿಗೆ ಹಿರಿಯ ವಿದ್ಯಾರ್ಥಿಗಳು ಗುರುವಂದನೆ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ಜೆಎಸ್‌ಎಸ್ ಬಾಲಕರ ಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿದ್ದು, ಇದೇ ತಿಂಗಳ ಅಂತ್ಯಕ್ಕೆ ಸೇವೆಯಿಂದ ನಿವೃತ್ತಗೊಳ್ಳುತ್ತಿರುವ ಸಿದ್ದಪ್ಪ ಅವರನ್ನು ಗೌರವಿಸಲಾಯಿತು.

ಸಮಾರಂಭ ಕುರಿತು ಪ್ರಸ್ತಾವಿಕವಾಗಿ ಮಾತನಾಡಿದ ಶಾಲೆಯ ಹಿರಿಯ ವಿದ್ಯಾರ್ಥಿ ವಿಶ್ವಕುಮಾರ್, ;ಜೆಎಸ್‌ಎಸ್ ಪ್ರೌಢಶಾಲೆಯು ನಗರದಲ್ಲಿ ಒಂದು ಬಗೆಯ ಹೆಮ್ಮರ. ಈ ಶಾಲೆಯಲ್ಲಿ 1958 ರಿಂದ ಈವರೆವಿಗೆ ಸಹಸ್ರಾರು ಮಂದಿ ವ್ಯಾಸಂಗ ಮಾಡಿದ್ದಾರೆ. ಹಾಗಾಗಿ ಜೆಎಸ್‌ಎಸ್ ಬಾಲಕರು, ಬಾಲಕಿಯರ ಶಾಲೆಯ ಎಲ್ಲ ಹಳೇ ವಿದ್ಯಾರ್ಥಿಗಳನ್ನು ಒಗ್ಗೂಡಿಸಿ ಶ್ರೀ ಶಿವರಾತ್ರಿ ದೇಶೀಕೇಂದ್ರಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ದೊಡ್ಡ ಸಮಾವೇಶ ಮಾಡುವುದು ನಮ್ಮ ಉದ್ದೇಶ. ಎಲ್ಲ ಶಿಕ್ಷಕರನ್ನು ಸೇರಿಸಿ ಗುರುವಂದನೆ ಸಲ್ಲಿಸಬೇಕೆಂಬ ಅಪೇಕ್ಷೆ. ಈ ಹಿನ್ನೆಲೆಯಲ್ಲಿ ಆ ಕಾರ್ಯಕ್ರಮಕ್ಕೆ ಸಾಂಕೇತಿಕವಾಗಿ ಇಂದು ಚಾಲನೆ ನೀಡಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ದೊಡ್ಡ ಸಮಾವೇಶಕ್ಕೆ ದಿನಾಂಕ ನಿಗದಿ ಮಾಡಲಾಗುವುದು ಎಂದರು.

ಹಿರಿಯ ವಿದ್ಯಾರ್ಥಿಗಳಾದ ವೆಂಕಟನಾಗಪ್ಪಶೆಟ್ಟಿ ಬಾಬು, ಬಿ.ಕೆ. ರವಿಕುಮಾರ್, ನಿರ್ಮಲಾ ಹಾಗೂ ಸಿ.ಎಂ. ನರಸಿಂಹಮೂರ್ತಿ ಅವರು ತಮ್ಮ ವಿದ್ಯಾರ್ಥಿ ಜೀವನದಲ್ಲಿನ ಸವಿ ನೆನಪು, ಗುರುಗಳ ಬೋಧನೆಯನ್ನು ಸ್ಮರಿಸಿದರು.

ಈ ವೇಳೆ ಹಳೇ ವಿದ್ಯಾರ್ಥಿಗಳಾದ ಪ್ರದೀಪ್‌ಕುಮಾರ್ ದೀಕ್ಷಿತ್ ನಿರೂಪಿಸಿದರು. ಚಿದಾನಂದ ಗಣೇಶ್ ಸ್ವಾಗತಿಸಿದರು. ಹಲವು ಮಂದಿ ಹಿರಿಯ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಇದಕ್ಕೂ ಮುನ್ನಾ ಜೆಎಸ್‌ಎಸ್ ಬಾಲಕರ ಪ್ರೌಢಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮ ನಡೆಯಿತು. ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಪ್ರತಿಭೆ ಪ್ರದರ್ಶಿಸಿದರು.

# ವೈಕುಂಠ ಏಕಾದಶಿ ಸಂಭ್ರಮ; ವಿಶೇಷ ಪೂಜೆ


ಚಾಮರಾಜನಗರ, ನಗರದ್ಯಾಂತ ವೈಕುಂಠ ಏಕಾದಶಿ ಸಂಭ್ರಮ ಮನೆಮಾಡಿದೆ. ಭಕ್ತರು ದೇವಾಲಯಗಳಿಗೆ ತೆರಳಿ ವಿಶೇಷ ಪೂಜೆ ಸಲ್ಲಿಸುತ್ತಿದ್ದಾರೆ.

ನಗರದ ಕೊಳದ ಬೀದಿಯಲ್ಲಿ ನಾರಾಯಣ ಸ್ವಾಮಿ ದೇವಸ್ಥಾನದಲ್ಲಿ ನಾರಾಯಣಸ್ವಾಮಿಗೆ ಮುಂಜಾನೆ 4:30 ಕ್ಕೆ ಅಭಿಷೇಕ, ಹೂವಿನ ಅಲಂಕಾರ, ಮಹಾಮಂಗಳಾರತಿ, ಉತ್ಸವ ನೆರವೇರಿತು.ಭಕ್ತರ ದಂಡು ಹರಿದುಬರುತ್ತಿದೆ. ಬೆಳಗಿನ ಜಾವದಿಂದಲೇ ದರ್ಶನಕ್ಕಾಗಿ ಕ್ಯೂ ನಲ್ಲಿ ಭಕ್ತರು ನಿಂತು ದೇವರದರ್ಶನ ಪಡೆದು ಪುನೀತರಾದರು.

**ಲಾಡು, ಪ್ರಸಾದ ವಿತರಣೆ**

ದೇವಸ್ಥಾನ ಬಂದ ಭಕ್ತರಿಗೆ ಲಾಡು, ಪ್ರಸಾದ್ ವಿತರಿಸಲಾಯಿತು. ದೇವಸ್ಥಾನದ ಆರ್ಚಕ ರಾಮಚಂದ್ರ ಪ್ರಜಾಪವರ್ ಟಿವಿಯೊಂದಿಗೆ ಮಾತನಾಡಿ, ವೈಕುಂಠ ಏಕಾದಶಿಯ ಪ್ರಯುಕ್ತ ದೇವಸ್ಥಾನದಲ್ಲಿ ನಾರಾಯಣಸ್ವಾಮಿಗೆ ಮುಂಜಾನೆ 4:30 ಕ್ಕೆ ಅಭಿಷೇಕ, ಹೂವಿನ ಅಲಂಕಾರ, ಮಹಾಮಂಗಳಾರತಿ, ಉತ್ಸವ ನೆರವೇರಿಸಲಾಯಿತು

ವರ್ಷದಲ್ಲಿ 24 ಏಕಾದಶಿಗಳು ಬರಲಿವೆ. ವೈಕುಂಠ ಏಕಾದಶಿಗೆ ವಿಶೇಷ ಮಹತ್ವವಿದೆ. ವೈದಿಕ



**▶▶ ದೇವಾಲಯಗಳಲ್ಲಿ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಪುನೀತರಾ ಭಕ್ತರಿಗೆ ಲಾಡು, ಪ್ರಸಾದ ವಿತರಣೆ**

ಜ್ಯೋತಿಷದ ಪ್ರಕಾರ, ಈ ದಿನದಂದು ವಿಷ್ಣುವಿನ ನಿವಾಸದ ದ್ವಾರಗಳು ತೆರೆದಿರುತ್ತವೆ. ಹಾಗಾಗಿಯೇ, ವೈಕುಂಠ ಏಕಾದಿನ ದಿನ ಭಕ್ತರು ಉಪವಾಸ ಮಾಡಲಿದ್ದಾರೆ. ಇದರಿಂದ ಭಕ್ತರ ಪ್ರಾರ್ಥನೆ ಇಡೇರುತ್ತವೆ ಎಂಬ ನಂಬಿಕೆ ಇದೆ ಎಂದು ತಿಳಿಸಿದರು.

# ಲೇಖನಿ ಸಾಮಗ್ರಿಗಳ ವಿತರಣೆ

ಚಾಮರಾಜನಗರ, ಗುಂಡ್ಲುಪೇಟೆ ಕ್ಷೇತ್ರದ ಯುವ ಶಾಸಕರಾದ ಎಚ್.ಎಂ. ಗಣೇಶ್ ಪ್ರಸಾದ್ ಅವರ 41ನೇ ವರ್ಷದ ಹುಟ್ಟು ಹಬ್ಬದ ಅಂಗವಾಗಿ ತಾಲೂಕಿನ ಕೇತಹಳ್ಳಿ ಕಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಗ್ರಾಮದ ಮುಖಂಡರು ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಸಭಾದ ಹೋಬಳಿ ಘಟಕದ ಅಧ್ಯಕ್ಷರಾದ ಬಿ. ಶಿವಪಾದಪ್ಪ ಲೇಖನಿ ಸಾಮಗ್ರಿಗಳನ್ನು ವಿತರಣೆ ಮಾಡಿದರು.

ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಅವರಣದಲ್ಲಿ ವಿದ್ಯಾರ್ಥಿಗಳಿಗೆ ಲೇಖನಿ ಸಾಮಗ್ರಿಗಳನ್ನು ವಿತರಿಸಿ ಮಾತನಾಡಿದ ಶಿವಪಾದಪ್ಪ, ನಮ್ಮ ಕ್ಷೇತ್ರದ ಶಾಸಕರು ಹಾಗೂ ನೆಚ್ಚಿನ ಯುವಕರಾದ ಎಚ್.ಎಂ.ಗಣೇಶ್ ಪ್ರಸಾದ್ ಅವರು ಹುಟ್ಟು ಹಬ್ಬವನ್ನು ಸರಳವಾಗಿ ಆಚರಣೆ ಮಾಡುವ ಜೊತೆಗೆ ನಿಮ್ಮೂರಿನ ಶಾಲೆಯ ಮಕ್ಕಳಿಗೆ ಅವಶ್ಯಕವಾದ ವಸ್ತುಗಳನ್ನು ನೀಡುವ ಮೂಲಕ ಆಚರಣೆ ಮಾಡಿ, ಹಾರ ತೂರಾಯಿ ಬೇಡ ಎನ್ನುವ ಸರಳ ಸಜ್ಜನಿಕೆ ರಾಜಕಾರಣ . ಮಾಜಿ ಸಚಿವರಾದ ದಿ. ಎಚ್.ಎಸ್. ಮಹದೇವಪ್ರಸಾದ್ ಅವರು ಸುಪುತ್ರರಾದ ಗಣೇಶ್ ಪ್ರಸಾದ್ ಶಾಸಕರಾಗಿ




ಕ್ಷೇತ್ರದ ಅಭಿವೃದ್ಧಿಗೆ ತಮ್ಮದೇ ಕೊಡುಗೆ ನೀಡುತ್ತಿದ್ದಾರೆ. ಜನರ ಸಮಸ್ಯೆಗಳನ್ನು ಆಲಿಸುವ ಜೊತೆಗೆ ಅವರ ಸಂಕಷ್ಟಗಳಿಗೆ ಮಿಡಿಯುವ ಮಾತೃ ಹೃದಯಿ. ಅವರ ರಾಜಕೀಯ ಭವಿಷ್ಯ ಇನ್ನು ಉಜ್ವಲವಾಗಲಿ. ತಂದೆಯಂತೆ ಮಗನು ಸಹ ಜಿಲ್ಲೆಯ ಅಭಿವೃದ್ಧಿಗೆ ತಮ್ಮನ್ನು ತೊಡಗಿಸಿಕೊಳ್ಳುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಶುಭ ಕೋರಿದರು. ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕ ಸಂಪತ್ತು, ಮುಖಂಡರಾದ ನಾಗರಾಜು ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

## ಜಿಲ್ಲಾ ಕುಂಬಾರರ ಸಂಘದ ಪದಾಧಿಕಾರಿಗಳ ಆಯ್ಕೆ

# ಕುಂಬಾರ ಅಭಿವೃದ್ಧಿ ನಿಗಮ ಸ್ಥಾಪಿಸಿ– ಶಿವಕುಮಾರ್ ಆಗ್ರಹ

ಚಾಮರಾಜನಗರ: ರದ್ದು ಮಾಡಿರುವ ಕುಂಬಾರ ಅಭಿವೃದ್ಧಿ ನಿಗಮ ಸ್ಥಾಪಿಸಬೇಕೆಂದು ಅಖಿಲ ಭಾರತ ಕುಂಬಾರ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಡಾ.ಶಿವಕುಮಾರ್ ಚೌಡಶೆಟ್ಟಿ, ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಸರ್ಕಾರದಲ್ಲಿ ಕುಂಬಾರ ಅಭಿವೃದ್ಧಿ ನಿಗಮ ಸ್ಥಾಪಿಸಿದರು. ಇಂದಿನ ಸರ್ಕಾರದ ಅನುದಾನ ಇಲ್ಲ ಎಂದು ರದ್ದುಪಡಿಸಿರುವುದು ವಿಷಾದಕರ ಸಂಗತಿ. ಕೂಡಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕುಂಬಾರ ಅಭಿವೃದ್ಧಿ ಸ್ಥಾಪಿಸಿ ವಿಶೇಷ ಪ್ಯಾಕೇಜ್ ನೀಡಬೇಕು ಒತ್ತಾಯಿಸಿದರು. ರಾಜ್ಯದಲ್ಲಿ 15 ರಿಂದ 18 ಲಕ್ಷದಷ್ಟಿರುವ ಕುಂಬಾರ ಜನಾಂಗವನ್ನು ಗಣತಿಂಯಲ್ಲಿ 5 ರಿಂದ 6 ಲಕ್ಷ ಎಂದು ತೋರಿಸಿರುವುದು ವಿಷಾಧನೀಯ, ರಾಜ್ಯದ ವಿವಿದಡೆಯಲ್ಲಿ ವಿವಿಧ ಹೆಸರುಗಳಿಂದ ಕರೆಯಲ್ಪಡುವ ಕುಂಬಾರರನ್ನು ಒಂದೂಗೂಡಿಸಿ ಸಂಘಟನೆ ಮಾಡಿ, ಸರ್ಕಾರದಿಂದ



ಸಿಗುವ ಸವಲತ್ತುಗಳನ್ನು ಪ್ರತಿಯೊಂದು ಕುಂಬಾರ ಕುಟುಂಬಕ್ಕೆ ಒದಗಿಸುವುದೇ ಸಂಘದ ಉದ್ದೇಶವಾಗಿದೆ, ಇಡೀ ದೇಶದಲ್ಲಿ 9 ಕೋಟಿಗೂ ಹೆಚ್ಚು ಜನಸಂಖ್ಯೆ ಇದ್ದೇವೆ ಎಂದರು.

ಇಲ್ಲಿಯವರೆಗೆ ಲಕ್ಷಿ ?ಮಸಾಗರ್ ಒಬ್ಬರನ್ನು ಬಿಟ್ಟರೆ ಬೇರೆ ಯಾರಿಗೂ ರಾಜಕೀಯ ಸ್ಥಾನಮಾನ ಸಿಕ್ಕಿಲ್ಲ, ಸ್ಥಾನಮಾನ ಇರಲಿ ಇದ್ದ ಅಭಿವೃದ್ಧಿ ನಿಗಮವನ್ನೇ ಅನುದಾನ ನೆಪದಲ್ಲಿ ರದ್ದು ಮಾಡಿರುವುದು ಎಷ್ಟು ಸರಿ, ಇದನ್ನು ಸಂಘ ಖಂಡಿಸುತ್ತದೆ ಎಂದರು.

ದೇವರಾಜ ಅರಸು ನಿಗಮದಲ್ಲಿ 103 ಜಾತಿಗಳನ್ನು ಸೇರಿಸಿ 600 ರಿಂದ 700 ಕೋಟಿ ಅನುದಾನ ಕೊಡುತ್ತೀರಿ, ಇಲ್ಲಿಯ ವರೆಗೆ ಕುಂಬಾರರಿಗೆ ಸಿಕ್ಕಿರುವ ಸವಲತ್ತು ನೋಡಿದರೆ ಏನೇನೂ ಇಲ್ಲ. ಆದ್ದರಿಂದ ಈ ನಿಗಮನ್ನ ನಾಲ್ಕು ಭಾಗ ಮಾಡಿ ಜಾತಿಗಳನ್ನು ವಿಂಗಡಿಸಬೇಕು, ಒಂದೊಂದು ನಿಗಮಕ್ಕೆ ಅಹಿಂದ ಮುಖ್ಯಮಂತ್ರಿಗಳ ಹೆಸರಿಡಬೇಕು ಎಂದು ಆಗ್ರಹಿಸಿದರು. ಯಡಿಯೂರಪ್ಪ ಅವರಿ ಕುಂಬಾ ಕಲಾ ನಿಗಮ ಸ್ಥಾಪಿಸಿ ಹಲವಾರು ಅನುಕೂಲ ಮಾಡಿಕೊಟ್ಟಿದ್ದರು, ಈಗ ಆ ಮಂಡಳಿಯನ್ನು ವಿಸರ್ಜಿಸಲಾಗಿದೆ, ಈ ದೃಷ್ಟಿಯಿಂದ ರಾಜ್ಯದಲ್ಲಿ ಸಂಘಟನೆಯನ್ನು ಬಲಗೊಳಿಸಬೇಕೆಂದು ಉದ್ದೇಶದಿಂದ ಎಲ್ಲಾ ಜಿಲ್ಲೆಯಲ್ಲೊ ಪ್ರವಾಸ ಮಾಡಿ ಪದಾಧಿಕಾರಿಗಳನ್ನು ಆಯ್ಕೆ ಮಾಡುತ್ತಿದ್ದು, ಮುಂದೆ ಸರ್ವಜ್ಞ ಜಯಂತಿನ್ನು ಅದ್ದೂರಿಯಾಗಿ ಮಾಡಿ ಸಮ್ಮೇಳನ ಮಾಡಲಾಗುವುದು ಎಂದರು.

**ಪದಾಧಿಕಾರಿಗಳ ಆಯ್ಕೆ**

ಈ ಸಂದರ್ಭದಲ್ಲಿ ಜಿಲ್ಲಾ ಪದಾಧಿಕಾರಿಗಳನ್ನು ನೇಮಿಸಲಾಯಿತು, ಜಿಲ್ಲಾಧ್ಯಕ್ಷರಾಗಿ ಮಹದೇವ ಸ್ವಾಮಿ, ಮಹಿಳಾ ಜಿಲ್ಲಾಧ್ಯಕ್ಷರಾಗಿ ಸುಧಾ ಅವರಿಗೆ ನೇಮಕಾತಿ ಆದೇಶ ವಿತರಿಸಿದರು. ನೂತನ ಜಿಲ್ಲಾಧ್ಯಕ್ಷ ಮಹದೇವಸ್ವಾಮಿ ಮಾತನಾಡಿ ಜಿಲ್ಲೆಯಲ್ಲಿ ಎಲ್ಲರ ಸಹಕಾರ ಪಡೆದು ಸಂಘವನ್ನು ಸಂಘಟಿಸಿ, ರಾಜ್ಯ ಸಂಘದ ಆಶಯದಂತೆ ಸಂಘಟನೆ ಮಾಡಲಾಗುವುದು ಎಂದರು. ಪತ್ರಿಕಾಗೋಷ್ಠಿಯಲ್ಲಿ ರಾಷ್ಟ್ರೀಯ ಖಜಾಂಚಿ ವೆಂಕಟರಾಜು, ಯುವ ರಾಜ್ಯಾಧ್ಯಕ್ಷ ನಿತ್ಯಾಭರಣ ಚೌಡಶೆಟ್ಟಿ, , ರಾಜ್ಯ ಕಾರ್ಯಾಧ್ಯಕ್ಷ ರಾಮಶೆಟ್ಟಿ, ಯಳಂದೂರು ತಾಲ್ಲೂಕು ಅಧ್ಯಕ್ಷ ಉಮೇಶ್, ಕೊಳ್ಳೇಗಾಲ ತಾಲ್ಲೂಕು ಅಧ್ಯಕ್ಷ ಬಸವಣ್ಣ, ಚಾಮರಾಜನಗರ ತಾಲೂಕು ಅಧ್ಯಕ್ಷ ಕೇಶವಮೂರ್ತಿ ಇದ್ದರು.

**ಪ್ರೊ.ಟಿ.ಕೆ.ಕೆಂಪೇಗೌಡ ಹೇಳಿಕೆ**

# ಕುವೆಂಪು ಸಾಹಿತ್ಯ ಭವಿಷ್ಯ ರೂಪಿಸಲಿದೆ



ಮೈಸೂರು: ಕುವೆಂಪು ಅವರ ಸಾಹಿತ್ಯವನ್ನು ಓದುತ್ತಾ ಓದರೆ ನಾವು ಭವಿಷ್ಯವನ್ನು ರೂಪಿಸಿಕೊಳ್ಳಬಹುದು ಎಂದು ಮಹಾರಾಜ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಪ್ರೊ.ಟಿ.ಕೆ.ಕೆಂಪೇಗೌಡ ಹೇಳಿದರು.

ನಗರದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಕುವೆಂಪು ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ವತಿಯಿಂದ ನಡೆದ ರಾಷ್ಟ್ರಕವಿ ಕುವೆಂಪು ಅವರ 122ನೇ ಜನ್ಮಾದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಇಂದು ನಾವು ಪ್ರಕ್ಷುಬ್ಧ ಸ್ಥಿತಿಯಲ್ಲಿದ್ದೇವೆ. ಹಿಂಸೆ, ಕ್ರೌರ್ಯ, ಯುದ್ಧ ಹಾಗೂ ಮನಶಾಂತಿಯನ್ನು ಕಳೆದುಕೊಂಡು ಜೀವಿಸುತ್ತಿದ್ದೇವೆ. ನಮ್ಮ ಜೀವನದಲ್ಲಿ ಪ್ರೀತಿ, ಸಹನೆ ಹಾಗೂ ಮನಶಾಂತಿ ಬೇಕೆಂದರೆ ನಾವು ಕುವೆಂಪು ಅವರ ಸಾಹಿತ್ಯದ ಕಡೆಗೆ ಹೋಗಬೇಕು ಎಂದು ಹೇಳಿದರು.

ಕುವೆಂಪು ಅವರ ಪ್ರತಿಯೊಂದು ಅಕ್ಷರವೂ ಕೂಡ ಜ್ಞಾನದ ಸಂಕೇತವಾಗಿದೆ. ಒಂದು ಜನಾಂಗದ ಕಣ್ಣನ್ನು ತೆರೆಯಿಸಿದ ಕವಿ ಕುವೆಂಪು. ಕುವೆಂಪು ಅವರ ಸಾಹಿತ್ಯ, ಅವರ ಬದುಕು ನಮಗೆ ಪ್ರಶ್ನೆ ಮಾಡುವುದನ್ನು ಹೇಳಿಕೊಟ್ಟಿದೆ. ಅಂಬೇಡ್ಕರ್ ಅವರು ಬರುವುದಕ್ಕಿಂತ ಮುಂಚೆಯೇ ಪ್ರಜಾಪ್ರಭುತ್ವದ ಬಗ್ಗೆ ಚಿಂತನೆ ಮಾಡಿದ್ದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಸ್ಪೃಶ್ಯತೆ, ಜಾತಿಯತೆ ಹೇಗೆ ತೊಲಗಬೇಕು ಎಂಬುದನ್ನು ಜಲಗಾರ ಹಾಗೂ ಶೂದ್ರ ತಪಸ್ವಿ ನಾಟಕದಲ್ಲಿ ಬರೆದಿದ್ದಾರೆ ಎಂದು ತಿಳಿಸಿದರು.

ಕುವೆಂಪು ಅವರ ಸಾಹಿತ್ಯವನ್ನು ಕಾಲದ ಕನ್ನಡಿ ಎಂದು ಕರೆಯುತ್ತಾರೆ. ನಮ್ಮ ಮನಸ್ಸನ್ನು ಸರಿ ಮಾಡಿಕೊಳ್ಳಲು ಕುವೆಂಪು ಅವರ ದಾರ್ಶನಿಕ ಚಿಂತನೆಗಳು ಅವಶ್ಯಕವಾಗಿದೆ. ಕುವೆಂಪು ಅವರು ಭವಿಷ್ಯದರ್ಶಿಯಾಗಿದ್ದರು. ಭೂತಕಾಲವನ್ನು ಪರಿಶೀಲಿಸಿ ವರ್ತಮಾನವನ್ನು ಸರಿಪಡಿಸಿ ಭವಿಷ್ಯವನ್ನು ಕಟ್ಟಿಕೊಳ್ಳುವುದನ್ನು ಹೇಗೆ ಎಂದು ತಿಳಿಸಿದ್ದಾರೆ ಎಂದು ಹೇಳಿದರು.

ಕುವೆಂಪು ಅವರು ಕುಲಪತಿಗಳಾಗಿದ್ದ ಕಾಲದಲ್ಲಿ ಕುಲಪತಿಗಳನ್ನು, ಕುಲಸಚಿವರನ್ನು ರಾಜಕಾರಣಿಗಳು ಗೌರವಿಸುತ್ತಿದ್ದರು. ರಾಜಕಾರಣಿಗಳೇ ಅವರ ಬಳಿ ಬರುತ್ತಿದ್ದರು. ಆದರೆ ಇಂದು ಕುಲಪತಿಗಳು, ಕುಲಸಚಿವರೇ ರಾಜಕಾರಣಿಗಳಿಗಾಗಿ ಕಾಯಬೇಕಾದ ಪರಿಸ್ಥಿತಿ ಬಂದಿದೆ. ರಾಜಕಾರಣಿಗಳಿಗೂ ಬೈದಂತಹ ಕವಿ ಇದ್ದರೆ ಅದು ಕುವೆಂಪು ಅವರು ಮಾತ್ರ. ಏಕೀಕರಣದ ಕಾಲದಲ್ಲಿ ಕುವೆಂಪು ಅವರಿಗೆ ನೋಟಿಸ್ ಕೊಟ್ಟಾಗ ಕುವೆಂಪು ಅವರು ಒಂದು ಪದ್ಯದ ಮೂಲಕವೇ ಸರ್ಕಾರಕ್ಕೆ ನೋಟಿಸ್ ಅನ್ನು ನೀಡಿದ್ದರು ಎಂದರು. ಕುವೆಂಪು ಅವರ ಪದ್ಯಕ್ಕೆ ಸರ್ಕಾರವೇ ನಡುಗುತ್ತಿತ್ತು. ಪ್ರಮುಖವಾಗಿ ರಾಜಪ್ರಭುತ್ವವನ್ನೇ ಕುವೆಂಪು ಅವರು ಎದುರು ಹಾಕಿಕೊಂಡಿದ್ದರು. ಜಯಚಾಮ ರಾಜೇಂದ್ರ ಒಡೆಯರ್ ಫೇಲ್ ಆಗಿದ್ದರು. ಅವರನ್ನು ಹೆಚ್ಚಿನ ಅಂಕ ನೀಡಿ ಪಾಸ್ ಮಾಡುವಂತೆ ಒತ್ತಾಯಿಸಿದರೂ ಅವರು ಜಗ್ಗಲಿಲ್ಲ. ಕುವೆಂಪು ಅವರು ಸಾಮಾನ್ಯ ವ್ಯಕ್ತಿಯನ್ನೂ ಸಹ ಶ್ರೀ ಸಾಮಾನ್ಯನನ್ನಾಗಿ ಮಾಡುತ್ತಾರೆ ಎಂದರು. ಇಂದು ವಿಶ್ವಮಟ್ಟಕ್ಕೆ ಏರಬಲ್ಲ ಕವಿ ಎಂದರೆ ಅದು ಕುವೆಂಪು. ಇಂದಿನ ಎಲ್ಲಾ ಸಮಸ್ಯೆಗಳಿಗೆ ಕುವೆಂಪು ಅವರ ಸಾಹಿತ್ಯದಲ್ಲಿ ಉತ್ತರವಿದೆ. ಎಂದು ಹೇಳಿದರು.

ಕಾರ್ಯಕ್ರನದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಎಸ್.ಕೆ.ನವೀನ್ ಕುಮಾರ್, ಶೈಕ್ಷಣಿಕ ವಿಭಾಗದ ಡೀನ್ ಪ್ರೊ.ಎಂ.ರಾಮನಾಥ ನಾಯುಡು, ಪರಿಕ್ಷಾಂಗ ಕುಲಸಚಿವ ಡಾ.ಸಿ.ಎಸ್.ಆನಂದ ಕುಮಾರ್, ಕುವೆಂಪು ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಸಂಯೋಜನಾsಕಾರಿ ಡಾ.ಎನ್.ಆರ್.ಚಂದ್ರೇಗೌಡ ಹಾಜರಿದ್ದರು.

## ಕುವೆಂಪು ಜಯಂತಿಗೆ ಭಾಗವಹಿಸದವರಿಗೆ ನೋಟಿಸ್

ಮೈಸೂರು: ಇಲ್ಲಿನ ಕೆಎಸ್ಒಯು ಆವರಣದ ಕಾವೇರಿ ಸಭಾಂಗಣದಲ್ಲಿ ನಡೆದ ರಾಷ್ಟ್ರಕವಿ ಕುವೆಂಪು ಅವರ 122ನೇ ಜನ್ಮಾದಿನಾಚರೆಗೆ ಬೆರಳಣಿಕೆಯಷ್ಟೇ ಮಂದಿ ಹಾಜರಾಗಿದ್ದರು. ಕೆಎಸ್ಒಯು ಕ್ಯಾಂಪಸ್ ನಲ್ಲಿ ಒಟ್ಟು 600 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದರೂ ಸಹ ಶೇ.50 ರಷ್ಟು ಮಂದಿಯೂ ಭಾಗವಹಿಸದೆ ಕಾರ್ಯಕ್ರಮದಲ್ಲಿ ಭಾಗಿಯಾಗಿರಲಿಲ್ಲ.

ಕೆಎಸ್ಒಯು ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ ಮಾತನಾಡಿ, ಇಂತಹ ಕಾರ್ಯ ಕ್ರಮಗಳು ಕುಲಪತಿ, ಕುಲಸಚಿವರಿಗಾಗಿಯೇ ಮಾಡಿರುವುದಲ್ಲ. ಎಲ್ಲಾ ಅಧ್ಯಾಪಕರಿಗಾಗಿ ಮಾಡಿರುವ ಕಾರ್ಯಕ್ರಮ. ಇಂತಹ ಕಾರ್ಯಕ್ರಮಗಳಿಗೆ ಸಾವಿರಾರು ಸಂಖ್ಯೆ ಯಲ್ಲಿ ಸೇರಬೇಕು ಇಲ್ಲಿ ನೋಡಿದರೆ ನೂರರ ಸಂಖ್ಯೆಯಷ್ಟು ಮಂದಿ ಕಾಣಿಸುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕುವೆಂಪು ಅವರು ಕಾಯಕ ಯಾವುದಾದರೇನು ಅವೆಲ್ಲವೂ ಪೂಜ್ಯನೀಯ ಎಂದು ಹೇಳಿದ್ದಾರೆ. ಕುವೆಂಪು ಅವರಂತಹ ವ್ಯಕ್ತಿಗೆ ಗೌರವ ತೋರಿಸುತ್ತಿಲ್ಲ. ಇಂತಹ ಕಾರ್ಯಕ್ರಮ ಕೇವಲ ನಾಲ್ಕಾರು ಮಂದಿಗಾಗಿ ಮಾಡುತ್ತಿಲ್ಲ. ಯರ?ಯಾರು ಕಾರ್ಯಕ್ರಮಕ್ಕೆ ಬಂದಿಲ್ಲವೂ. ಇಂತಹ ವ್ಯಕ್ತಿಗಳ ಸಂದೇಶಗಳನ್ನು ಅಳವಡಿಸಿಕೊಳ್ಳದಿದ್ದರೂ ಅವರ ವಿಚಾರ ಧಾರೆಗಳನ್ನು ತಿಳಿದುಕೊಳ್ಳಲು ಬರಬೇಕುತ್ತು ಎಂದು ತಿಳಿಸಿದರು.

ಕಾರ್ಯಕ್ರಮಕ್ಕೆ ಹಾಜರಾಗದ ಅಧಿಕಾರಿಗಳಿಗೆ, ಅದ್ಯಾಪಕರಿಗೆ ನೋಟಿಸ್ ನೀಡುವಂತೆ ಹಾಗೂ ಸೂಕ್ತ ಕಾರಣ ಪಡೆಯುವಂತೆ ಕುಲಸಚಿವ ಪ್ರೊ.ಎನ್.ಕೆ.ನವೀನ್‌ಕುಮಾರ್ ಅವರಿಗೆ ಸೂಚಿಸಿದರು.

## ಜ್ಞಾನ ಪ್ರಕಾಶ ಸ್ವಾಮೀಜಿಯಿಂದ ಅಕ್ರಮ ಭೂಮಿ ಮಾರಾಟ ಯತ್ನ: ಆರೋಪ




ಮೈಸೂರು: ಕಲ್ಬುರ್ಗಿ ಜಿಲ್ಲೆಯ ಸೇಡಂ ತಾಲೂಕಿನ ಕೂಡ್ಲಾದಲ್ಲಿರುವ ಉರಿಲಿಂಗ ಪೆದ್ದಿ ಸಂಸ್ಥಾನ ಮಠದ ಮೈಸೂರಿನ ಗಾಂಧಿನಗರದಲ್ಲಿರುವ ಶಾಖೆ ಮಠದಲ್ಲಿ ಜ್ಞಾನ ಪ್ರಕಾಶ್ ಅವರು ಸ್ವಯಂಘೋಷಿತ ಸ್ವಾಮೀಜಿಯಾಗಿ ಶಾಖಾ ಮಠದ ಉತ್ತರಾಧಿಕಾರಿ ಎಂದು ಹೇಳಿಕೊಂಡು ಈ ಹಿಂದೆ ಮಠ ಸ್ಥಾಪಿಸಿದ ಸ್ವಾಮೀಜಿಯವರು ಮಠಕ್ಕಾಗಿ ಖರೀದಿಸಿದ್ದ ವರುಣ ಹೋಬಳಿ ದುದ್ದಗೆರೆಯಲ್ಲಿನ ಹಲವಾರು ಎಕರೆ ಜಮೀನನ್ನು ಇತರರೊಡನೆ ಸೇರಿಕೊಂಡು ಅಕ್ರಮವಾಗಿ ಮಾರಾಟ ಮಾಡಲು ಯತ್ನಿಸಿದ್ದಾರೆ ಎಂದು ಕೂಡ್ಲಾದಲ್ಲಿನ ಮಠದ ಪೀಠಾಧಿಕಾರಿ ಶಿವಲಿಂಗಸ್ವಾಮೀಜಿ ಗಂಭೀರ ಆರೋಪ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2005 ರಲ್ಲಿ ಸೇಡಂ ನ್ಯಾಯಾಲಯವೇ ಜ್ಞಾನ ಪ್ರಕಾಶ್ ಸ್ವಾಮೀಜಿಗೂ, ಮಠಕ್ಕೂ ಯಾವುದೇ ಸಂಬಂಧವಿಲ್ಲವೆಂದು ಆದೇಶ ನೀಡಿದೆ. ಆದರೂ ಇದನ್ನು ಧಿಕ್ಕರಿಸಿ ಇವರು ಗಾಂಧೀನಗರದ ಶಾಖಾ ಮಠದ ಪೀಠಾಧಿಪತಿ ಎಂದು ಹೇಳಿಕೊಳ್ಳುತ್ತ, ತಾನು ಅಂಬೇಡ್ಕರ್ ವಾದಿ ಎಂದು ಬಿಂಬಿಸಿಕೊಳ್ಳುತ್ತ, ಪ್ರಭಾವೀ ರಾಜಕಾರಣಿಗಳ ಜೊತೆಗೆ ವೇದಿಕೆ ಹಂಚಿಕೊಳ್ಳುತ್ತ ಜನರನ್ನು ಮರಳು ಮಾಡುತ್ತಿದ್ದಾರೆಂದು ದೂರಿದರು. ಈ ಮಠಕ್ಕೆ ಸಂಬಂಧಪಟ್ಟ ದುದ್ದಗೆರೆ (ಲಕ್ಷ್ಮೀಪುರ) ದಲ್ಲಿ ಇರುವ ಸರ್ವೆ ನಂ.35. 36. 37, 38, 41, 42, 111/1, 112, 90. 147, 108, 1430 ಜಮೀನುಗಳ ಬಗ್ಗೆ ತಪ್ಪು ಮಾಹಿತಿ ನೀಡಿ, ಇತರೆ ಅಕ್ರಮ ಖಾತೆದಾರರೊಡನೆ ಸೇರಿಕೊಂಡು 6.52 ಕೋಟಿ ರೂ.ಗಳಿಗೆ ಇಬ್ಬರಿಗೆ ಮಾರಾಟ ಮಾಡಲು ಯತ್ನಿಸಿ ಒಂದು ಕೋಟಿ ಮುಂಗಡ ಪಡೆದು ಎಲ್ಲರೂ ಹಂಚಿಕೊಂಡಿದ್ದಾರೆ. ಇದರೊಡನೆ ಕೂಡ್ಲಾದಲ್ಲಿನ ಶಿವಯೋಗಿ ಸ್ವಾಮಿ ಸ್ಮಾರಕ ವಿದ್ಯಾವರ್ಧಕ ಸಂಸ್ಥೆಗೂ ಅಧ್ಯಕ್ಷನೆಂದು ಹೇಳಿಕೊಂಡು ಸಹಿ ಮಾಡಿ ಒಂದು ಲಕ್ಷ ರೂ. ಪಡೆದು ಅಕ್ರಮ ಎಸಗಿದ್ದಾರೆ.

ಉರಿಲಿಂಗ ಪೆದ್ದಿ ಮಠದ ಅಭಿವೃದ್ಧಿಗಾಗಿ ಸಮಾಜ ಕಲ್ಯಾಣ ಇಲಾಖೆಯಿಂದ 50 ಲಕ್ಷ ಮಂಜೂರಾದ ವೇಳೆ ಅದರಲ್ಲಿನ 25 ಲಕ್ಷ ಪಡೆದಿದ್ದ ನಂಜುಂಡಸ್ವಾಮಿ ಎಂಬುವವರು ಸಂಶಯಾಸ್ಪದ ಮರಣ ಹೊಂದಿದ್ದು, ಇವರ ಮುಂದಿನ ಗುರಿ ತಾವೇ ಆಗಿದ್ದು, ಆರೋಪಿತ ಸ್ವಾಮೀಜಿ ಉಳಿದ 25 ಲಕ್ಷಗಳನ್ನು ಪಡೆದು ವಂಚಿಸಿದ್ದಾರೆ. ಹೀಗಾಗಿ ಕಂದಾಯ ಇಲಾಖೆ, ಪೊಲೀಸ್ ಇಲಾಖೆ, ಮೊದಲಾದವು ಸೂಕ್ತ ತನಿಖೆ ನಡೆಸಬೇಕೆಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ದಸಂಸ ಮುಖಂಡರು ಹಾಗೂ ದುದ್ದಗೆರೆ ಗ್ರಾಮದ ಸಾಗುವಳಿದಾರರಾದ ಯಡದೊರೆ ಮಹದೇವಯ್ಯ, ಪುಟ್ಟಸ್ವಾಮಿ, ಶಿವಮೂರ್ತಿ, ಗುರುಸ್ವಾಮಿ, ಮಹಾದೇವ್ ಮತ್ತಿತರರು ಉಪಸ್ಥಿತರಿದ್ದರು.

> ಕಲ್ಬುರ್ಗಿ ಜಿಲ್ಲೆಯ ಸೇಡಂ ತಾಲೂಕಿನ ಕೂಡ್ಲಾದಲ್ಲಿರುವ ಉರಿಲಿಂಗ ಪೆದ್ದಿ ಸಂಸ್ಥಾನ ಮಠ ಹಾಗೂ ಮೈಸೂರಿನ ಗಾಂಧಿನಗರದಲ್ಲಿರುವ ಶಾಖೆ ಮಠಕ್ಕೆ ಪೀಠಾಧ್ಯಕ್ಷರಾಗಿ ಹಿರಿಯರು ಆಯ್ಕೆ ಮಾಡಿದ್ದಾರೆ. ದುದ್ದಗೆರೆ (ಲಕ್ಷ್ಮೀಪುರ) ದಲ್ಲಿರುವ ಜಮೀನು ಹಿರಿಯ ಸ್ವಾಮೀಜಿಗಳ ರಕ್ತ ಸಂಬಂಧಿಗಳಿಗೆ ಸೇರಿದೆ. ನನ್ನ ಮೇಲೆ ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾದದು
>
> –**ಜ್ಞಾನಪ್ರಕಾಶ ಸ್ವಾಮೀಜಿ** ಪೀಠಾಧ್ಯಕ್ಷರು, ಉರಿಲಿಂಗಿ ಪೆದ್ದಿಮಠ

## ಜಿಲ್ಲೆಯಲ್ಲಿ ಗೋವಿಂದ ನಾಮ ಸ್ಮರಣೆ

ರಾಮನಗರ: ಜಿಲ್ಲೆಯ ಆಸ್ತಿಕ ನಾಗರೀಕರು ಮಂಗಳವಾರ ವೈಕುಂಠ ಏಕಾದಶಿಯನ್ನು ಅತ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸಿದರು.



ಜಿಲ್ಲೆಯ ಶ್ರೀ ಶ್ರೀನಿವಾಸನ ದೇವಾಲಯಗಳು ಸೇರಿದಂತೆ ವಿಷ್ಣುವಿನ ವಿವಿಧ ಅವತಾರಗಳ ದೇವಾಲಯಗಳು, ಆಂಜನೇಸ್ವಾಮಿ ದೇವಾಲಯಗಳು ಸೇರಿದಂತೆ ಬಹುತೇಕ ದೇವಾಲಯಗಳಲ್ಲಿ ವೈಕುಂಠ ಏಕಾದಶಿಯ ಅಂಗವಾಗಿ ವಿಶೇಷ ಪೂಜೆ, ಅಲಂಕಾರ ಸೇವೆ, ವೈಕುಂಠ ದ್ವಾರ ಸ್ಥಾಪನೆ, ಪ್ರಸಾದ ವಿತರಣೆ ಮುಂತಾದ ಧಾರ್ಮಿಕ ಕೈಂಕರ್ಯಗಳನ್ನು ಕೈಗೊಳ್ಳಲಾಗಿತ್ತು. ನಗರದ ಐಜೂರು ಭಾಗದಲ್ಲಿರುವ ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿ ಮೂರ್ತಿಗೆ ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು. ದೇವಾಲಯದ ಹೊರ ಹಾಗೂ ಒಳ ಆವರಣವನ್ನು ಹೂವುಗಳಿಂದ ಮತ್ತು ವಿದ್ಯುತ್ ದೀಪಗಳಿಂದ ಸಿಂಗರಿಸಲಾಗಿತ್ತು. ದೇವಾಲದಯಲ್ಲಿ ವೈಕುಂಠ ದ್ವಾರವನ್ನು ಸ್ಥಾಪಿಸಲಾಗಿತ್ತು. ಭಕ್ತರು ವೈಕುಂಠ ದ್ವಾರದ ಮೂಲಕ ತೆರಳಿ ಶ್ರೀನಿವಾಸನ ದರ್ಶನ ಪಡೆದು ಪುನೀತರಾದರು. ದೇವಾಲಯಕ್ಕೆ ಆಗಮಿಸಿದ್ದ ಭಕ್ತ ಸಮೂಹಕ್ಕೆ ಪ್ರಸಾದವಾಗಿ ಲಡ್ಡುಗಳನ್ನು ವಿತರಿಸಲಾಯಿತು. ನಗರದ ಛತ್ರದ ಬೀದಿಯಲ್ಲಿರುವ ಶ್ರೀ ರಾಮನ ದೇಗುಲ, ಅಗ್ರಹಾರದಲ್ಲಿರುವ ಶ್ರೀ ಅಭಯ ಆಂಜನೇಯಸ್ವಾಮಿ ದೇಗುಲ, ಶೆಟ್ಟಿಹಳ್ಳಿಯ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿ ದೇವಾಲಯ, ಎಂ.ಜಿ.ರಸ್ತೆಯಲ್ಲಿರುವ ಶ್ರೀ ಕನ್ನಿಕಾ ಪರಮೇಶ್ವರ ಅಮ್ಮನವರ, ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಾಲಯಗಳಲ್ಲಿ ವೈಕುಂಠ ದ್ವಾರ ಸ್ಥಾಪಿಸಲಾಗಿತ್ತು. ರಾಮನಗರ ಮತ್ತು ಚನ್ನಪಟ್ಟಣ ನಡುವೆ ಇರುವ ಪ್ರಸಿದ್ಧ ಶ್ರೀ ಕೆಂಗಲ್ ಆಂಜನೇಯಸ್ವಾಮಿ ದೇವಾಲಯ, ರಾಮನಗರ ತಾಲ್ಲೂಕು ಬಿಡದಿ ಬಳಿ ಇರುವ ಶ್ರೀ ಕೋತಿ ಆಂಜನೇಯಸ್ವಾಮಿ ದೇವಾಲಯ, ಚನ್ನಪಟ್ಟಣದ ಶ್ರೀ ಅಪ್ರಮೇಯಸ್ವಾಮಿ ದೇವಲಯ, ಮಾಗಡಿಯ ಶ್ರೀ ರಂಗನಾಥಸ್ವಾಮಿ ದೇವಾಲಯ, ಸಾವನದುರ್ಗದ ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿ ದೇವಾಲಯ, ಕನಕಪುರದ ಶ್ರೀ ವೆಂಕಟೇಶ್ವರ ಸ್ವಾಮಿ ದೇವಾಲಯಗಳಲ್ಲಿ ಜನ ಸಾಗರ ನೆರದಿತ್ತು. ಮಂಗಳವಾರ ಬೆಳಿಗ್ಗೆಯಿಂದಲೇ ಭಕ್ತರು ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ತಮ್ಮ ಇಷ್ಟಾರ್ಥಗಳನ್ನು ನಿವೇಧಿಸಿಕೊಂಡರು.

# ಕೆರೆಗಳಿಗೆ ನೀರು ತುಂಬಿಸುವಂತೆ ಆಗ್ರಹಿಸಿ ಪ್ರತಿಭಟನೆ




ಮೈಸೂರು: ಅನುದಾನ ಮಂಜೂರು ಮಾಡಿ ಕಾಮಗಾರಿ ಪೂರ್ಣಗೊಳಿಸಿ ಕೆರೆಗಳಿಗೆ ನೀರು ತುಂಬಿಸುವಂತೆ ಒತ್ತಾಯಿಸಿ ಇಂದು ಅಧೀಕ್ಷಕ ಇಂಜಿನಿಯರ್ ವರುಣ ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ ಧರಣಿ ನಡೆಯಿತು.

ಮನವಿಯನ್ನು ರಘುಪತಿ ಅಧೀಕ್ಷಕ ಅಭಿಯಂತರರುರವರಿಗೆ ಹಾಗೂ ಭಾಸ್ಕರ್ ಕಾರ್ಯಪಾಲಕ ಅಭಿಯಂತರರು ವರುಣರವರಿಗೆ ಸಲ್ಲಿಸಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಜಲ ಸಂಪನ್ಮೂಲ ಸಚಿವರಾದ ಡಿ.ಕೆ.ಶಿವಕುಮಾರ್ ರವರನ್ನು ಕೂಡಲೇ ಅನುದಾನ ಮಂಜೂರು ಮಾಡುವಂತೆ ಒತ್ತಾಯಿಸಲಾಯಿತು. ಸತ್ಯ ಎಎಸ್ ಫೌಂಡೇಶನ್ ಅಧ್ಯಕ್ಷ ಸತ್ಯಪ್ಪ ಮಾತನಾಡಿ ಸಿಂಗರಮಾನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಯ ಸಿಂಗರಮಾರನಹಳ್ಳಿ ಗ್ರಾಮದಲ್ಲಿ 5000 ಜನಸಂಖ್ಯೆ ಇದ್ದು ಸುಮಾರು 6000 ಕುರಿ, ಆಡು ಕೋಳಿ, ಜಾನುವಾರುಗಳ ಸಂಖ್ಯೆ ಇದ್ದು, ಈ ಭಾಗದಲ್ಲಿ ಅತೀ ಕಡಿಮೆ ಮಳೆ ಬೀಳುವ ಪ್ರದೇಶ ಇದಾಗಿರುತ್ತದೆ. ಸಿಂಗರಮಾರನಹಳ್ಳಿ ಗ್ರಾಮ ಪಂಚಾಯ್ತಿಗೆ ಒಳಪಡುವ ಗ್ರಾಮದ ಕೆರೆಗಳಾದ ಸಿದ್ದಮ್ಮನಕಟ್ಟೆ ಕೆರೆ, ಊರುಮಂದಲ ಕೆರೆ, ಚಾಪಯ್ಯನಕಟ್ಟೆ ಕೆರೆ, ಉಂತುರುಕಟ್ಟೆಕೆರೆ, ಚಾಮಪ್ಪನ ಕಟ್ಟೆ ಕೆರೆಗಳನ್ನು ಹೆಚ್.ಡಿ ಕೋಟೆ ತಾಲ್ಲೂಕು ಕಬಿನಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಇಬ್ಬಾಲ ಏತನೀರಾವರಿ ಯೋಜನೆಯಿಂದ ಕ್ಯಾತನಹಳ್ಳಿ ಹತ್ತಿರ ಪರಸಯ್ಯನ ಕಟ್ಟೆಯಿಂದ ಸಿಂಗರಮಾರನಹಳ್ಳಿ ಗ್ರಾಮದ ಕೆರೆಗಳಿಗೆ ಪರಸಯ್ಯನ ಕಟ್ಟೆಯಿಂದ ಇಬ್ಬಾಲ ಏತ ನೀರಾವರಿ ಯೋಜನೆಗೆ ಸಂಬಂಧಿಸಿದ 350 ಮಿ. ಮೀ. ಆಚಿಟಜಣಾಡಿ ಪೈಪ್ ಲೈನ್ ಹಾದುಹೋಗಿದ್ದು, ಸದರಿ ಪರಸಯ್ಯನಕಟ್ಟೆಯಿಂದ ಒಂದು ಕಿ. ಮೀ. ನಷ್ಟು ಉದ್ದ ಪೈಪ್ ಲೈನ್ ವ್ಯವಸ್ಥೆ ಮಾಡಿದಲ್ಲಿ ಸಿಂಗರಮಾರನಹಳ್ಳಿ ಕೆರೆ ಹಾಗೂ ಇನ್ನಿತರೆ ಕೆರೆಗಳನ್ನು ತುಂಬಿಸಬಹುದಾಗಿರುತ್ತದೆ.

ಅದರಂತೆ ಹೆಚ್.ಡಿ ಕೋಟೆ ತಾಲ್ಲೂಕಿನ ಕಬಿನಿಗೆ ಅಡ್ಡಲಾಗಿ ಇಬ್ಬಾಲ ಏತನೀರಾವರಿ ಯೋಜನೆಯಿಂದ ಕ್ಯಾತನಹಳ್ಳಿ ಹತ್ತಿರ ಪರಸಯ್ಯನ ಕಟ್ಟೆಯಿಂದ ಸಿಂಗರಮಾರನಹಳ್ಳಿ ಗ್ರಾಮದ ಕೆರೆಗಳಿಗೆ ನೀರು ತುಂಬಿಸಲು ಹಿಂದೆಯ ಮನವಿ ಮಾಡಲಾಗಿತ್ತು ಎಂದರು. ಭೀಮರಾಜು ಪೆಟ್ರೋಲ್ ಬಂಕ್ ಮಾಲೀಕರು, ಗ್ರಾಮದ ಮುಖಂಡರಾದ ಈಶ್ವರಗೌಡ, ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಜಯರಾಮ್, ಮುನಿಯಗೌಡ, ಸಿಂಗಾರಿ ಗೌಡ, ರಾಮೇಗೌಡ, ಕೆಂಡಗಣ್ಣೆಗೌಡ, ನಾಗನಾಯಕ, ಕುಮಾರನಾಯಕ, ಚೇತನ್ ಬೀರೇಗೌಡ, ಚಿನ್ನಸ್ವಾಮಿ, ವಿಜಯಕುಮಾರ್, ಸೋಮಶೆಟ್ಟಿ, ಕಾಳೇಗೌಡ, ರವಿ, ತಿಮರಾಜು ರವೀ ನಾಯಕ, ಸಿದ್ದನಾಯಕ, ಮಂಚನಾಯಕ, ಕುಂಬಾರ ಕೊಪ್ಪಲು ಜೊತೆಗೆ ಮಹದೇವ ನಾಯಕ ಮಂಜು ಗೊಬ್ಬರದ ಅಂಗಡಿ ಮಂಜೇಗೌಡ ಕಿಟ್ಟಿ ಗಾಡಿ ಸುರೇಶ್ ಸಂಜು ಪವನ್ ಕುಮಾರ್ ರಮೇಶ್ ನಾಯಕ ಮುಂತಾದವರು ಹಾಜರಿದ್ದರು.

## ಎನ್‌ಜೆಯಲ್ಲಿ ಅಪರೂಪದ ಶಸ್ತ್ರಚಿಕಿತ್ಸೆ



ಮೈಸೂರು: ಸಿಸ್ಟಿಕ್ ಫೈಬ್ರೋಸಿಸ್ ಸಂಬಂಧಿತ ದೀರ್ಘ ಕಾಲದ ಕ್ಯಾಲ್ಸಿಫಿಕ್ ಪ್ಯಾಂಕ್ರಿಯಾಟೈಟಿಸ್ ಸಮಸ್ಯೆಯಿಂದ ಬಳಲುತ್ತಿದ್ದ 14 ವರ್ಷದ ಬಾಲಕನಿಗೆ ಎನ್‌ಜೆ ಆಸ್ಪತ್ರೆಯಲ್ಲಿ ಯಶಸ್ವಿಯಾಗಿ ಶಸ್ತ್ರ ಚಿಕಿತ್ಸೆ ನಡೆಸುವ ಮೂಲಕ ಆತನಿಗೆ ಹೊಸ ಜೀವನ ನೀಡಲಾಗಿದೆ ಎಂದು ಹಿರಿಯ ತಜ್ಞ ವೈದ್ಯ ಡಾ.ಸತೀಶ್‌ದುರ್ಗೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಶಸ್ತ್ರ ಚಿಕಿತ್ಸೆಯಲ್ಲಿ ಡಾ.ಸುದೀಶ್ ದುರ್ಗೇಶ್ ಸಹ ಭಾಗಿಯಾಗಿದ್ದರು. ಸಂಕೀರ್ಣವಾದ ಮೇದೋಜ್ಜೀರಕ ಗ್ರಂಥಿಯ ಸಮಸ್ಯೆಯುಂಟಾಗಿತ್ತು. ಇದಕ್ಕಾಗಿ 4ಕೆ ಸಕ್ರಿಯಗೊಂಡ 3ಡಿ ಲ್ಯಾಪ್ರೊಸ್ಕೋಪಿಕ್ ನೂತನ ವಿಧಾನ ಅನುಸರಿಸಿಕೊಂಡು ಶಸ್ತ್ರ ಚಿಕಿತ್ಸೆಯನ್ನು ಕೈಗೆಟಕುವ ದರದಲ್ಲಿ ನಡೆಸಿದ್ದು, ಈಗ ಬಾಲಕ ಚೇತರಿಸಿಕೊಂಡಿದ್ದಾನೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಡಾ.ಸುದೀಶ್ ದುರ್ಗೇಶ್ ಉಪಸ್ಥಿತರಿದ್ದರು.

## ಕ್ಯಾಲೆಂಡರ್ ಬಿಡುಗಡೆ




ಮೈಸೂರು: ಮೈಸೂರಿನ ಭೀಮ ಜ್ಯೋತಿ ಸೌಹಾರ್ದ ಸಹಕಾರಿ ಸಂಘ ಹೊರ ತಂದಿರುವ ನೂತನ ವರ್ಷದ ಕ್ಯಾಲೆಂಡರನ್ನು ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಚಿಂತಕ ಪ್ರೊ.ಎಚ್. ಗೋವಿಂದಯ್ಯ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಅವರು, 2025 ದಲಿತರ ಪಾಲಿಗೆ ಮಹತ್ವದ ವರ್ಷವಾಗಿದೆ. ಈ ವರ್ಷದಲ್ಲಿ ಒಳ ಮೀಸಲಾತಿ ಕುರಿತ ಪ್ರಮುಖ ನಿರ್ಧಾರ ಕೈಗೊಳ್ಳಲಾಯಿತು. ಆದರೆ ಇದೇ ವೇಳೆ ಸರ್ಕಾರ ನಾಗಮೋಹನ ದಾಸ್ ವರದಿ ಗಾಳಿಗೆ ತೂರಿ ಹಲವಾರು ಸಮುದಾಯಗಳ ಮೀಸಲಾತಿ ಕಿತ್ತುಕೊಂಡಿದೆ. ಒಳ ಮೀಸಲಾತಿ ಒಡಕಿನ ಪ್ರಶ್ನೆ ಆಗಬಾರದು, ಬದಲಾಗಿ ಒಗ್ಗಟ್ಟನ್ನು ಬಲಪಡಿಸಬೇಕೆಂದು ಕೋರಿದರು. ಕಾರ್ಯಕ್ರಮದಲ್ಲಿ ಆರ್. ಲಕ್ಷ್ಮಣ್, ಕೆ.ಆರ್.ವಿನುತ, ಎನ್.ಶ್ರೀನಿವಾಸಲು, ಬಿ.ಎಂ.ಮಹದೇವಯ್ಯ, ತಿಪ್ಪಯ್ಯ, ಸಿ.ಪಿ.ರಂಗಯ್ಯ ಮತ್ತಿತರರು ಉಪಸ್ಥಿತರಿದ್ದರು.

## ಮಿಸ್ಟರ್ ಇಂಡಿಯಾ ಮುಡಿಗೇರಿಸಿಕೊಂಡ ಹೇಮಂತ್

ಚಾಮರಾಜನಗರ, ಮಿಸ್ಟರ್ ಇಂಡಿಯಾ ಸ್ಪರ್ಧೆಯಲ್ಲಿ ಕೋಡಿಮೋಳೆ ಬಸವನಪುರದ ವಿದ್ಯಾರ್ಥಿ ಬಿ.ಆರ್. ಹೇಮಂತ್ ಮಿಸ್ಟರ್ ಇಂಡಿಯಾ ತನ್ನ ಮುಡಿಗೇರಿಸಿಕೊಂಡು ಅಂತಾರಾಷ್ಟ್ರೀಯ ಸ್ಪರ್ಧೆಗೆ ಆಯ್ಕೆಯಾಗಿ ಜಿಲ್ಲೆಗೆ, ರಾಜ್ಯ, ದೇಶಕ್ಕೆ ಕೀರ್ತಿ ತಂದಿದ್ದಾನೆ.




ಗೋವಾದಲ್ಲಿ ಶನಿವಾರ ಫಿಟ್ನೆಸ್ ಇಂಟರ್‌ನ್ಯಾಷಿನಲ್ ಫೆಡರೇಷನ್ ವತಿಯಿಂದ ನಡೆದ ಮಿಸ್ಟರ್ ಇಂಡಿಯಾ ಸ್ಪರ್ಧೆಯಲ್ಲಿ ಹೇಮಂತ್ ಭಾಗವಹಿಸಿ ಪಿಜಿಕ್ಯೂ ಸಿನಿಯರ್ ಹಾಗೂ ಜೂನಿಯರ್ ಓವರಾಲ್ ಚಾಂಪಿಯನ್‌ಷಿಪ್ ತನ್ನಾದಾಗಿಸಿಕೊಂಡು ಮಿಂಚಿದ್ದಾರೆ. ಇವರು ಕೋಡಿಮೋಳೆ ಬಸವನಪುರ ಗ್ರಾಮದ ಬಿ.ಜಿ ರವಿಕುಮಾರ್ ಪುತ್ರ. ಎಂಬಿಎ ಪದವಿ ಮುಗಿಸಿ. ಮಂಗಳೂರಿನ ಜಿಮ್ ವೊಂದರಲ್ಲಿ ವರ್ಕೌಟ್ ಮಾಡುತ್ತಾ ಉದ್ಯೋಗಕ್ಕಾಗಿ ಪ್ರಯತ್ನ ಮಾಡುತ್ತಿದ್ದಾರೆ. ಈ ಸ್ಪರ್ಧೆಯಲ್ಲಿ ಮಿಸ್ಟರ್ ಇಂಡಿಯಾ ಮುಡಿಗೇರಿಸಿಕೊಂಡಿರುವುದು ತುಂಬಾ ಸಂತಸವಾಗಿದ್ದು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ಗೆಲುವಿನ ನಗೆ ಬೀರುವ ಇಂಗಿತ ವ್ಯಕ್ತಪಡಿಸಿದರು.

**ಅಭಿನಂದನೆ :** ಮಿಸ್ಟರ್ ಇಂಡಿಯಾ ತನ್ನ ಮುಡಿಗೇರಿಸಿಕೊಂಡಿರುವ ಬಿ. ಆರ್. ಹೇಮಂತ್ ಅವರನ್ನು ಕಾಂಗ್ರೆಸ್ ಮುಖಂಡ ಜಡೇಸ್ವಾಮಿ, ಕೋಡಿಮೋಳೆ ಬಸವನಪುರ ಗ್ರಾಮಸ್ಥರು ಅಭಿನಂದಿಸಿದ್ದಾರೆ.

# ಜಿಲ್ಲಾ ಪತ್ರಕರ್ತರ ಸಂಘದ ಡೈರಿ, ಕ್ಯಾಲೆಂಡರ್ ಬಿಡುಗಡೆ



ಮೈಸೂರು: ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ನೂತನವಾಗಿ ಹೊರ ತಂದಿ ರುವ ಕ್ಯಾಲೆಂಡರ್ ಮತ್ತು ಡೈರಿಯನ್ನು ಜಿಲ್ಲಾ ಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಬಿಡುಗಡೆಗೊಳಿಸಿದರು.

ಬಳಿಕ ಮಾತನಾಡಿದ ಅವರು, ಬೇರೆ ಜಿಲ್ಲೆಗಳಿಗೆ ಹೋಲಿಸಿಕೊಂಡರೆ ಮೈಸೂರಿನ ಪತ್ರಿ ಕೋದ್ಯಮ ಗುಣಮಟ್ಟದಿಂದ ಕೂಡಿದ್ದು, ಇಲ್ಲಿನ ಪತ್ರಕರ್ತರು ಉತ್ತಮವಾಗಿ ಕೆಲಸ ನಿರ್ವಹಿಸು ತ್ತಿದ್ದಾರೆ. ಮೈಸೂರಿನ ಪತ್ರಕರ್ತರು ಜಿಲ್ಲಾಡಳಿತದ ಜೊತೆ ಉತ್ತಮ ಬಾಂಧವ್ಯ ಹೊಂದಿದ್ದು, ಅಗತ್ಯ ಸಲಹೆ ಸೂಚನೆ ಗಳನ್ನು ನೀಡುವ ಮೂಲಕ ಆಡಳಿತಾತ್ಮಕವಾಗಿ ಸಹಕಾರಿಯಾಗಿದ್ದಾರೆ. ತಪ್ಪುಗಳು ನಡೆ ದಾಗ ತಪ್ಪೆಂದು ಹೇಳುವ ಪತ್ರಕರ್ತರು, ತಪ್ಪುಗಳು ನಡೆಯದಂತೆ ಎಚ್ಚರ ವಹಿ ಸಲು ಸಹಕಾರಿಯಾಗಿದ್ದಾರೆ. ಬೇರೆ ಜಿಲ್ಲೆಗಳಲ್ಲಿ ಜಿಲ್ಲಾಡಳಿತದ ವಿರುದ್ಧ ನಕಾರಾತ್ಮಕ ಧೋರಣೆ ಹೊಂದಿರುವುದು ಹೆಚ್ಚು ಕಂಡು ಬಂದರೆ, ಮೈಸೂ ರಿನಲ್ಲಿ ಸಕಾರಾತ್ಮಕ ಧೋರಣೆಯನ್ನು ಕಾಣಬ ಹುದು. ಇದು ಜನರ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಒಳ್ಳೆಯ ಬೆಳವಣಿಗೆ ಎಂದು ಹೇಳಿದರು.

ಡೈರಿ ಬಿಡುಗಡೆಗೊಳಿಸಿ ಮಾತನಾಡಿದ ಸಿದ್ಧಾರ್ಥ ಗ್ರೂಪ್ಸ್ ನ ಮುಖ್ಯಸ್ಥರಾದ ಪಿ.ವಿ. ಗಿರಿ, ಕಳೆದ 27 ವರ್ಷಗಳಿಂದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದೊಂದಿಗಿನ ಒಡನಾಟವನ್ನು ಸ್ಮರಿಸಿದರಲ್ಲದೆ, ಪತ್ರಕರ್ತರ ಸಂಖ್ಯೆ ಹೆಚ್ಚಾದಂತೆ ಸಂಘದ ಚಟುವಟಿಕೆಯೂ ಹೆಚ್ಚಾಗಿದೆ. ಸದ್ಯ ಹಳೆ ಪತ್ರಕರ್ತರ ಭವನದಲ್ಲಿ ವಾಹನ ಸಂಚಾರಕ್ಕೆ ಮತ್ತು ಪಾರ್ಕಿಂಗ್ ಸಮಸ್ಯೆ ಇದ್ದು, ಶೀಘ್ರ ಹೊಸ ಭವನ ನಿರ್ಮಾಣ ಮಾಡಬೇಕೆಂದು ಸಲಹೆ ನೀಡಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಎಸ್.ಯುಕೇಶ್ ಕುಮಾರ್ ಮಾತನಾಡಿ, ಪತ್ರಕರ್ತರ ಸಹಕಾರದಿಂದ ಮಾತ್ರ ಜನರ ಜನರನ್ನು ತಲುಪಲು ಸಾಧ್ಯ. ಈ ನಿಟ್ಟಿನಲ್ಲಿ ನನ್ನ ಸೇವಾವಧಿಯಲ್ಲಿ ಅನೇಕ ಪತ್ರಕರ್ತರು ನಮಗೆ ಸಹಕಾರಿಯಾಗಿ ನಿಂತಿದ್ದಾರೆ. ಸಮಾಜ ಏಳಿಗೆಯಲ್ಲಿ ಪತ್ರಕರ್ತರ ಪಾತ್ರವೂ ಮುಖ್ಯ ಎಂದು ತಿಳಿಸಿದರು. ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿದರು. ವೇದಿಕೆಯಲ್ಲಿ ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕಿ ನಿರ್ಮಾಲ, ಸಂಘದ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯ ಣ್, ಉಪಾಧ್ಯಕ್ಷ ರವಿ ಪಾಂಡವಪುರ, ಕಾರ್ಯದರ್ಶಿ ಕೃಷ್ಣೋಜಿ ರಾವ್, ಖಜಾಂಚಿ ಎನ್.ಸುರೇಶ್, ಗ್ರಾ. ಕಾರ್ಯದರ್ಶಿ ದಾರಾ ಮಹೇಶ್, ಉಪಾಧ್ಯಕ್ಷ ವೆಂಕಟಪ್ಪ ಹಾಜರಿದ್ದರು.

## ಶರೀಫ ನಾಟಕ ಪ್ರದರ್ಶಿಸಿದ ವಿದ್ಯಾರ್ಥಿನಿಯರು



ಗುಂಡ್ಲುಪೇಟೆ: ಜೆಎಸ್ಎಸ್ ಮಹಾವಿದ್ಯಾಪೀಠ, ಜೆಎಸ್ಎಸ್ ಕಲಾಮಂಟಪ ಮೈಸೂರು ಹಾಗೂ ಜೆಎಸ್ಎಸ್ ಶಿಕ್ಷಣ ಸಂಸ್ಥೆಗಳು, ಗುಂಡ್ಲುಪೇಟೆ ಇವರ ಸಂಯುಕ್ತಾಶ್ರಯದಲ್ಲಿ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗಾಗಿ ಡಿ.29 ರಿಂದ 31 ಡಿಸೆಂ ಬರ್–2025 ರವರೆಗೆ ‘ಜೆಎಸ್ಎಸ್ ರಂಗೋತ್ಸವ 2025’ ಕಾರ್ಯಕ್ರಮವನ್ನು ಜೆಎಸ್ಎಸ್ ಅನುಭವ ಮಂಟಪದಲ್ಲಿ ಆಯೋಜಿಸಲಾಗಿದ್ದು ಡಿ.30 ರ ಮಂಗಳವಾರ ಎರಡನೇ ದಿನ ಮಧ್ಯಾಹ್ನ 12.00 ಗಂಟೆಗೆ ಮೈಸೂರಿನ ಸರಸ್ವತಿಪುರಂ ಜೆಎಸ್ಎಸ್ ಮಹಿಳಾ ಕಾಲೇಜಿನ ವಿದ್ಯಾರ್ಥಿನಿಯರಿಂದ ‘ಶರೀಫ’ ನಾಟಕವನ್ನು ಪ್ರದರ್ಶಿಸಲಾಯಿತು. .

ವಿದ್ಯಾರ್ಥಿಗಳಿಂದ ಹಾಗೂ ಸಾರ್ವಜನಿಕರಿಂದ ನಾಟಕ ಪ್ರದರ್ಶನಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಈ ನಾಟಕವನ್ನು ಶ್ರೀ ಮಂಜುನಾಥ ಬೆಳಕೆರೆಯವರು ರಚನೆ ಮಾಡಿದ್ದು, ಶ್ರೀಮತಿ ಶಕುಂತಲಾ ಹೆಗಡೆರವರು ನಿರ್ದೇಶಿಸಿದ್ದಾರೆ.


**ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ**

ಕಾರ್ಯದರ್ಶಿಗಳ ಕಾರ್ಯಾಲಯ, ಚಾಮುಂಡಿಬೆಟ್ಟ, ಮೈಸೂರು–570010.

Phone: 0821-2590027, e-mail: beerecochamunditemple@gmail.com

ಸಂ.: ಶ್ರೀಚಾಕ್ಷೇಅಪ್ರಾ(5)ಸಿಆರ್:/2025–26 ದಿನಾಂಕ: 30.12.2025

**ಇ–ಟೆಂಡರ್ ಪ್ರಕಟಣೆ (ದ್ವಿ ಲಕೋಟೆ)**

**ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ**

ಮೈಸೂರು ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಕಛೇರಿಯಿಂದ ಸೂಚಿತ ಅವಧಿಗೆ ಈ ಕೆಳಕಂಡ ವಿವಿಧ ಬಾಬ್ತುಗಳಿಗೆ ಟೆಂಡರ್ ಕರೆಯಲಾಗಿದೆ. ಆಸಕ್ತರು ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ (https://kppp.karnataka.gov.in) ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್ ದಾಖಲೆಯಲ್ಲಿ ತಿಳಿಸಿರುವಂತೆ (Technical qualification criteria)ದ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಈ ಕೆಳಕಂಡಂತೆ ನಿಗದಿಪಡಿಸಿದ ಇ.ಎಂ.ಡಿ.ಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರು ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು. ಇ.ಎಂ.ಡಿ.ಯು ಟೆಂಡರ್‌ನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ (Validity period) 45 ದಿನಗಳ ನಂತರದ ವರೆಗೆ ಮಾನ್ಯತೆ ಇರತಕ್ಕದ್ದು. ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

| ಕ್ರ ಸಂ | ಟೆಂಡರ್ ವಿವರ | ಅಂದಾಜು ಮೊತ್ತ (ರೂ.ಗಳಲ್ಲಿ) | ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) |
|---|---|---|---|
| 1 | Providing Supplying Oligodayamic Disinfection Treated water and fixing iron shed and Fixing of Duplex grade/304 grade SS water Storage loft Tank with supply and installation of CDWP with pressure boosting pump with suitable enclosure works | 21,00,000/- | 42,000/- |

**ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ.**

| ಕ್ರ ಸಂ | ವಿವರ | ದಿನಾಂಕ | ಸಮಯ |
|---|---|---|---|
| 1 | ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವುದು | 28.12.2025 | ಸಂಜೆ 5:00 ಗಂಟೆಯ ನಂತರ |
| 2 | ಟೆಂಡರ್ ಡೌನ್‌ಲೋಡ್ ಮಾಡಲು ಮತ್ತು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ | 05.01.2026 | ಸಂಜೆ 5.30 ಗಂಟೆವರೆಗೆ |
| 3 | ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: | 06.01.2026 | ಬೆಳಿಗ್ಗೆ 11.00 ಗಂಟೆ ನಂತರ |
| 4 | ಹಣಕಾಸಿನ ಟೆಂಡರ್‌ನ್ನು ತೆರೆಯುವ ದಿನಾಂಕ : | 07.01.2026 | ಬೆಳಿಗ್ಗೆ 11.00 ಗಂಟೆ ನಂತರ |

ಸಹಿ/– **ಕಾರ್ಯದರ್ಶಿ**

DIPR/MYS/1437/SA/2025-26 ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಚಾಮುಂಡಿಬೆಟ್ಟ

# ಮನೆ ಹಾನಿಗೊಳಗಾದವರಿಗೆ ಶೀಘ್ರ ಪರಿಹಾರ ನೀಡಿ

## ಕೆ.ಡಿ.ಪಿ ಸಭೆಯಲ್ಲಿ ಸಚಿವ ಎನ್ ಚಲುವರಾಯಸ್ವಾಮಿ ಸೂಚನೆ

**ಮಂಡ್ಯ:** ಜಿಲ್ಲೆಯಲ್ಲಿ ಈ ವರ್ಷ ಒಟ್ಟು 151 ಮನೆಗಳು ಮುಂಗಾರಿನಲ್ಲಿ ಹಾನಿಗೊಳಗಾಗಿವೆ. ಈಗಾಗಲೇ ಅರ್ಹರಿಗೆ 60.36 ಲಕ್ಷ ಪರಿಹಾರ ಧನವನ್ನು ನೀಡಲಾಗಿದೆ. ಅಧಿಕಾರಿಗಳು ಮನೆ ಹಾನಿಗೊಳಗಾದವರ ವಿವರಗಳನ್ನು ರಾಜೀವ್ ಗಾಂಧಿ ಹೌಸಿಂಗ್ ಪೋರ್ಟಲ್ ನಲ್ಲಿ ನಮೂದಿಸಿ ಶೀಘ್ರವಾಗಿ ಮನೆ ನಿರಾಶ್ರಿತರಿಗೆ ಪರಿಹಾರ ಒದಗಿಸಿ ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಕೆ.ಡಿ.ಪಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಮಂಡ್ಯ ಜಿಲ್ಲೆಯಲ್ಲಿ ಕಾವೇರಿ ನಿರಾವರಿ ನಿಗಮದ ಕೆರೆಗಳು ಶೇ 80 ರಷ್ಟು ತುಂಬಿದೆ. ಮಳೆ ಆಶ್ರಿತ ಕೆರೆಗಳು ಮಾತ್ರ ಕಡಿಮೆ ನೀರಿನ ಪ್ರಮಾಣವನ್ನು ಹೊಂದಿದೆ. ಜಿಲ್ಲೆಯಲ್ಲಿ 407 ಕೆರೆಗಳು ಶೇ 100 ರಷ್ಟು ಭರ್ತಿಯಾಗಿದೆ. ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ಪ್ರಾರಂಭಿಸಲು ಇದು ಸೂಕ್ತ ಸಮಯ ಎಂದು ತಿಳಿಸಿದರು.

ಹಿಂದೆ ದರಖಾಸ್ತ್ ಪೋಡಿ ಮಾಡಲು ಕನಿಷ್ಠ 5 ದಾಖಲೆಗಳ ಅಗತ್ಯ ಇತ್ತು. ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ 3 ದಾಖಲೆ ಇದ್ದರೆ ಸಾಕು ದರಖಾಸ್ತ್ ಪೋಡಿ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಯಾವುದೇ ದಾಖಲೆ ಇಲ್ಲದೆ ಇದ್ದಲ್ಲಿ ಸದರಿ ಅರ್ಜಿ ದಾರರ ಊರಿಗೆ ಹೋಗಿ ಪರಿಶೀಲನೆ ಮಾಡಿ ಯಾವುದೇ ಅಡಚಣೆ ಇಲ್ಲದೆ ಇದ್ದಲ್ಲಿ ಅವರಿಗೆ ದರಖಾಸ್ತ್ ಪೋಡಿ ಮಾಡಿಕೊಡಲು ಚಿಂತನೆ ನಡೆಸಲಾಗಿದೆ. ಮುಂದಿನ ದಿನಗಳಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಗುವುದು. ಮುಂದಿನ ಆರು ತಿಂಗಳೊಳಗಾಗಿ ಪೌತಿ ಖಾತಾ ಆಂದೋಲನದಲ್ಲಿ ಯಾವುದೇ ಅರ್ಜಿಯನ್ನು ಬಾಕಿ ಉಳಿಸಿಕೊಳ್ಳದೆ ವಿಲೇವಾರಿ ಮಾಡಿ ಎಂದರು.

ಸಾಮಾಜಿಕ ಭದ್ರತಾ ಯೋಜನೆಯಡಿ ಜಿಲ್ಲೆಯಲ್ಲಿ 3.67.739 ಫಲಾನುಭವಿಗಳು ಇದ್ದು ಮಾಸಿಕ 37.58 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ. ಸದರಿ ವರ್ಷ ಮೃತಪಟ್ಟವರು ಹಾಗೂ ಅನರ್ಹ 15.387 ಫಲಾನುಭವಿಗಳನ್ನು ರದ್ದು ಪಡಿಸಲಾಗಿದೆ. ಅಧಿಕಾರಿಗಳು ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ಪಟ್ಟಿಯನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಪರಿಶೀಲನೆ ನಡೆಸಬೇಕು ಎಂದು ತಿಳಿಸಿದರು.





ಸೆಪ್ಟೆಂಬರ್ ನಿಂದ ಡಿಸೆಂಬರ್ 17 ರವರೆಗೂ ಜಿಲ್ಲೆಯಲ್ಲಿ ಕೃಷಿ ಮತ್ತು ತೋಟಗಾರಿಕೆ ಬೆಳೆಗಳು ಸೇರಿ 69.79 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದ್ದು. 198 ಫಲಾನುಭವಿಗಳಿಗೆ 18.16 ಲಕ್ಷ ಪರಿಹಾರ ಧನ ವಿತರಣೆ ಮಾಡಲಾಗಿದೆ. ಇತ್ತೀಚೆಗೆ ಶ್ರೀರಂಗಪಟ್ಟಣದಲ್ಲಿ ಸಿ.ಡಿ.ಎಸ್ ನಾಲೆ ಒಡೆದು ಉಂಟಾಗಿದ್ದ ಬೆಳೆ ಹಾನಿಗೂ ಪರಿಹಾರ ನೀಡಲಾಗಿದೆ. ಎಸ್.ಡಿ.ಎಂ .ಎಫ್ ಅನುದಾನವನ್ನು ರೂ 5.50 ಕೋಟಿ ಮೊತ್ತದ 4 ಕಾಮಗಾರಿಗಳಲ್ಲಿ 1 ಪೂರ್ಣಗೊಂಡಿದ್ದು ಉಳಿದ 3 ಕಾಮಗಾರಿಗಳು ಶೇ 50 ರಷ್ಟು ಪೂರ್ಣಗೊಂಡಿದೆ ಎಂದು ತಿಳಿಸಿದರು.

ಜಲಧಾರೆ ಮತ್ತು ಜಲ್ ಜೀವನ್ ಮಿಷನ್ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಿ. ವೇಗವಾಗಿ ಕಾಮಗಾರಿ ಪೂರ್ಣಗೊಳ್ಳದಿದ್ದರೆ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗುತ್ತದೆ ಆದ್ದರಿಂದ ಕಾಮಗಾರಿಯ ವೇಗವನ್ನು ಹೆಚ್ಚಿಸಿ. ಎಲ್ಲಿ ಸಮಸ್ಯೆ ಉಂಟಾಗಿದೆ ಅಧಿಕಾರಿಗಳು ನನ್ನ ಗಮನಕ್ಕೆ ತನ್ನಿ. ಜಿಲ್ಲೆಯಲ್ಲಿ ಅಧಿಕಾರಿಗಳು ಸಮನ್ವಯ ಸಾಧಿಸಿ ಕಾರ್ಯ ನಿರ್ವಹಿಸಿ ಇಲ್ಲದ ಪಕ್ಷದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಹಾಗೂ ಮಳವಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕ ಎಂ.ಪಿ ನರೇಂದ್ರ ಸ್ವಾಮಿ ಅವರು ಮಾತನಾಡಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮೈಸೂರು–ಬೆಂಗಳೂರು ರಸ್ತೆಯಲ್ಲಿ ಸಾವಿನ ಪ್ರಮಾಣ ಸಂಖ್ಯೆ ಕಳೆದ ವರ್ಷಗಳಿಗೆ ಹೋಲಿಸಿದರೆ ಕಡಿಮೆಯಾಗಿದೆ. ಇಲ್ಲಿಯವರೆಗೂ ಮಂಡ್ಯ ವ್ಯಾಪ್ತಿಯಲ್ಲಿ 1.86 ಲಕ್ಷ ಜನರು ರಸ್ತೆ ನಿಯಮವನ್ನು ಉಲ್ಲಂಘಿಸಿದ್ದಾರೆ. ಇಲ್ಲಿಯವರೆಗೂ 4.53 ಕೋಟಿ ದಂಡವನ್ನು ವಸೂಲಾತಿ ಮಾಡಲಾಗಿದೆ. ಜಿಲ್ಲೆಯ ವ್ಯಾಪ್ತಿಯಲ್ಲಿ ಅಗತ್ಯ ಇರುವ ಕಡೆ 5 ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಜಂಕ್ಷನ್ ಇರುವ ಕಡೆ ಹಾಗೂ ಹಳ್ಳಿಗಳಿಂದ ಹೈ ವೇ ಮುಟ್ಟುವ ಸ್ಥಳಗಳಲ್ಲಿ ದೀಪದ ವ್ಯವಸ್ಥೆ ಕಲ್ಪಿಸಿ ಎಂದು ಹೇಳಿದರು.

ಜಲಧಾರೆ ಮತ್ತು ಜಲ ಜೀವನ್ ಮಿಷನ್ ಯೋಜನೆಯಡಿ ಪೈಪ್ ಅಳವಡಿಸಲು ಕಾಂಕ್ರೀಟ್ ರಸ್ತೆ ಹಾಗೂ ಡಾಂಬರು ರಸ್ತೆಯನ್ನು ಅಗೆದು ಹಾಗೆ ಬಿಟ್ಟಿದ್ದಾರೆ. ಜನರಿಗೆ ಇದರಿಂದ ಹೆಚ್ಚು ತೊಂದರೆ ಉಂಟಾಗುತ್ತಿದೆ. ಜನಪ್ರತಿನಿಧಿಗಳು ಜನಸಾಮಾನ್ಯರೊಡನೆ ಸಂಪರ್ಕ ಹೊಂದಿದಾಗ ಜನರು ಇದರ ಬಗ್ಗೆ ಪ್ರಶ್ನೆ ಮಾಡುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಸದರಿ ರಸ್ತೆಯನ್ನು ಫೆಬ್ರವರಿ ಕೊನೆಯಲ್ಲಿ ಸರಿಪಡಿಸಬೇಕು ಎಂದು ತಿಳಿಸಿದರು.

.ಜಿಲ್ಲಾಧಿಕಾರಿ ಡಾ.ಕುಮಾರ ಅವರು ಮಾತನಾಡಿ 2014ರ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಜಿಲ್ಲೆಯ ಡೀಮ್ಡ್ ಫಾರೆಸ್ಟ್ ಸರ್ವೇ ಮಾಡಲಾಗಿದ್ದು ಜಿಲ್ಲೆಯಲ್ಲಿ 32,958.95 ಹೆಕ್ಟೇರ್ ಪ್ರದೇಶವನ್ನು ಡೀಮ್ಡ್ ಫಾರೆಸ್ಟ್ ಎಂದು ಸರ್ವೇ ಮಾಡಲಾಗಿದೆ. ಆದರೆ ಸದರಿ ಸಮೀಕ್ಷೆಯಲ್ಲಿ ಕೆಲವು ಲೋಪಗಳು ಕಂಡು ಬಂದಿದ್ದು. ಮತ್ತೆ ಹೋಬಳಿ ಮಟ್ಟದಲ್ಲಿ ಸರ್ವೇ ಅಧಿಕಾರಿಗಳನ್ನು ನೇಮಿಸಿ ಸಮೀಕ್ಷೆ ಮಾಡಲಾಗುತ್ತಿದೆ. ಈಗಾಗಲೇ ಶೇ 42 ರಷ್ಟು ಸರ್ವೇ ನಡೆಸಲಾಗಿದೆ. ಮೂರು ತಿಂಗಳ ಒಳಗಾಗಿ ಸಮೀಕ್ಷೆಯನ್ನು ಮುಗಿಸಲಾಗುವುದು. ರಾಜ್ಯ ಡೀಮ್ಡ್ ಫಾರೆಸ್ಟ್ ಸರ್ವೇಯಲ್ಲಿ ಜಿಲ್ಲೆ ಪ್ರಥಮ ಸ್ಥಾನದಲ್ಲಿದೆ ಎಂದು ತಿಳಿಸಿದರು.

ಪೌತಿಖಾತೆ ಆಂದೋಲನದಲ್ಲಿ ಆಫ್ ಲೈನ್ ನಲ್ಲಿ 67.659 ಖಾತೆಗಳನ್ನು ವಿಲೇವಾರಿ ಮಾಡಲಾಗಿದೆ. ಆನ್ಲೈನ್ ನಲ್ಲಿ 59.528 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಪೌತಿ ಖಾತೆ ಆಂದೋಲನದಲ್ಲಿ ಜಿಲ್ಲೆ ರಾಜ್ಯದಲ್ಲಿ ಪ್ರಥಮ ಸ್ಥಾನದಲ್ಲಿದೆ. ಮುಂದೆಯೂ ಸದರಿ ಸ್ಥಾನವನ್ನು ಕಾಪಾಡಿಕೊಳ್ಳಲಗುವುದು ಎಂದು ಹೇಳಿದರು.

ಕಳೆದ ಐದು ವರ್ಷಗಳಿಗೆ ಹೋಲಿಸಿದರೆ ಜಿಲ್ಲೆಯಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿದೆ. ಸದರಿ ವರ್ಷ ಜಿಲ್ಲೆಯಲ್ಲಿ 14 ರೈತ ಆತ್ಮಹತ್ಯೆ ಪ್ರಕರಣಗಳು ದಾಖಲಾಗಿದ್ದು ಈಗಾಗಲೇ 9 ಅರ್ಹ ಪ್ರಕರಣಗಳಿಗೆ ಪರಿಹಾರ ನೀಡಲಾಗಿದೆ. 4 ಪ್ರಕರಣಗಳು ತಿರ್ಮಾನ ಮಾಡಲು ಬಾಕಿ ಇದು 1 ಪ್ರಕರಣ ಸರ್ಕಾರದ ಹಂತದಲ್ಲಿ ಬಾಕಿ ಇದೆ ಎಂದು ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಧಿಕಾರಿ ಕೆ.ಆರ್.ನಂದಿನಿ ಅವರು ಮಾತನಾಡಿ ಬೂದು ನೀರು ನಿರ್ವಹಣೆಯಲ್ಲಿ 1012 ಗುರಿ ಇದ್ದು ಇಲ್ಲಿಯವರೆಗೂ 687 ಕಾಮಗಾರಿಗಳನ್ನು. ಎಸ್.ಎಸ್.ಎಲ್.ಸಿ ಫಲಿತಾಂಶವನ್ನು ವೃದ್ಧಿಸಲು ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯ ವರಗೆ ವಿಶೇಷ ತರಗತಿ ನಡೆಸಲಾಗುತ್ತಿದೆ. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗಾಗಿ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಬರುವ ಸಂಭವನೀಯ ಪ್ರಶ್ನೆಗಳ ಬುಕ್ ಲೇಟ್ ( ಸ್ಟೂಡೆಂಟ್ ಕಾರ್ನರ್) ಮಾಡಿ ಮಕ್ಕಳಿಗೆ ಕಲಿಕೆ ಪ್ರಾರಂಭಿಸಲಾಗಿದೆ ಎಂದು ತಿಳಿಸಿದರು.

ರಾಜ್ಯ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ದಿನೇಶ್ ಗೂಳಿಗೌಡ. ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಎಚ್.ಟಿ ಮಂಜು, ವಿಧಾನಪರಿಷತ್ ಶಾಸಕ ಕೆ. ವಿವೇಕಾನಂದ, ಎಂ.ಡಿ.ಸಿ.ಸಿ ಬ್ಯಾಂಕ್ ಅಧ್ಯಕ್ಷ ಸಚಿನ್ ಚೆಲುವರಾಯಸ್ವಾಮಿ. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಿ.ಪಿ ಪ್ರಕಾಶ್, ಮೈಷುಗರ್ ಅಧ್ಯಕ್ಷ ಸಿ.ಡಿ ಗಂಗಾಧರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ,ಅಪರ ಜಿಲ್ಲಾಧಿಕಾರಿ ಬಿ.ಸಿ ಶಿವಾನಂದ ಮೂರ್ತಿ, , ಕೆ.ಡಿ.ಪಿ ನಾಮ ನಿರ್ದೇಶನ ಸದಸ್ಯರುಗಳಾದ ನಟರಾಜು, ಆಶಾ, ದೇವಪ್ಪ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

### ‘ಎಸ್‌ಎಸ್‌ಎಲ್‌ಸಿ ಫಲಿತಾಂಶ ವೃದ್ಧಿಸಲು ಡೀಸಿ ಮತ್ತು ಸಿ.ಇ.ಓ ವಿಶೇಷ ಮುತುವರ್ಜಿ ವಹಿಸಿ ಕ್ರಮ ತೆಗೆದುಕೊಳ್ಳಿ’

**ಎಸ್ ಎಸ್ ಎಲ್ ಸಿ ಫಲಿತಾಂಶ ವೃದ್ಧಿಸಲು ಡೀಸಿ ಮತ್ತು ಸಿ.ಇ.ಓ ವಿಶೇಷ ಮುತುವರ್ಜಿ ವಹಿಸಿ ಕ್ರಮ ತೆಗೆದುಕೊಳ್ಳಿ. ಕಳೆದ ಬಾರಿಗಿಂತ ಸದರಿ ವರ್ಷ ಫಲಿತಾಂಶ ವೃದ್ಧಿಸಬೇಕು. ಎಲ್ಲಾ ಶಾಲೆಗಳಲ್ಲೂ ಗುಣಮಟ್ಟದ ಶಿಕ್ಷಣ ನೀಡಬೇಕು. ಅಧಿಕಾರಿಗಳು ಯಾವುದೇ ಒತ್ತಡಕ್ಕೂ ಮಣಿಯದೆ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಪಠ್ಯಗಳನ್ನು ಮಾಡಿದ ಶಿಕ್ಷಕರ ವಿರುದ್ಧ ಕ್ರಮ ವಹಿಸಿ. ಶಿಥಿಲಗೊಂಡ ಶಾಲೆಗಳತ್ತ ಗಮನ ಹರಿಸಿ ಕ್ರಮವಹಿಸಿ. ಅಗತ್ಯವಿದ್ದಲ್ಲಿ ಶಾಸಕರ ಅನುದಾನದಲ್ಲಿ ಮಕ್ಕಳಿಗೆ ಪಠ್ಯ ಪುಸ್ತಕ ವಿತರಣೆ ಮಾಡಲಾಗುವುದು ಎಂದು ಶಾಸಕ ಎಂ.ಪಿ ನರೇಂದ್ರ ಸ್ವಾಮಿ ಹೇಳಿದರು.**

# ‘ಸಹಕಾರ ಸಂಘಗಳಿಂದ ಗ್ರಾಮೀಣಾಭಿವೃದ್ಧಿ ಸಾಧ್ಯ’

**ಕೆ.ಆರ್.ನಗರ:** ಸಹಕಾರ ಸಂಘಗಳಿಂದ ಗ್ರಾಮೀಣಾಭಿವೃದ್ಧಿ ಸಾಧ್ಯವೆಂದು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಸಾ.ರಾ.ನಂದೀಶ್ ಹೇಳಿದರು.

ಅವರು ಸಾಲಿಗ್ರಾಮ ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಸಾಲಿನ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿದರು.

ಸಹಕಾರ ಸಂಘಗಳಿಂದ ದೊರೆಯುವ ಸೌಲಭ್ಯಗಳನ್ನು ರೈತರುಗಳು ಸದುಪಯೋಗಪಡಿಸಿಕೊಂಡು ಆರ್ಥಿಕ ಅಭಿವೃದ್ಧಿ ಹೊಂದಬೇಕು ಎಂದು ಕರೆ ನೀಡಿದರು.



ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಪಡೆದಂತಹ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡುವ ಮೂಲಕ ಸಂಘದ ಸದಸ್ಯರುಗಳು ಸಂಘದ ಅಭಿವೃದ್ಧಿ ಜೊತೆಗೆ ತಾವುಗಳು ಕೂಡ ಅಭಿವೃದ್ಧಿ ಪಥದತ್ತ ಸಾಗಬೇಕು ಎಂದರು.

ಸಂಘದ ಆಡಳಿತ ಮಂಡಳಿಯವರು ಹಾಗೂ ಸಿಬ್ಬಂದಿ ವರ್ಗದವರು ಸಂಘದ ಸದಸ್ಯರುಗಳಿಗೆ ಸಂಘದಿಂದ ದೊರೆಯುವ ಸೌಲಭ್ಯಗಳ ಮಾಹಿತಿಯನ್ನು ನೀಡಬೇಕು ಹಾಗೂ ಅವರಿಗೆ ಹೆಚ್ಚಿನ ಅನುಕೂಲವನ್ನು ಕಲ್ಪಿಸಿ ಕೊಡುವ ದೃಷ್ಟಿಯಲ್ಲಿ ಕಾರ್ಯನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಸತೀಶ್, ಉಪಾಧ್ಯಕ್ಷ ಎಸ್.ಬಿ.ಮಂಜುನಾಥ್, ನಿರ್ದೇಶಕರುಗಳಾದ ಎಸ್.ಬಿ.ಅಶೋಕ, ಪಾಪಣ್ಣ, ಕರುಣ್ ಕುಮಾರ, ಬಾಂಬೆಮಹೇಶ್, ಟ್ರ್ಯಾಕ್ಟರ್ ಅನಂತ, ಚಂದ್ರನಾಯಕ, ಜಯರಾಮೇಗೌಡ, ರುಕ್ಮಿಣಿ, ಅಶ್ವಿನಿ, ಸಣ್ಣದೇವಮ್ಮ, ಸಿಇಒ ಎಸ್.ಮಧು, ಸಿಬ್ಬಂದಿಗಳಾದ ಡಿ.ಟಿ.ಸುರೇಶ್, ಎಸ್.ಆರ್.ಶಶಿಕುಮಾರ, ರಾಮೇಗೌಡ, ಮುಖಂಡರುಗಳಾದ ಎಸ್.ವೈ.ಹೇಮಂತ್, ಬಿಡಿಎಸ್ ಸುನೀಲ್, ರಾಂಪುರ ಪುರುಷೋತ್ತಮ, ದಡದಹಳ್ಳಿ ನಟರಾಜ್, ಹೋಟೆಲ್ ರಾಮಣ್ಣ, ಸೋಮು, ಮಂಜು, ಸುರೇಶ, ನರಸಿಂಹೇಗೌಡ ಸೇರಿದಂತೆ ಹಲವರು ಇದ್ದರು.

# ‘ಸಂಘದಿಂದ ಸಾಲ ಪಡೆದವರು ಸಕಾಲದಲ್ಲಿ ಮರುಪಾವತಿ ಮಾಡಿ’





**ಕೆ.ಆರ್.ನಗರ:** ಸಂಘದಿಂದ ಸಾಲ ಪಡೆದವರು ಸಕಾಲದಲ್ಲಿ ಮರುಪಾವತಿ ಮಾಡುವ ಮೂಲಕ ಸಂಘದ ಬೆಳವಣಿಗೆಯ ಜೊತೆಗೆ ತಮ್ಮ ಕುಟುಂಬದ ಅಭಿವೃದ್ಧಿಗೆ ಸಹಕರಿಸಬೇಕೆಂದು ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕ ಎ.ಟಿ.ಸೋಮಶೇಖರ್ ಹೇಳಿದರು.

ಅವರು ಸಾಲಿಗ್ರಾಮ ತಾಲೂಕಿನ ಅಂಕನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2026 ನೇ ಸಾಲಿನ ನೂತನ ದಿನದರ್ಶಿಕೆಯನ್ನು ಬಿಡುಗಡೆ ಮಾಡಿ ಮಾತನಾಡಿದರು. ಸಂಘದಲ್ಲಿ ದೊರೆಯುವ ಸೌಲಭ್ಯಗಳನ್ನು ಸಂಘದ ಸರ್ವ ಸದಸ್ಯರುಗಳು ಕೂಡ ಉಪಯೋಗಿಸಿಕೊಳ್ಳಬೇಕು ಎಂದರು.

ಸಂಘದಲ್ಲಿನ ನೌಕರರುಗಳು ಸದಸ್ಯರುಗಳಿಗೆ ಎಲ್ಲಾ ಮಾಹಿತಿಯನ್ನು ಪಾರದರ್ಶಕವಾಗಿ ನೀಡಬೇಕು ಜೊತೆಗೆ ಸದಸ್ಯರುಗಳ ಕೆಲಸವನ್ನು ಸಕಾಲದಲ್ಲಿ ಮಾಡಿಕೊಡುವ ಮೂಲಕ ಅವರುಗಳಿಗೆ ಯಾವುದೇ ರೀತಿಯ ಸಮಸ್ಯೆ ಆಗದಂತೆ ನೋಡಿಕೊಳ್ಳಬೇಕೆಂದು ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಕೆ.ನಾಗೇಶ್, ನಿರ್ದೇಶಕರಾದ ರಾಘವೇಂದ್ರ, ಗೋವಿಂದ, ಎ.ಆರ್. ರಮೇಶ್, ಸುರೇಶ್, ಎ.ನಾಗರಾಜ್, ಎನ್.ಟಿ.ವೆಂಕಟೇಶ್, ಕೃಷ್ಣನಾಯಕ, ಸುನಂದ, ಮಮತ, ಸಿಇಓ ಎ.ಟಿ.ಸತೀಶ್, ಸಿಬ್ಬಂದಿಗಳಾದ ಚಂದ್ರಶೇಖರ್, ಸುಷ್ಮಾ ಇತರರು ಇದ್ದರು.

# ಜ. 24 ರಂದು ರಾಜ್ಯಾದ್ಯಂತ ವಿಶೇಷ ಲೋಕ ಅದಲಾತ್



**ಮಂಡ್ಯ:** ಜನವರಿ 2026 ರಿಂದ ಮಾರ್ಚ್ 2026 ರವರೆಗೆ ನಡೆಯಲಿರುವ ವಿಶೇಷ ಅಭಿಯಾನ – "ಮಧ್ಯಸ್ಥಿಕೆ ರಾಷ್ಟ್ರಕ್ಕಾಗಿ 2.0– 90" ದಿನಗಳ ಡ್ರೈವನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗುತ್ತಿದೆ.

ಸದರಿಅಭಿಯಾನದಲ್ಲಿನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳು– ವೈವಾಹಿಕ ಹಾಗೂ ಕೌಟುಂಬಿಕ ನ್ಯಾಯಾಲಯದ ಪ್ರಕರಣಗಳ, ಮೋಟಾರು ಅಪಘಾತ ನ್ಯಾಯಾಧೀಕರಣದ ಪ್ರಕರಣಗಳು, ಚೆಕ್ಕು ಅಮಾನ್ಯದ ಪ್ರಕರಣಗಳು, ವಾಣಿಜ್ಯ ಪ್ರಕರಣಗಳು, ಸೇವಾ ಪ್ರಕರಣಗಳು, ರಾಜೀಯಾಗಬಲ್ಲ ಅಪರಾಧಿಕ ಪ್ರಕರಣಗಳು ಹಾಗೂ ಇತರೆ ಸಿವಿಲ್ ಪ್ರಕರಣಗಳನ್ನು ಈ ಅಭಿಯಾನದಲ್ಲಿ ರಾಜೀ ಸಂಧಾನದ ಮೂಲಕ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಲು ಇಚ್ಚಿಸಿದ್ದಲ್ಲಿ ನ್ಯಾಯಾಲಯಗಳಿಂದ ಪ್ರಕರಣಗಳನ್ನು ಮಧ್ಯಸ್ಥಿಕೆ ಕೇಂದ್ರಕ್ಕೆ ಸೂಚಿಸಿಕೊಂಡಲ್ಲಿ ಅಂತಹ ಪ್ರಕರಣಗಳಲ್ಲಿ ಉಭಯ ಪಕ್ಷಗಾರರನ್ನು ಕರೆಸಿಕೊಂಡು ಜಿಲ್ಲಾ ನ್ಯಾಯಾಲಯದ ಸಮುಚ್ಚಯದಲ್ಲಿರುವ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳ ಹಾಗೂ ತಾಲ್ಲೂಕು ನ್ಯಾಯಾಲಯಗಳ ಆವರಣಗಳಲ್ಲಿರುವ ಮಧ್ಯಸ್ಥಿಕೆ ಕೇಂದ್ರಗಳಲ್ಲಿ ರಾಜೀ ಸಂಧಾನ ಮೂಲಕ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಬಹುದಾಗಿದೆ.

ಸಾರ್ವಜನಿಕರು ತಮ್ಮ ಪ್ರಕರಣಗಳು ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇದ್ದಲ್ಲಿ ಗೌರವಾನ್ವಿತ ಉಚ್ಚ ನ್ಯಾಯಾಲಯ, ಬೆಂಗಳೂರು, ಧಾರವಾಡ ಮತ್ತು ಕಲಬುರಗಿ ಆವರಣಗಳಲ್ಲಿರುವ ಮಧ್ಯಸ್ಥಿಕೆ ಕೇಂದ್ರಗಳನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

ನ್ಯಾಯಾಲಯಗಳಲ್ಲಿ ಬಾಕಿ ಇರುವ ಐಂಅ & ಐಂಅ ಇಥಜಭಿಣಾಬುಠಟಿ ಪ್ರಕರಣಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಇತ್ಯರ್ಥಗೊಳಿಸುವ ಸಲುವಾಗಿ ಜನವರಿ 24 ರಂದುಐಂಅ & ಐಂಅ ಇಥಜಭಿಣಾಬುಠಟಿ ಪ್ರಕರಣಗಳಿಗಾಗಿಯೇ ರಾಜ್ಯಾದ್ಯಂತ ವಿಶೇಷ ಲೋಕ ಅದಲಾತ್ ಅನ್ನು ಹಮ್ಮಿಕೊಳ್ಳಲಾಗಿದ್ದು, ಈ ಹಿನ್ನೆಲೆಯಲ್ಲಿ ಮಂಡ್ಯ ಹಾಗೂ ಎಲ್ಲಾ ತಾಲ್ಲೂಕು ನ್ಯಾಯಾಲಯಗಳಲ್ಲಿಯೂ ಸಹ ಈ ವಿಶೇಷ ಲೋಕ ಅದಾಲತ್ ಅನ್ನು ಆಯೋಜನೆ ಮಾಡಲಾಗಿದೆ. ಈ ವಿಶೇಷ ಲೋಕ ಅದಾಲತ್ ಅನ್ನು ಯಶಸ್ವಿಗೊಳಿಸಲು ಕಕ್ಷಿದಾರರು, ವಕೀಲರು ಹಾಗೂ ಸಂಬಂಧಪಟ್ಟಂತಹ ಇಲಾಖೆಯವರು ಸಹಕರಿಸುವಂತೆ ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08232–229345 ಅನ್ನು ಸಂಪರ್ಕಿಸಲು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಸುಬ್ರಮಣ್ಯ ಜೆ.ಎನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜ.1 ರಂದು ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ

**ಮಂಡ್ಯ:** ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ 2025–26 ನೇ ಸಾಲಿನ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯನ್ನು ಜನವರಿ 1 ರಂದು ಬೆಳಿಗ್ಗೆ 11 ಗಂಟೆಗೆ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಬೆಳಿಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯ ಆವರಣದಿಂದ ಜಕಣಾಚಾರಿರವರ ಅವರ ಅಲಂಕೃತ ಭಾವಚಿತ್ರ ಮೆರವಣಿಗೆ ಹೊರಟು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಕಲಾಮಂದಿರ ತಲುಪಲಿದೆ.

ಕೇಂದ್ರ ಸರ್ಕಾರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ .ಕುಮಾರಸ್ವಾಮಿ ಅವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ. ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್ ಚಲುವರಾಯಸ್ವಾಮಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಶ್ರೀ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಅಧ್ಯಕ್ಷರು ಹಾಗೂ ಶ್ರೀರಂಗಪಟ್ಟಣ ವಿಧಾನಸಭಾ ಶಾಸಕ ಎ.ಬಿ ರಮೇಶ ಬಂಡಿಸಿದ್ದೇಗೌಡ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರು ಹಾಗೂ ಮಳವಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಪಿ ಎಂ ನರೇಂದ್ರಸ್ವಾಮಿ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರು ಹಾಗೂ ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ ಅವರು ಕಾರ್ಯಕ್ರಮದ ಗೌರವ ಉಪಸ್ಥಿತಿ ವಹಿಸಲಿದ್ದಾರೆ.

ವಿಶೇಷ ಉಪನ್ಯಾಸವನ್ನು ಆದರ್ಶ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಎಸ್ ಡಿ ದೊಡ್ಡಚಾರ್ ಅವರು ನೀಡಲಿದ್ದಾರೆ.

# ಸೌಹಾರ್ದ ರಜತ ಮಹೋತ್ಸವ ಕಾರ್ಯಕ್ರಮದ ಪೂರ್ವ ಸಿದ್ಧತೆ ಸಭೆ



**ನಂಜನಗೂಡು:** ಮೈಸೂರು ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಹಾಗೂ ಸಂಯುಕ್ತ ಸಹಕಾರಿಯ ಸಹಯೋಗದೊಂದಿಗೆ ಮಾರ್ಚ್ ತಿಂಗಳಲ್ಲಿ ಮೈಸೂರಿನಲ್ಲಿ ನಡೆಯುವ ಸೌಹಾರ್ದ ರಜತ ಮಹೋತ್ಸವ ಕಾರ್ಯಕ್ರಮದ ಪೂರ್ವ ಸಿದ್ಧತೆಯ ಸಭೆಯನ್ನು ನಂಜನಗೂಡಿನ ನೂರ ಎಂಟು ಲಿಂಗ ದರ್ಶನ ಶ್ರೀ ಶರಣ ಸಂಗಮ ಮಠದಲ್ಲಿ ಜರಗಿತು ಈ ಕಾರ್ಯಕ್ರಮದಲ್ಲಿ ಷ ॥ ಬ್ರ॥ಶ್ರೀ ಪಟ್ಟದ ನಾಗರಾಜ ಸ್ವಾಮಿಗಳು. ಒಕ್ಕೂಟದ ಅಧ್ಯಕ್ಷ ನಾರಾಯಣರಾವ್. ಉಪಾಧ್ಯಕ್ಷ ರಾಜನ್ ಬಾಬು ಸಿಇಒ ಭಗೀರಥ ಎಸ್ .ಸಿ ,

ಶ್ರೀ ಗುರು ಮಲ್ಲೇಶ್ವರ ವಿವಿದೋದ್ದೇಶ ಮಹಿಳಾ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ನಂದಿನಿ ಎಚ್. ಎಂ, ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಶ್ಯಾಮ್ ಸುಂದರ್ ಕೆ. ಆರ್, ಸಿ ಡಿ. ಕಾಳಪ್ಪ , ಹೇಮಾ ಚಂಗಪ್ಪ, ಗುಪ್ತ, ಸುನಿಲ್,

ಸುಬ್ರಹ್ಮಣ್ಯಂ, ಮುತ್ತಣ್ಣ, ಮಹೇಶ್, ರೇಣುಕಾ ಎಸ್. ಎನ್, ರಾಜಮಣಿ , ಲಕ್ಷ್ಮಿ, ಹಾಗೂ ಮಠದ ಸಿಬ್ಬಂದಿಗಳು ಹಾಜರಿದ್ದರು

# ಭಾರೀ ಮಳೆ, ಸಿಗದ ಸೂಕ್ತ ಬೆಲೆ: ಅಡಕತ್ತರಿಯಲ್ಲಿ ರಾಜ್ಯದ ರೈತರು

**ಬೆಂಗಳೂರು:** ಕಳೆದ ಎರಡು ದಶಕಗಳಲ್ಲಿ, ಕರ್ನಾಟಕದ ರೈತರು ಬರ ಮತ್ತು ಮಳೆಯ ಕೊರತೆಯಿಂದಾಗಿ ಸಂಕಷ್ಟವನ್ನು ಎದುರಿಸಿದ್ದಾರೆ. ಈ ವರ್ಷ, ಪೂರ್ವ–ಮುಂಗಾರು ಮಳೆ ಅನುಕೂಲಕರವಾಗಿದ್ದರೂ, ಮಾನ್ಸೂನ್ ಸಮಯದಲ್ಲಿ ಬಿದ್ದ ಹೆಚ್ಚುವರಿ ಮಳೆಯು ರಾಜ್ಯದ ಹಲವಾರು ಭಾಗಗಳಲ್ಲಿ ತೀವ್ರ ಬೆಳೆ ಹಾನಿಯನ್ನುಂಟುಮಾಡಿದೆ. ಮಾರುಕಟ್ಟೆ ಬೆಲೆಗಳಲ್ಲಿ ತೀವ್ರ ಕುಸಿತದಿಂದಾಗಿ ರೈತರು ಭಾರೀ ನಷ್ಟ ಅನುಭವಿಸಿದ್ದಾರೆ.

ವಿಶೇಷವಾಗಿ ಕಬ್ಬು, ಜೋಳ, ತೊಗರಿ ಮತ್ತು ಮಾವಿನಹಣ್ಣು ಬೆಳೆದ ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ, ಈ ವರ್ಷದ ಪೂರ್ವ–ಮುಂಗಾರು ಅವಧಿಯಲ್ಲಿ, ರಾಜ್ಯದಲ್ಲಿ 119.6 ಮಿಮೀ ಸಾಮಾನ್ಯ ಮಳೆಗೆ ಹೋಲಿಸಿದರೆ 288 ಮಿಮೀ ಮಳೆಯಾಗಿದೆ. ಒಟ್ಟಾರೆಯಾಗಿ ರಾಜ್ಯವನ್ನು 'ದೊಡ್ಡ ಹೆಚ್ಚುವರಿ ವರ್ಗ' ಎಂದು ವರ್ಗೀಕರಿಸಲಾಗಿದೆ.




2024 ರಲ್ಲಿ ಬರಗಾಲದ ನಂತರ, ಬಂದ ಬೇಸಿಗೆ ಬೆಳೆಗಳನ್ನು ಬೆಳೆದ ರೈತರ ಮೊಗದಲ್ಲಿ ನಗು ತರಿಸಿತು. ಅಂತರ್ಜಲವನ್ನು ಮರುಪೂರಣಗೊಳಿಸಲು ಸಹಾಯ ಮಾಡಿತು, ಇದು ರೈತರು ಕೃಷಿ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಮತ್ತೆ ಸಹಾಯ ಮಾಡಿತು. ಪೂರ್ವ–ಮುಂಗಾರು ಮಳೆಯು ಉತ್ತಮವಾಗಿದ್ದರಿಂದ, ಚಾಮರಾಜನಗರ, ಮೈಸೂರು, ಮಂಡ್ಯ, ಕೋಲಾರ, ಕಲಬುರಗಿ ಮತ್ತು ಬೀದರ್‌ನ ಕೆಲವು ಭಾಗಗಳು ಸೇರಿದಂತೆ ಕರ್ನಾಟಕದ ಕೆಲವು ಭಾಗಗಳಲ್ಲಿ ಎರಡು ಬೆಳೆ ಬೆಳೆಯಲಾಯಿತು. ಒಂದು ಮಳೆಗಾಲಕ್ಕೆ ಮುಂಚಿತವಾಗಿ ಕೊಯ್ಲು ಮಾಡಲಾಯಿತು.

ಈ ವರ್ಷದ ನೈಋತ್ಯ ಮುಂಗಾರು ಸಾಮಾನ್ಯಕ್ಕಿಂತ ಸ್ವಲ್ಪ ಹೆಚ್ಚಾಗಿದ್ದು, ಜೂನ್ ಮತ್ತು ಸೆಪ್ಟೆಂಬರ್ ಅಂತ್ಯದ ನಡುವೆ 852 ಮಿ.ಮೀ.ಗೆ ಹೋಲಿಸಿದರೆ ಈ ಬಾರಿ ಸರಾಸರಿ 882 ಮಿ.ಮೀ. ಮಳೆಯಾಗಿದೆ. ರಾಜ್ಯದ ಕೆಲವು ಭಾಗಗಳಲ್ಲಿ, ವಿಶೇಷವಾಗಿ ಕಲಬುರಗಿ ಮತ್ತು ಇತರ ಪ್ರದೇಶಗಳಲ್ಲಿ ರೈತರು ಹೆಚ್ಚುವರಿ ಮಳೆಯಾಗಿದ್ದು ಪ್ರವಾಹ ಮತ್ತು ಬೆಳೆ ಹಾನಿಗೆ ಕಾರಣವಾಯಿತು.

ಈ ವರ್ಷ, ಈಶಾನ್ಯ ಮುಂಗಾರು ಉತ್ತರ ಮತ್ತು ಮಧ್ಯ ಕರ್ನಾಟಕದಲ್ಲಿ ಮತ್ತು ಬೆಂಗಳೂರು ಗ್ರಾಮಾಂತರ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕೆಲವು ಪ್ರದೇಶಗಳಲ್ಲಿ ಮಳೆ ಕೊರತೆಯನ್ನುಂಟುಮಾಡಿತು. ಆದರೆ ಮುಂಗಾರು ಪೂರ್ವ ಮತ್ತು ಮುಂಗಾರು ಋತುಗಳಲ್ಲಿ ಉತ್ತಮ ಮಳೆಯಾಗಿದ್ದು, ಜಲಾಶಯಗಳು ತುಂಬಲು ಸಹಾಯ ಮಾಡಿತು.

ವರ್ಷವಿಡೀ ಉತ್ತಮ ಮಳೆಯಾಗಿ ಅಣೆಕಟ್ಟುಗಳು ತುಂಬಲು ಮತ್ತು ಅಂತರ್ಜಲವನ್ನು ಮರುಪೂರಣಗೊಳಿಸಲು ಸಹಾಯ ಮಾಡಿದೆ. ಇದು ಬೇಸಿಗೆಯಲ್ಲಿಯೂ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಸಹಾಯ ಮಾಡುತ್ತದೆ ಎಂದು ಪ್ರಮುಖ ಹವಾಮಾನಶಾಸ್ತ್ರಜ್ಞ ಮತ್ತು ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ಮೇಲ್ವಿಚಾರಣಾ ಕೇಂದ್ರದ ಮಾಜಿ ನಿರ್ದೇಶಕ ಜಿ.ಎಸ್. ಶ್ರೀನಿವಾಸ ರೆಡ್ಡಿ ಹೇಳಿದರು.

# ‘ಗುರಿ ತಲುಪುವ ನಿಟ್ಟಿನಲ್ಲಿ ಪ್ರಯತ್ನಿಸಿ’



**ಹಾಸನ:** ಜೀವನದಲ್ಲಿ ತಾವು ಏನಾಗಬೇಕು ಎಂಬ ಗುರಿ ಇಟ್ಟುಕೊಂಡು ಆ ಗುರಿ ತಲುಪುವ ಸಲುವಾಗಿ ಪ್ರಯತ್ನಿಸಿದರೆ ಯಶಸ್ಸು ಕಾಣಲು ಸಾಧ್ಯ ಎಂದು ನೌಕಿಸ್ ಕಾಲೇಜ್ ಆಫ್ ಇಂಜಿನಿಯರಿಂಗ್ ನ ಪ್ರಾಂಶುಪಾಲರಾದ ವೇಣುಗೋಪಾಲ್ ರಾವ್ ತಿಳಿಸಿದರು.

ಕಂದಲಿ ಬಳಿಯ ನೌಕಿಸ್ ಕಾಲೇಜ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂದು ನಡೆದ ವೃತ್ತಿ ಭಾಷಣ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ಜ್ಞಾನ ಹೆಚ್ಚಿಸಿಕೊಂಡಲ್ಲಿ ಸಮಾಜದಲ್ಲಿ ಗೌರವಯುತ ಬದುಕು ಸಾಗಿಸಲು ಸಾಧ್ಯ ಎಂದರು. ಇತ್ತಿಚಿನ ದಿನಗಳಲ್ಲಿ ವೇಗದಲ್ಲಿ ಬೆಳೆಯುತ್ತಿರುವ ಪ್ರಪಂಚದಲ್ಲಿ ಪ್ರತಿಯೊಂದು ವಿಚಾರದಲ್ಲಿ ವೇಗ ಹೆಚ್ಚಾಗುತ್ತಿದೆ. ಅದಕ್ಕನುಗುಣವಾಗಿ ಇಂದಿನ ಯುವ ಪೀಳಿಗೆ ಪೂರಕ ಶೈಕ್ಷಣಿಕ ಶಕ್ತಿ ಪಡೆದುಕೊಳ್ಳುವ ಅಗತ್ಯವಿದೆ ಹಾಗಾಗಿ ಎಲ್ಲವನ್ನೂ ಒಂದೇ ಸೂರಿನಲ್ಲಿ ಒದಗಿಸುವ ಸಲುವಾಗಿ ಎಂ.ಎಸ್ ರಾಮಯ್ಯ ನೌಕಿಸ್ ಕಾಲೇಜ್ ಒದಗಿಸುತ್ತಿದೆ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು. ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಸಂಘದ ಅಧ್ಯಕ್ಷ ಪ್ರಶಾಂತ್ ಕುಮಾರ್, ಚ.ರಾ.ಪ ಸರ್ಕಾರಿ ಕಾಲೇಜಿನ ಪ್ರಾಂಶುಪಾಲರಾದ ರಾಮೇಗೌಡ, ಗಣಪತಿ, ಸಂಸ್ಥೆಯ ಸಿಬ್ಬಂದಿಗಳಾದ ಶ್ರೀಪಾದ್ ಮಾರ್ಕಂಡೇ, ರಾಜಲಕ್ಷ್ಮಿ, ಇತರರು ಇದ್ದರು.

# ಬಾಂಗ್ಲಾದೇಶದ ಮೊದಲ ಮಹಿಳಾ ಪ್ರಧಾನಿಯಾಗಿದ್ದ ಖಲೀದಾ ಜಿಯಾ ನಿಧನ

**ಢಾಕಾ:** ಬಾಂಗ್ಲಾದೇಶದ ಮೊದಲ ಮಹಿಳಾ ಪ್ರಧಾನಮಂತ್ರಿಯಾಗಿದ್ದ ಹಾಗೂ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ ನಾಯಕಿ ಬೇಗಂ ಖಲೇದಾ ಜಿಯಾ ಅವರು ಮಂಗಳವಾರ ನಿಧನರಾಗಿದ್ದಾರೆ.

ವರದಿಗಳ ಪ್ರಕಾರ, ಖಲೇದಾ ಜಿಯಾ ಅವರು ಲಿವರ್ ಸಿರೋಸಿಸ್, ಸಂಧಿವಾತ, ಮಧುಮೇಹ ಹಾಗೂ ಹೃದಯಕ್ಕೆ ಸಂಬಂಧಿಸಿದ ಗಂಭೀರ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದರು ಎಂದು ತಿಳಿದುಬಂದಿದ್ದು,



ವಯೋಸಹಜ ಕಾಯಿಲೆಗಳ ತೀವ್ರತೆಯಿಂದಾಗಿ ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆಂದು ತಿಳಿದುಬಂದಿದೆ. ಈ ಕುರಿತು ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ ಅಧಿಕೃತ ಪ್ರಕಟಣೆ ಹೊರಡಿಸಿದ್ದು, ಖಲೇದಾ ಜಿಯಾ ಅವರ ನಿಧನವನ್ನು ಖಚಿತಪಡಿಸಿದೆ.

ಬಿಎನ್‌ಪಿ ಅಧ್ಯಕ್ಷೆ ಹಾಗೂ ಮಾಜಿ ಪ್ರಧಾನಮಂತ್ರಿ ಖಲೇದಾ ಜಿಯಾ ಇಂದು ಬೆಳಗ್ಗೆ ನಿಧನರಾದರು. ಅವರ ಆತ್ಮಕ್ಕೆ ಶಾಂತಿ ಪ್ರಾರ್ಥಿಸುತ್ತೇವೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಹೊಸ ವರ್ಷ: ಹೊಸ ಬದಲಾವಣೆ- ಭರವಸೆ ಪರ್ವ ತೆರೆದುಕೊಳ್ಳೋಣ



ಕಾಲ ಎನ್ನುವುದು ನಿರಂತರವಾಗಿ ಹರಿಯುವ ನದಿ. ಆದರೆ ನಾವು ಮನುಷ್ಯರು ಆ ನದಿಗೆ 'ವರ್ಷ' ಎಂಬ ಆಣೆಕಟ್ಟು ಕಟ್ಟಿ, ಅಲ್ಲಿ ನಿಂತು ನಮ್ಮ ಬದುಕಿನ ಆಳ–ಅಗಲಗಳನ್ನು ಅಳೆಯಲು ಪ್ರಯತ್ನಿಸುತ್ತೇವೆ. ಡಿಸೆಂಬರ್ ಮುಗಿದು ಜನವರಿ ಆರಂಭವಾಗುವುದು ಕೇವಲ ಕ್ಯಾಲೆಂಡರಿನ ಹಾಳೆ ಬದಲಾದಂತಲ್ಲ; ಅದು ನಮ್ಮ ಅಸ್ತಿತ್ವದ ಒಂದು ಅಧ್ಯಾಯ ಮುಗಿದು ಮತ್ತೊಂದು ಆರಂಭವಾಗುವ ಸಂಕೇತ.

ಹೆಚ್ಚಿನವರು ಹೊಸ ವರ್ಷಕ್ಕೆ 'ಜಿಮ್‌ಗೆ ಹೋಗುತ್ತೇನೆ', 'ಹಣ ಉಳಿಸುತ್ತೇನೆ' ಎಂಬ ಬಾಹ್ಯ ಗುರಿಗಳನ್ನು ಹಾಕಿಕೊಳ್ಳುತ್ತಾರೆ. ಆದರೆ ನಿಜವಾದ ಬದಲಾವಣೆ ಆರಂಭವಾಗುವುದು ಹೊರಗಿನ ಜಗತ್ತಿನಲ್ಲಲ್ಲ, ನಿಜವಾದ ಬದಲಾವಣೆ ಆಗಬೇಕಾಗಿರುವುದು ನಮ್ಮಲ್ಲಿ. ಈ ವರ್ಷ, ನಾವು ನಮ್ಮನ್ನು ನಾವು ಐದು ಕನ್ನಡಿಗಳ ಮುಂದೆ ನಿಲ್ಲಿಸಿಕೊಂಡು ನೋಡೋಣ. ಈ ಐದು ಪ್ರಶ್ನೆಗಳು ನಮ್ಮ ಬದುಕಿನ ದಿಕ್ಸೂಚಿಯಾಗಲಿ.

- **ಹೊಸ ಅನುಭವಗಳು: ನಮ್ಮ ಅಸ್ತಿತ್ವದ ವಿಸ್ತರಣೆ**

ಅನುಭವ ಎಂದರೆ ಕೇವಲ ಘಟನೆಗಳಲ್ಲ. ನಾವು ನಮ್ಮ ಕಂಫರ್ಟ್ ಜೋನ್ (Comfort Zone) ಅಥವಾ ಸುರಕ್ಷಿತ ವಲಯದಿಂದ ಹೊರಬಂದು, ಅನಿಶ್ಚಿತತೆಯನ್ನು ಅಪ್ಪಿಕೊಂಡಾಗ ಜನಿಸುವ ಹೊಸ ಅರಿವೇ 'ಅನುಭವ'. ನಮಗೆ ತಿಳಿದಿರುವುದಕ್ಕಿಂತ ತಿಳಿಯದಿರುವುದು ಈ ಜಗತ್ತಿನಲ್ಲಿ ಅಪಾರವಾಗಿದೆ.

ಆ 'ಅಪರಿಚಿತ'ದ ಕಡೆಗೆ ಹೆಜ್ಜೆ ಇಡುವುದೇ ನಿಜವಾದ ಜೀವನ. ಹೊಸ ಅನುಭವ ಎಂದರೆ ಅದು ದುಬಾರಿ ವಿದೇಶಿ ಪ್ರವಾಸವೇ ಆಗಬೇಕಿಲ್ಲ.

- ಅದು ಪುಸ್ತಕವೊಂದನ್ನು ಮುಕ್ತ ಮನಸ್ಸಿನಿಂದ ಓದುವುದಾಗಿರಬಹುದು.
- ಕೈ ತೋಟದಲ್ಲಿ ಹಿಂದೆಂದೂ ಬೆಳೆಸದ ಗಿಡವೊಂದಕ್ಕೆ ನೀರುಣಿಸುವುದಾಗಿರಬಹುದು.
- ಎಂದೂ ಮಾತನಾಡದ ಭಾಷೆಯ ಜನರೊಂದಿಗೆ ಬೆರೆತು ಅವರ ಸಂಸ್ಕೃತಿಯನ್ನು ಅರಿಯುವುದಾಗಿರಬಹುದು.

- **ಕುತೂಹಲದ ಪುನರುಜ್ಜೀವನ: ಮಗುವಿನಂತೆ ಪ್ರತಿಯೊಂದನ್ನೂ ಆಶ್ಚರ್ಯದಿಂದ ನೋಡುವುದನ್ನು ಕಲಿಯೋಣ . 'ನನಗೆ ಎಲ್ಲವೂ ತಿಳಿದಿದೆ' ಎಂಬ ಅಹಂಕಾರ ಹೊಸ ಅನುಭವಕ್ಕೆ ದೊಡ್ಡ ಶತ್ರು.**
- **ತಿಂಗಳಿಗೊಂದು ಸಾಹಸ: ಇಲ್ಲಿ ಸಾಹಸ ಎಂದರೆ ಪರ್ವತ ಏರುವುದಲ್ಲ. ಹಳೆಯ ಅಭ್ಯಾಸವನ್ನು ಮುರಿದು ಹೊಸದನ್ನು ಮಾಡುವುದು. ಉದಾಹರಣೆಗೆ, ಚಿತ್ರಕಲೆ ಬಾರದಿದ್ದರೂ ಬಣ್ಣಗಳನ್ನು ಕಾಗದದ ಮೇಲೆ ಹರಡಿ ನೋಡೋಣ . ಆ ಬಣ್ಣಗಳ ಹರಡುವಿಕೆಯಲ್ಲಿ ನಮ್ಮೊಳಗಿನ ಹೊಸ ವ್ಯಕ್ತಿ ದರ್ಶನವಾಗುತ್ತಾನೆ.**
- **ದೇಹವೆಂಬ ದೇಗುಲದ ಸ್ಥಿತಿಗತಿ:**

ಆರೋಗ್ಯ ಎನ್ನುವುದು ಕೇವಲ ರೋಗಗಳ ಅನುಪಸ್ಥಿತಿಯಲ್ಲ. ಬೆಳಿಗ್ಗೆ ಎದ್ದಾಗ ನಮ್ಮ ಮನಸ್ಸು ಮತ್ತು ದೇಹವು ಉತ್ಸಾಹದಿಂದ ಇರುವುದೇ ನಿಜವಾದ ಆರೋಗ್ಯ. ನಮ್ಮ ದೇಹವು ನಮಗೆ ಪ್ರಕೃತಿ ನೀಡಿದ ಅತ್ಯಂತ ಸುಸಜ್ಜಿತ ವಾಹನ. ಅದರ ಎಂಜಿನ್ (ಹೃದಯ) ಮತ್ತು ಮೆದುಳು ಸರಿಯಾಗಿ ಕಾರ್ಯನಿರ್ವಹಿಸಿದರೆ ಮಾತ್ರ ಜೀವನದ ಪಯಣ ಸುಖಕರ.

ನಮ್ಮ ದೇಹದ ಭಾಷೆಯನ್ನು ನಾವು ಮರೆತಿದ್ದೇವೆ. ನಮಗೆ ಹಸಿವಾದಾಗ ತಿನ್ನುವ ಬದಲು, ಗಡಿಯಾರ ನೋಡಿ ತಿನ್ನುತ್ತೇವೆ. ದಣಿದಾಗ ಮಲಗುವ ಬದಲು ಮೊಬೈಲ್ ನೋಡುತ್ತೇವೆ. ಈ ವರ್ಷದ ಗುರಿ ದೇಹದೊಂದಿಗೆ 'ಸಂಧಾನ' ಮಾಡಿಕೊಳ್ಳುವುದಾಗಿರಲಿ.

- **ಜಾಗೃತ ಆಹಾರ (Mindful Eating): ನಾವು ತಿನ್ನುವ ಪ್ರತಿ ತುತ್ತು ನಮ್ಮ ಜೀವಕೋಶಗಳಾಗಿ ಬದಲಾಗುತ್ತದೆ. ಆಹಾರವನ್ನು ಕೇವಲ ಇಂಧನದಂತೆ ನೋಡದೆ, ಅದು ನೀಡುವ ಶಕ್ತಿಯನ್ನು ಗೌರವಿಸೋಣ. 2. ವ್ಯಾಯಾಮವನ್ನು ಸಂಭ್ರಮಿಸೋಣ : ವ್ಯಾಯಾಮವನ್ನು ಒಂದು ಕಷ್ಟದ ಕೆಲಸ ಎಂದು ಭಾವಿಸುವುದುಬೇಡ . ಡಾನ್ಸ್ , ನಡಿಗೆ ಅಥವಾ ಯೋಗ - ದೇಹಕ್ಕೆ ಯಾವುದು ಖುಷಿ ಕೊಡುತ್ತದೆಯೋ ಅದನ್ನು ಮಾಡೋಣ . ಬೆವರಿನ ಮೂಲಕ ವಿಷಕಾರಿ ಅಂಶಗಳ ಜೊತೆಗೆ ನಕಾರಾತ್ಮಕ ಯೋಚನೆಗಳೂ ಹೊರಹೋಗಲಿ.**
- **ನಿದ್ರೆಯ ಪಾವಿತ್ರ್ಯ: ಆಳವಾದ ನಿದ್ರೆ ಎನ್ನುವುದು ಧ್ಯಾನದಷ್ಟೇ ಪವಿತ್ರ. ದಿನಕ್ಕೆ ಕನಿಷ್ಠ 7 ಗಂಟೆಗಳ ಕಾಲ ಮೊಬೈಲ್ , ಟಿವಿಯಿಂದ ದೂರವಿದ್ದು ವಿಶ್ರಮಿಸೋಣ. ನಿದ್ರೆಯಲ್ಲಿ ದೇಹವು ತನ್ನನ್ನು ತಾನು ರಿಪೇರಿ ಮಾಡಿಕೊಳ್ಳುತ್ತದೆ.**
- **ಉಪಕಾರ: ಸಾರ್ಥಕತೆಯ ಮೂಲ: ಉಪಕಾರ ಎಂದರೆ ಕೇವಲ ಹಣದ ಚೆಕ್ ನೀಡುವುದಲ್ಲ. ಇನ್ನೊಬ್ಬರ ನೋವಿಗೆ ಸ್ಪಂದಿಸುವ ಹೃದಯ ಮತ್ತು ಕಷ್ಟಕಾಲದಲ್ಲಿ ನೀಡುವ ಆಸರೆಯೇ ನಿಜವಾದ ಉಪಕಾರ. ಇದನ್ನು 'ಸದ್ದಿಲ್ಲದ ಸೇವೆ' ಎನ್ನಬಹುದು. ಪ್ರಕೃತಿಯಲ್ಲಿ ಮರಗಳು ನೆರಳು ನೀಡಿ ಪ್ರತಿಫಲ ಬಯಸುವುದಿಲ್ಲ, ಹೂವುಗಳು ಸುಗಂಧ ಬೀರಿ ಹೊಗಳಿಕೆ ನಿರೀಕ್ಷಿಸುವುದಿಲ್ಲ. ಆ ಗುಣ ನಮ್ಮದಾಗಲಿ.**

ಈ ಆಧುನಿಕ ಯುಗದಲ್ಲಿ ಯಾರಿಗಾದರೂ ನಮ್ಮ 'ಪೂರ್ಣ ಗಮನ' (Attention) ನೀಡುವುದೇ ದೊಡ್ಡ ಉಪಕಾರ. ಒಬ್ಬ ವ್ಯಕ್ತಿ ಮಾತಾಡುವಾಗ ಫೋನ್ ನೋಡದೆ ಅವರ ಕಣ್ಣಲ್ಲಿ ಕಣ್ಣಿಟ್ಟು ಕೇಳಿಸಿಕೊಳ್ಳುವುದು ಅವರ ಅಸ್ತಿತ್ವಕ್ಕೆ ನಾವು ನೀಡುವ ಗೌರವ.

- **ಅನಾಮಧೇಯ ಸೇವೆ: ನಾವು ಯಾರಿಗಾದರೂ ಸಹಾಯ ಮಾಡಿದಾಗ ಅದು ಅವರಿಗೆ ತಿಳಿಯದಿದ್ದರೆ ಆ ಪುಣ್ಯದ ತೂಕ ಹೆಚ್ಚು. ಸಮಾಜಕ್ಕೆ ಏನನ್ನಾದರೂ ಮರಳಿಸುವ ಗುಣ ಬೆಳೆಸಿಕೊಳ್ಳೋಣ .**
- **ಜ್ಞಾನದ ಹಂಚಿಕೆ: ನಮಗೆ ತಿಳಿದಿರುವ ವಿಷಯವನ್ನು ಅದನ್ನು ಕಲಿಯಲು ಆಶಿಸುವವರಿಗೆ ಕಲಿಸಿಕೊಡೋಣ . ಜ್ಞಾನ ಹಂಚಿದಷ್ಟೂ ಬೆಳೆಯುತ್ತದೆ.**
- **ಸಣ್ಣ ಸನ್ನಿವೇಶಗಳು: ದಾರಿಯಲ್ಲಿ ಬಿದ್ದಿರುವ ಕಲ್ಲನ್ನು ಪಕ್ಕಕ್ಕೆ ಸರಿಸುವುದು, ಹಸಿದ ಪ್ರಾಣಿಗೆ ನೀರು ನೀಡುವುದು - ಇವು ಸಣ್ಣ ಕೆಲಸಗಳಂತೆ ಕಂಡರೂ ಜಗತ್ತನ್ನು ಸುಂದರವಾಗಿಸುತ್ತವೆ.**
- **'ಕಡಿಮೆ'ಯಲ್ಲೇ 'ಹೆಚ್ಚು' (Less is More): ವಿಮೋಚನೆಯ ಹಾದಿ : ನಮ್ಮ ಜೀವನದಲ್ಲಿ ವಸ್ತುಗಳ ಮತ್ತು ಯೋಚನೆಗಳ ಅತಿಯಾದ ಸಂಗ್ರಹವೇ ನಮ್ಮ ಮಾನಸಿಕ ಒತ್ತಡಕ್ಕೆ ಕಾರಣ. 'ಸಂಗ್ರಹ' ಎನ್ನುವುದು ಬದುಕಿನ ಭಾರವನ್ನು ಹೆಚ್ಚಿಸುತ್ತದೆ. ನಕಾರಾತ್ಮಕತೆ ಎನ್ನುವುದು ಮನಸ್ಸಿಗೆ ಹಿಡಿದ ತುಕ್ಕು. ಇವೆರಡನ್ನೂ ಕಡಿಮೆ ಮಾಡುವುದೇ ವಿಮೋಚನೆ.**

ನಾವು ವಸ್ತುಗಳನ್ನು ಕೊಳ್ಳುವುದಿಲ್ಲ, ನಮ್ಮ ಜೀವನದ ಸಮಯವನ್ನು ನೀಡಿ ಆ ವಸ್ತುಗಳನ್ನು ಪಡೆಯುತ್ತೇವೆ. ಒಂದು ಅನಗತ್ಯ ವಸ್ತುವನ್ನು ಕೊಳ್ಳುವ ಮುನ್ನ ಯೋಚಿಸೋಣ – ಅದಕ್ಕಾಗಿ ನಾನು ವ್ಯಯಿಸಿದ ಹಣ ಮತ್ತು ಸಮಯ ಸಾರ್ಥಕವೇ?

ಹಾಗೆಯೇ, ಒಬ್ಬ ವ್ಯಕ್ತಿಯ ಮೇಲಿನ ದ್ವೇಷವನ್ನು ಮನಸ್ಸಿನಲ್ಲಿಟ್ಟುಕೊಂಡರೆ, ಅವರು ನಮ್ಮ ಮೆದುಳಿನಲ್ಲಿ ಉಚಿತವಾಗಿ ಬಾಡಿಗೆಗೆ ಇದ್ದಾರೆ ಎಂದರ್ಥ. ನಕಾರಾತ್ಮತೆಯನ್ನು ಹೊರಹಾಕೋಣ.

- **ಮಿನಿಮಲಿಸಂ (Minimalism): ಈ ವರ್ಷ ನಮ್ಮ ಮನೆಯ ಕಪಾಟನ್ನು ತೆರೆಯೋಣ . ಉಪಯೋಗಿಸಬಹುದಾದ ವಸ್ತುಗಳಿದ್ದರೆ , ಕಳೆದ ಒಂದು ವರ್ಷದಿಂದ ಬಳಸದ ವಸ್ತುಗಳನ್ನು ದಾನ ಮಾಡೋಣ . ಉಪಯೋಗಕ್ಕೆ ಬಾರದಿರುವ ವಸ್ತುಗಳಿದ್ದರೆ ತ್ಯಾಜ್ಯಕ್ಕೆ ಹಾಕೋಣ . ಸ್ಥಳಾವಕಾಶ ಹೆಚ್ಚಾದಂತೆ ಮನಸ್ಸಿನ ಸ್ಪಷ್ಟತೆಯೂ ಹೆಚ್ಚುತ್ತದೆ.**
- **ಡಿಜಿಟಲ್ ಉಪವಾಸ: ಅತಿಯಾದ ಮಾಹಿತಿ (Information Overload) ನಕಾರಾತ್ಮಕತೆಗೆ ದಾರಿ. ವಾರದಲ್ಲಿ ಒಂದು ದಿನ ಅಥವಾ ದಿನದಲ್ಲಿ ಕೆಲವು ಗಂಟೆಗಳು ಇಂಟರ್ನೆಟ್‌ನಿಂದ ದೂರವಿರೋಣ .**
- **ಕ್ಷಮೆ ಎನ್ನುವುದು ಉಡುಗೊರೆ: ಇತರರನ್ನು ಕ್ಷಮಿಸುವುದು ಅವರಿಗಾಗಿ ಅಲ್ಲ, ನಮ್ಮ ನೆಮ್ಮದಿಗಾಗಿ. ಹಳೆಯ ಕಹಿ ಘಟನೆಗಳ ಸಂಗ್ರಹವನ್ನು ಈ ವರ್ಷದ ಬಾಗಿಲಲ್ಲೇ ಬಿಟ್ಟುಬಿಡೋಣ.**
- **ಸಂತೋಷದ ಆಂತರಿಕ ಮೂಲ: ಕೃತಜ್ಞತೆಯ ಪರಾಕಾಷ್ಠೆ : ಸಂತೋಷ ಎನ್ನುವುದು ಗುರಿಯಲ್ಲ, ಅದು ಪಯಣದ ರೀತಿ. ನಾವು ಏನನ್ನೋ ಸಾಧಿಸಿದಾಗ ಮಾತ್ರ ಸಂತೋಷವಾಗಿರುತ್ತೇವೆ ಎಂದು ಅಂದುಕೊಳ್ಳುವುದು ಭ್ರಮೆ. ಪ್ರಸ್ತುತ ಕ್ಷಣದಲ್ಲಿ ಇರುವುದೇ ಸಂತೋಷ. ಇದು ಹೊರಗಿನ ಪರಿಸ್ಥಿತಿಯನ್ನು ಅವಲಂಬಿಸಿರಬಾರದು.**



**ಸ್ವಾಮಿನಾಥನ್ ಬೆಂಗಳೂರು**

ಕಳೆದ ವರ್ಷ ನಾವು ಎಷ್ಟು ಬಾರಿ ಮನಸಾರೆ ನಕ್ಕಿದ್ದೀವಿ? ಎಷ್ಟು ಬಾರಿ ಬೆಳಗಿನ ಸೂರ್ಯೋದಯ ನೋಡಿ ಬೆರಗಾಗಿದ್ದೀವಿ ? ಜೀವನದ ಸಣ್ಣ ಸಣ್ಣ ಕ್ಷಣಗಳನ್ನು ಆನಂದಿಸುವುದೇ ಬದುಕಿನ ಯಶಸ್ಸು.


- **ಪ್ರಸ್ತುತದಲ್ಲಿ ಬದುಕುವುದು: ಭೂತಕಾಲದ ಪಶ್ಚಾತ್ತಾಪ ಮತ್ತು ಭವಿಷ್ಯದ ಆತಂಕದ ನಡುವೆ ವರ್ತಮಾನ ನಶಿಸಿಹೋಗುತ್ತಿದೆ. ಈ ಕ್ಷಣದಲ್ಲಿ ನಾವು ಮಾಡುತ್ತಿರುವ ಕೆಲಸವನ್ನು ಪೂರ್ಣ ಮನಸ್ಸಿನಿಂದ ಮಾಡೋಣ.**
- **ನಗುವಿನ ಹಂಚಿಕೆ: ನಗು ಸಾಂಕ್ರಾಮಿಕ. ನಾವು ನಗುಮುಖದಿಂದ ಇದ್ದರೆ ನಿಮ್ಮ ಸುತ್ತಲಿನ ಪರಿಸರವೂ ಧನಾತ್ಮಕವಾಗಿರುತ್ತದೆ.**
- **ನಮ್ಮನು ನಾವು ಪ್ರೀತಿಸೋಣ (Self-Love): ನಮ್ಮನ್ನು ನಾವು ಮೊದಲು ಪ್ರೀತಿಸೋಣ . ನಮ್ಮ ತಪ್ಪುಗಳನ್ನು ಒಪ್ಪಿಕೊಳ್ಳೋಣ , ಸೋಲುಗಳನ್ನು ಗೌರವಿಸೋಣ . ನಾವು ಸಂತೋಷವಾಗಿದ್ದರೆ ಮಾತ್ರ ಜಗತ್ತನ್ನು ಸಂತೋಷವಾಗಿಡಲು ಸಾಧ್ಯ.**

ಸರಳತೆಯ ಆಚರಣೆ : ಸಂಕೀರ್ಣತೆಯೇ ಸೋಲಿಗೆ ದಾರಿ. ನಮ್ಮ ಗುರಿಗಳು ಸರಳವಾಗಿರಲಿ. ದಿನಕ್ಕೆ ಒಂದು ಮರದ ಕೆಳಗೆ ಕುಳಿತು ಉಸಿರಾಡುವುದು ಕೂಡ ಒಂದು ಸಾಧನೆಯೇ ಎಂಬುದನ್ನು ಅರಿಯೋಣ . ಹೊಸ ವರ್ಷ ಎನ್ನುವುದು ಕೇವಲ ದಿನಾಂಕದ ಬದಲಾವಣೆಯಲ್ಲ, ಅದು ನಮ್ಮಲಿನ ಯೋಚನೆಯ ನವೀಕರಣ. ನಾವು ಹೊಸ ಬಟ್ಟೆಗಳನ್ನು ಧರಿಸುವಂತೆ ಹೊಸ ಆಲೋಚನೆಗಳನ್ನು ಧರಿಸೋಣ. ಜಗತ್ತು ಬದಲಾಗಬೇಕಿಲ್ಲ, ನಮ್ಮ ದೃಷ್ಟಿಕೋನ ಬದಲಾದರೆ ಜಗತ್ತೇ ಸುಂದರವಾಗಿ ಕಾಣುತ್ತದೆ. ಈ ವರ್ಷ ನಮ್ಮನ್ನು ನಾವು ಹೆಚ್ಚು ಪ್ರೀತಿಸೋಣ, ಹೆಚ್ಚು ನಗೋಣ, ನಗಿಸೋಣ .

ಹೆಚ್ಚು ಕಲಿಯೋಣ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ 'ಹೆಚ್ಚು ಬದುಕೋಣ'

# ಕವನ

**ಹೊಸ ವರ್ಷದ<br>ಕೋರಿಕೆ<br>ಓ ಮನುಜ<br>ಜೀವನ ಪೂರ<br>ಹಣ, ಅಧಿಕಾರ,ಕೀರ್ತಿಗಳ<br>ಹಿಂದೆ ಓಡಿದ್ದು ನಿನ್ನ ತಪ್ಪಲ್ಲ,<br>ಪ್ರತಿ ಕ್ಷಣ ಬದಲಾಗುತ್ತಿರುವ<br>ಜನಜೀವನ<br>ಅಧಿಕಾರ, ಅಂತಸ್ತು, ಹಣದ<br>ಬೆಲೆ ಕಟ್ಟುವುದು<br>ವಾಸ್ತವ ದುರಂತ,<br>ಓಡಿದ್ದು ಸಾಕು<br>ನಿನ್ನ ಸಾಕಿ - ಸಲಹಿದ<br>ನಿನಗೆ ನೆಲೆ - ಬೆಲೆ ನೀಡಿದ<br>ಸಮಾಜಕ್ಕೆ ಏನಾದರೂ<br>ನೀಡು..<br>ರಕ್ತದಾನ ಮಾಡು<br>ನೂರಾರು ಜನರಿಗೆ<br>ಪ್ರಾಣ - ತ್ರಾಣ ನೀಡು,<br>ನೇತ್ರದಾನ ಮಾಡು<br>ನಾಲ್ಕರು ಅಂಧರಿಗೆ<br>ಬೆಳಕು ನೀಡುವ<br>ತಾರೆಯಾಗು,<br>ಅಂಗಾಂಗ ದಾನ ಮಾಡು<br>ನೂರಾರು ರೋಗಿಗಳಿಗೆ,<br>ಆಶಕ್ತರಿಗೆ<br>ಜೀವದಾನ ನೀಡು,<br>ನಿನ್ನ ಮೆಚ್ಚಿನ ದೇಹವ<br>ದಾನಮಾಡು<br>ಭವಿಷ್ಯದ ಆರೋಗ್ಯಕರ<br>ಸಮಾಜಕ್ಕೆ<br>ಸಂಶೋಧನೆ ಮಾಡುವ<br>ಯುವ ವೈದ್ಯ ಪ್ರಪಂಚಕ್ಕೆ<br>ನೀ ದಾರಿದೀಪವಾಗು..<br>ಭವಿಷ್ಯದ ಸಮಾಜದ<br>ಅರೋಗ್ಯ ವಾಣಿ ನೀನಾಗು..**



**ಡಾ. ಭೇರ್ಯ ರಾಮಕುಮಾರ್<br>ಕನ್ನಡ ಸಾಹಿತ್ಯ ಪರಿಷತ್ ದತ್ತಿ ಪ್ರಶಸ್ತಿ ಪುರಸ್ಕೃತ ಸಾಹಿತಿ<br>ಮೈಸೂರು**

# ಹೊಸ ವರ್ಷ.... ನವ ಆಶಯಗಳು ಪಲ್ಲವಿಸಲಿ

ಇಂಗ್ಲಿಷ್ ಕ್ಯಾಲೆಂಡರಿನಲ್ಲಿ ಡಿಸೆಂಬರ್ ತಿಂಗಳ 31ನೇ ದಿನಾಂಕದ ರಾತ್ರಿ 12 ಗಂಟೆಗೆ ಗಡಿಯಾರದ ಮುಳ್ಳು ತಲುಪುತ್ತಿದ್ದಂತೆ ಇಡೀ ಜಗತ್ತಿನಾದ್ಯಂತ ಜೋರಾದ ಕೇಕೆ, ಸಡಗರ, ಸಂಭ್ರಮ ಆರಂಭವಾಗುತ್ತದೆ.

ಹ್ಯಾಪಿ ನ್ಯೂ ಇಯರ್ 'ಎಂದು ಕೂಗುತ್ತಾ ಆಬಾಲವೃದ್ಧರಾದಿಯಾಗಿ ಎಲ್ಲರೂ ಸಡಗರ ಸಂಭ್ರಮದಿಂದ ನಲಿಯುತ್ತಾರೆ.

ಹತ್ತು ಹಲವಾರು ಇವೆಂಟ್ ಮ್ಯಾನೇಜ್ಮೆಂಟ್ ನ ಕಂಪನಿಗಳು ಆಯೋಜಿಸುವ ನ್ಯೂ ಇಯರ್ ಪಾರ್ಟಿಗಳು, ಬಹು ರಾಷ್ಟ್ರೀಯ ಕಂಪನಿಗಳ ನ್ಯೂ ಇಯರ್ ಪಾರ್ಟಿಗಳು, ಖಾಸಗಿಯಾಗಿ ಏರ್ಪಡುವ ಹೊಸ ವರ್ಷಾಚರಣೆಯ ಪಾರ್ಟಿಗಳು ಬಹುತೇಕ ಎಲ್ಲ ಕಡೆ ಕಿವಿಗಡಚಿಕ್ಕುವ ಸಂಗೀತ, ಗುಂಡು, ತುಂಡು, ಹಾಡು ಕುಣಿತಗಳದ್ದೇ ಅಬ್ಬರ. ಎಷ್ಟೋ ಕಡೆ ಈ ಒಂದು ದಿನವನ್ನು ಆಚರಿಸಲು ತಿಂಗಳಾನುಗಟ್ಟಲೆ ಯೋಜನೆಗಳನ್ನು ರೂಪಿಸಲಾಗುತ್ತದೆ.

ಈಗೀಗ ಚಿಕ್ಕ ಪುಟ್ಟ ಓಣಿಗಳಲ್ಲಿ, ಕಾಲೋನಿಗಳಲ್ಲಿ ಅಪಾರ್ಟ್ಮೆಂಟ್ ಗಳಲ್ಲಿ ತುಸು ಸಭ್ಯ ರೀತಿಯಲ್ಲಿ ಕೌಟುಂಬಿಕವಾಗಿ ಎಲ್ಲರೂ ಭಾಗವಹಿಸುವಂತಹ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಸಮಾಧಾನದ ಸಂಗತಿ.

ಹೊಸ ವರ್ಷ ಹೊಸ ಆಶಯಗಳನ್ನು ಹೊತ್ತು ತರಲೇಬೇಕು. ಕಳೆದ ವರ್ಷದ ಬದುಕಿನ ಹತ್ತು ಹಲವು ಏರುಪೇರುಗಳು, ಸಿಹಿ–ಕಹಿ ಘಟನೆಗಳು ಮನದ ಮೂಲೆಯಲ್ಲಿ ದಾಂಗುಡಿ ಇಡುತ್ತಿರುವಂತೆಯೇ ಹೊಸ ವರ್ಷದಲ್ಲಿ ಬಹಳಷ್ಟು ವಿಷಯಗಳು ನಮ್ಮ ಬದುಕಿನಲ್ಲಿ ಬದಲಾ?ಗಬಹುದು ಎಂಬ ಆಶಯ ನಮ್ಮದಾಗಿರುತ್ತದೆ.... ಆಗಬೇಕು ಕೂಡ.

ಹೊಸ ವರ್ಷದಲ್ಲಿ ರಾಜಕೀಯವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಪ್ರಾಕೃತಿಕವಾಗಿ ಏನೇ ಬದಲಾವಣೆಗಳು ಆದರೂ ಅದು ನಮ್ಮ ಬದುಕಿನ ಮೇಲೆ ಪರಿಣಾಮ ಬೀರುತ್ತದೆ ಆದರೆ ಇದೆಲ್ಲಕ್ಕಿಂತಲೂ ಹೆಚ್ಚಾಗಿ ನಮ್ಮ ಬದುಕಿನ ಕುರಿತಾದ ನಮ್ಮ ನಿಲುವುಗಳು ಅತಿ ಹೆಚ್ಚು ಪರಿಣಾಮವನ್ನು ಬೀರುತ್ತವೆ.

ದೇಶದಲ್ಲಿ ಎಲ್ಲರಿಗೂ ಮೂಲಭೂತ ಸೌಲಭ್ಯಗಳು ದೊರೆಯಬೇಕು, ನಿರುದ್ಯೋಗ ಸಮಸ್ಯೆ ನಿವಾರಣೆ ಆಗಬೇಕು ಭ್ರಷ್ಟಾಚಾರ ತೊಲಗಬೇಕು. ಲಿಂಗ ಜಾತಿ ಮೇಲು–ಕೀಳು ಎಂಬ ಭೇದಗಳು ಅಳಿಯಬೇಕು. ಮತ ಪಂಥ ಧರ್ಮಗಳ ನಡುವಿನ ಗೊಂದಲಗಳು ದೂರವಾಗಬೇಕು, ಮೋಸ ವಂಚನೆ ಕಪಟಗಳು ಇಲ್ಲವಾಗಬೇಕು ದೇಶದ ಪ್ರತಿಯೊಬ್ಬ ಪ್ರಜೆಯು ಕೂಡ ಸಾಮರಸ್ಯ ಹಾಗೂ ಸೌಹಾರ್ದಯುತ ವಾತಾವರಣದಲ್ಲಿ ಬದುಕುವ ಪರಿಸ್ಥಿತಿ ನಿರ್ಮಾಣವಾಗಬೇಕು. ಮೌಲ್ಯಗಳನ್ನು ಪಾಲಿಸುವ ಮತ್ತು ಅವುಗಳ ಮೂಲಕವೇ ಬದುಕನ್ನು ಕಟ್ಟಿಕೊಳ್ಳುವ ಪ್ರಕ್ರಿಯೆ ನಮ್ಮದಾಗಬೇಕು...... ಎಷ್ಟೊಂದು ಚೆಂದದ ಆಶಯಗಳು ಅಲ್ಲವೇ?

ನಮ್ಮ ಸಂವಿಧಾನವು ಹೇಳಿರುವ ಎಲ್ಲಾ ಹಕ್ಕುಗಳ ಹಾಗೂ ಕರ್ತವ್ಯಗಳ ಪಾಲನೆ ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳ್ಳಬೇಕು. ಸಂವಿಧಾನವು ಹೇಳಿರುವ ಜಾತ್ಯಾತೀತ, ಸಾರ್ವಭೌಮ ಸಾಮರಸ್ಯದ ಭೂಮಿ ನಮ್ಮದಾಗಬೇಕು ಹೌದು ಇವೆಲ್ಲವೂ ನಮ್ಮ ಬದುಕಿನಲ್ಲಿ ಆಗಬೇಕಾದರೆ ಅತಿದೊಡ್ಡ ಮಟ್ಟದಲ್ಲಿ ವೈಚಾರಿಕ ಕ್ರಾಂತಿ ನಡೆಯಬೇಕು,ಅದರ ಪರಿಣಾಮವಾಗಿ ದೇಶದಲ್ಲಿ ಸುಭಿಕ್ಷತೆ ನೆಲೆಸಬೇಕು.... ಸಾರ್ವತ್ರಿಕವಾಗಿ ಇದಾವುದು ಒಂದು ದಿನದಲ್ಲಿ ನಡೆಯುವ ಕ್ಷಿಪ್ರ ಕ್ರಾಂತಿಯ ಕಾರ್ಯವಲ್ಲ. ಈ ರೀತಿಯ ಕಾರ್ಯಗಳು ತನ್ನದೇ ಆದ ಗತಿಯಲ್ಲಿ ಮುಂದುವರೆದು ಜನರ ಮನೆ, ಮನಗಳಲ್ಲಿ, ಸಾಮಾಜಿಕ ಬದುಕಿನಲ್ಲಿ ಬದಲಾವಣೆಯನ್ನು ತರಬೇಕು.




ಇದಕ್ಕೆ ಸಾಕಷ್ಟು ಕಾಲಾವಕಾಶ ಬೇಕು..... ಇವುಗಳನ್ನು ಆಶಿಸುವ ಇಚ್ಛೆ ನಮ್ಮದಾದರೂ ಇದರ ಅನುಷ್ಠಾನ ನಮ್ಮೊಬ್ಬರಿಂದ ಖಂಡಿತವಾಗಿಯೂ ಸಾಧ್ಯವಿಲ್ಲ.

ಆದರೆ ನಮ್ಮೊಬ್ಬರಿಂದ ಸಾಧ್ಯವಾಗುವ ನಮ್ಮ ನಮ್ಮ ತನು ಮನಗಳನ್ನು ಸಂತೈಸುವ ನಿಟ್ಟಿನಲ್ಲಿ ನಮ್ಮ ಬದುಕಿನಲ್ಲಿ ನಾವು ಮಾಡಿಕೊಳ್ಳುವ ಚಿಕ್ಕಪುಟ್ಟ ಬದಲಾವಣೆಗಳು ನಮ್ಮ ಬದುಕಿನ ದಿಕ್ಕನ್ನು ಬದಲಿಸಲು ಸಾಧ್ಯ ಈ ನಿಟ್ಟಿನಲ್ಲಿ ನಮ್ಮ ಪ್ರಯತ್ನವನ್ನು

ಈ ಹೊಸ ವರ್ಷದ ನವ ಸಂಕಲ್ಪವಾಗಿ ಇಟ್ಟುಕೊಂಡು ಮುಂದುವರೆಯೋಣ.

ವೈಯುಕ್ತಿಕ ನೆಲೆಯಲ್ಲಿ ನೋಡುವುದಾದರೆ.....

ಮನೋ ದೈಹಿಕ ಆರೋಗ್ಯ, ಆರ್ಥಿಕ ಪರಿಸ್ಥಿತಿಯ ಸುಧಾರಣೆ, ಕೌಟುಂಬಿಕ ಬಾಂಧವ್ಯಗಳ ಪೋಷಣೆ, ಸ್ನೇಹ ಸಂಬಂಧಗಳನ್ನು ಉಳಿಸಿ ಬೆಳೆಸಿಕೊಳ್ಳುವ ಪ್ರಯತ್ನಗಳು ಉತ್ತಮ ಮೌಲ್ಯಗಳನ್ನು ಮತ್ತಷ್ಟು ಆಳವಾಗಿ ನಮ್ಮ ಬದುಕಿನಲ್ಲಿ ರೂಢಿಸಿಕೊಳ್ಳುವುದು, ಮಕ್ಕಳ ಶೈಕ್ಷಣಿಕ ಪ್ರಗತಿ, ಉದ್ಯೋಗ, ವಿವಾಹ, ಪ್ರೀತಿ ಪ್ರೇಮ ಕುಟುಂಬ ಹೀಗೆ ಹತ್ತು ಹಲವು ಸಂಗತಿಗಳು ವೈಯಕ್ತಿಕ ಪರಿಧಿಯಲ್ಲಿ ಬರುತ್ತವೆ. ಸಾರ್ವತ್ರಿಕ ಪಲ್ಲಟಗಳಿಗೆ ನಾವೊಬ್ಬರ ಹೋರಾಟ ಯಾವುದಕ್ಕೂ ಸಾಲದೆ ಹೋದರೂ ಕೂಡ ವೈಯಕ್ತಿಕವಾಗಿ ನಮ್ಮ ಬದುಕನ್ನು ಬದಲಿಸಿಕೊಳ್ಳುವ ನಿಟ್ಟಿನಲ್ಲಿ ಹೊಸ ವರ್ಷ ಹೊಸ ಆಶಯಗಳನ್ನು ಈಡೇರಿಸಿಕೊಳ್ಳುವ ನಿಟ್ಟಿನಲ್ಲಿ ನಾವು ಸಂಕಲ್ಪ ಮಾಡಲೇಬೇಕು. ಕಳೆದ ವರ್ಷಕ್ಕಿಂತ ಹೆಚ್ಚಿನ ಮನೋ ದೈಹಿಕ ಆರೋಗ್ಯವನ್ನು ಸಾಧಿಸಿಕೊಳ್ಳುವ ನಿಟ್ಟಿನಲ್ಲಿ ಯೋಗ ವ್ಯಾಯಾಮ ಧ್ಯಾನ ನಡಿಗೆಗಳಂತಹ ಪ್ರಕ್ರಿಯೆಗಳಿಗೆ ದಿನದ ಒಂದು ಗಂಟೆಯನ್ನು ಕಡ್ಡಾಯವಾಗಿ ಮೀಸಲಾಗಿಡಬೇಕು. ಅಯ್ಯೋ! ಧ್ಯಾನ ಮಾಡಲು ನಾವೇನು ಮುದುಕರೇ? ಎಂದು ಭಾವಿಸುವುದು ಬೇಡ ಪ್ರಸ್ತುತ ದಿನಗಳಲ್ಲಿ ಎಲ್ಲ ವಯೋಮಾನದ ಜನರಿಗೆ ಅದರಲ್ಲೂ ಯುವ ಜನಾಂಗಕ್ಕೆ ಧ್ಯಾನದ ಮೂಲಕ ಆತ್ಮ ಚಿಂತನೆಯ ಅವಶ್ಯಕತೆ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದೆ.

ನಮ್ಮ ಹಿಂದಿನ ಜನರ ಸಂಪ್ರದಾಯಿಕ ಆಹಾರಗಳನ್ನು ಬಹುತೇಕ ತೊರೆದಿರುವ ನಾವುಗಳು ಈ ಕುರಿತು ತುಸು ಲಕ್ಷ ವಹಿಸಲೇಬೇಕು. ನಮ್ಮ ದೈಹಿಕ ಆರೋಗ್ಯವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಕೊಬ್ಬು ರಹಿತ ಉತ್ತಮ ಪೋಷಕಾಂಶಗಳನ್ನು ಹೊಂದಿದ ಆಹಾರ ಪದಾರ್ಥಗಳನ್ನು ನಮ್ಮ ಬದುಕಿನ ಭಾಗವಾಗಿಸಿಕೊಳ್ಳಬೇಕು. ಯಾವಾಗಲೋ ಒಮ್ಮೆ ಹೊರಗಿನ ತಿಂಡಿ ತಿನಿಸುಗಳಿಗೆ ಮೊರೆ ಹೋದರೆ ತಪ್ಪಿಲ್ಲ ಆದರೆ ಆ ಯಾವಾಗಲೂ ಒಮ್ಮೆ ಎಂಬ ಪರಿಸ್ಥಿತಿ ಪ್ರತಿದಿನವೂ ಒದಗಿದರೆ ಮುಂದಾಗುವ ಅನಾಹುತಗಳಿಗೆ ನಾವೇ ಕಾರಣೀಭೂತರಾಗುತ್ತೇವೆ ಎಂಬುದನ್ನು ಮರೆಯಬಾರದು.

ಚಿಕ್ಕ ವಯಸ್ಸಿನಲ್ಲಿಯೇ ರಕ್ತದೊತ್ತಡ, ಮಧುಮೇಹ, ಹೃದಯದ ತೊಂದರೆ. ಬೊಜ್ಜು ಮತ್ತಿತರ ಸಮಸ್ಯೆಗಳಿಂದ ಬಳಲುತ್ತಿರುವ ಮಕ್ಕಳು ಹಾಗೂ ಹದಿಹರೆಯದವರನ್ನು ನಾವು ಕಾಣುತ್ತಿದ್ದೇವೆ. ಬದುಕನ್ನು ಕೈಗೆಟಕಿಸಿಕೊಳ್ಳುವ ಮುನ್ನವೇ ಸಾಕಷ್ಟು ಚಿಕ್ಕ ವಯಸ್ಸಿನ, ಹದಿಹರೆಯದ ಜನ ಹೃದಯಘಾತಗಳಿಂದ ಸಾವಿನ ಮನೆಯ ಕದ ತಟ್ಟುತ್ತಿದ್ದಾರೆ. ಕಾರಣ ಗೊತ್ತಿದ್ದು ಕೂಡ ನಮ್ಮ ಬದುಕಿನಲ್ಲಿ ಆರೋಗ್ಯಕರ ಜೀವನ ಶೈಲಿಯನ್ನು ಅಳವಡಿಸಿಕೊಳ್ಳದೆ ಕೈಬೀಸಿ ಕರೆಯುವ ಅನಾರೋಗ್ಯಕ್ಕೆ ತುತ್ತಾಗುವ ಜನರು ಎಚ್ಚೆತ್ತುಕೊಳ್ಳಬೇಕು.



ಒಳ್ಳೆಯ ಶೈಕ್ಷಣಿಕ ಮಟ್ಟವು ಉತ್ತಮ ಬದುಕನ್ನು ತಂದುಕೊಡುತ್ತದೆ ಎಂಬುದು ನಿಜ, ಆದರೆ ಉತ್ತಮ ಸಂಸ್ಕಾರಗಳು ನಮ್ಮ ಬದುಕಿನ ಮೌಲ್ಯವನ್ನು ಹೆಚ್ಚಿಸುತ್ತದೆ. ಮೌಲ್ಯಗಳು ನಮ್ಮ ಬದುಕಿನ ಭಾಗವಾಗಲೇಬೇಕು. ಉತ್ತಮ ಮೌಲ್ಯಗಳು ಭಾಷಣಗಳಲ್ಲಿ ಪ್ರಬಂಧಗಳಲ್ಲಿ ಮಂಡಿಸುವ ಅಲಂಕಾರಿಕ ಪದಗಳಲ್ಲ, ಅವು ನಮ್ಮ ಬದುಕಿನ ಗುಣಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ದಾರಿ ತೋರುವ ಮಾರ್ಗಸೂಚಿಗಳು. ಮೌಲ್ಯಗಳೊಂದಿಗೆ ರಾಜಿಯಾಗದೆ ಬದುಕನ್ನು ಕಟ್ಟಿಕೊಳ್ಳಬೇಕು. ಆಗ ಸಂತೃಪ್ತ ಬದುಕು ನಮ್ಮದಾಗುತ್ತದೆ.

ಕೌಟುಂಬಿಕ ಬಾಂಧವ್ಯ ಹಾಗೂ ಉತ್ತಮ ಸಾಮಾಜಿಕ ಬಾಂಧವ್ಯಗಳು ನಮ್ಮ ಬದುಕಿನ ಜೀವ ದ್ರವ್ಯದ ಮೂಲ ಸೆಲೆಯಾಗಬೇಕು. ನಮ್ಮ ಹೆಣವನ್ನು ನಾವೇ ಹೊರಲು ಸಾಧ್ಯವಿಲ್ಲ ನಮ್ಮ ಸುಖ ದುಃಖಗಳನ್ನು ಹಂಚಿಕೊಳ್ಳಲು ನಮಗೆ ಕುಟುಂಬದ,ಸ್ನೇಹಿತರ, ಸಂಬಂಧಿಕರ, ಸಹೋದ್ಯೋಗಿಗಳ ಅವಶ್ಯಕತೆ ಇದೆ. ನಮ್ಮ ಹೆಗಲಿಗೆ ನಾವೇ ತಲೆಕೊಡಲು ಸಾಧ್ಯವಿಲ್ಲ. ಹಂಚಿಕೊಳ್ಳುವುದರಿಂದ ಸುಖವನ್ನು ಹೆಚ್ಚಿಸಿಕೊಳ್ಳುವ ದುಃಖವನ್ನು ಕಡಿಮೆಗೊಳಿಸಿಕೊಳ್ಳುವ ಅದ್ಭುತ ಭಾವನಾತ್ಮಕತೆ ನಮ್ಮಲ್ಲಿ ನೆಲೆಯಾಗಬೇಕು.

ಉತ್ತಮ ಬಾಂಧವ್ಯಗಳು ನಮ್ಮಲ್ಲಿ ರಕ್ಷಣಾ ಮನೋಭಾವವನ್ನು ಮೂಡಿಸುತ್ತದೆ. ಮಾನಸಿಕ ದೃಢತೆಯನ್ನು ಹೆಚ್ಚಿಸುತ್ತದೆ ನಮ್ಮೊಂದಿಗೆ ಯಾರಾದರೂ ಇದ್ದಾರೆ ಎಂಬ ಭಾವವೇ ಬದುಕಿನಲ್ಲಿ ಧೈರ್ಯದಿಂದ ಮುನ್ನಡೆಯಲು ಅನುವು ಮಾಡಿಕೊಡುತ್ತದೆ.

ಮುಂಜಾನೆಯಿಂದ ತಡರಾತ್ರಿಯವರೆಗೆ ಶಿಕ್ಷಣ, ಉದ್ಯೋಗ, ಸ್ನೇಹಿತರು ಮೋಜು ಮಜಾ ಎಂದು ಹಲವಾರು ಕಾರ್ಯಗಳ ನಿಮಿತ್ತ ಮನೆಯಿಂದ ಹೊರ ಬೀಳುವ ನಾವುಗಳು ಮತ್ತೆ ದಣಿವಾರಿಸಿಕೊಳ್ಳಲು ಮನೆಯ ಮಡಿಲಿಗೆ ಬಂದು ಬೀಳಲೇಬೇಕು. ಕುಟುಂಬದ ಜನರೊಂದಿಗೆ ಒಡನಾಡಲೇಬೇಕು. ಕುಟುಂಬವು ಪ್ರೀತಿ, ವಿಶ್ವಾಸ, ನಂಬಿಕೆ, ಕೌಟುಂಬಿಕ ಭದ್ರತೆಯನ್ನು ಕೊಡುವ ಬದುಕಿನ ಬಹುದೊಡ್ಡ ಭಾವನಾತ್ಮಕ ನೆಲೆಯಾಗಿರುತ್ತದೆ. ಇಲ್ಲಿ ಪರಸ್ಪರರನ್ನು ಛೇಡಿಸುವ, ಸಂತೈಸುವ, ಪ್ರೀತಿಸುವ, ಆರಾಧಿಸುವ, ವಾದಿಸುವ, ಹಠ,ಮುನಿಸು, ಅಸಹನೆಗಳನ್ನು ತೋರಿದರೂ ಅಕ್ಕರೆಯಿಂದ ಅಪ್ಪುವ ಮತ್ತೆ ಮತ್ತೆ ಸಾಂತ್ವನಿಸುವ ಕುಟುಂಬದ ಸದಸ್ಯರ ಪ್ರೀತಿ ನಮಗೆ ಬೇಕು... ಅಂತಹ ಪ್ರೀತಿಯನ್ನು ಸದಾ ಕಾಪಿಟ್ಟುಕೊಳ್ಳಲು ಕುಟುಂಬದ ಭಾಗವಾಗಿ ನಾವು ಕೇವಲ ನಮ್ಮ ಹಕ್ಕುಗಳನ್ನು ಚಲಾಯಿಸದೆ ಕೌಟುಂಬಿಕವಾಗಿ ನಮ್ಮ ಕರ್ತವ್ಯಗಳಿಗೆ ಬದ್ಧರಾಗಬೇಕು. ಗ್ಯಾಜೆಟ್ ಗಳನ್ನು ದಿನದ ಕೆಲ ಗಂಟೆಗಳಾದರೂ ದೂರವಿರಿಸುವುದು, ಸಾಮಾಜಿಕ ಜಾಲತಾಣಗಳಿಂದ ದೂರವಿರುವುದು ಪ್ರಸ್ತುತ ದಿನಮಾನದ ಅತ್ಯಂತ ಅವಶ್ಯಕ ವಿಷಯವಾಗಿದ್ದು ಈ ನಿಟ್ಟಿನಲ್ಲಿ ಹಿಂದೆಂದಿಗಿಂತಲೂ ಹೆಚ್ಚು ಕಾರ್ಯ ಪ್ರವೃತ್ತರಾಗಬೇಕಾದ ಪರಿಸ್ಥಿತಿ ನಮ್ಮ ಮುಂದಿದೆ. ಮುಂಜಾನೆ ಕಣ್ಣು ಬಿಡುವ ಮುನ್ನವೇ ತಡಕಾಡಿ ಕೈಗೆ ಮೊಬೈಲ್ ಅನ್ನು ತೆಗೆದುಕೊಳ್ಳುವ ನಾವುಗಳು ಸಾಮಾಜಿಕ ಜಾಲತಾಣಗಳಲ್ಲಿ ಇನ್ನಿಲ್ಲದಂತೆ ಹುದುಗಿ ಹೋಗಿ ನಮ್ಮ ಸಮಯವನ್ನು ವ್ಯಯ ಮಾಡುತ್ತಿದ್ದು ನಮ್ಮ ಬದುಕಿನ ಬಹು ಭಾಗವನ್ನು ಅನವಶ್ಯಕ ಚಟುವಟಿಕೆಗಳಲ್ಲಿ ವ್ಯರ್ಥವಾಗಿ ಕಳೆಯುತ್ತಿದ್ದೇವೆ. ನಮ್ಮಲ್ಲಿ ಈ ಹಿಂದಿನ ಕಾರ್ಯತತ್ಪರತೆ ಇಲ್ಲವಾಗಿರುವುದು ವಿಷಾದನೀಯ.

ಬದುಕಿನಲ್ಲಿ ಮನರಂಜನೆ ಬೇಕು ಆದರೆ ಮನರಂಜನೆಯ ಬದುಕಾಗಬಾರದು . ಜಗತ್ತಿನ ಎಲ್ಲ ವಿಷಯಗಳ ಮಾಹಿತಿಯನ್ನು ಪಡೆಯುವ, ಮನರಂಜನೆಯನ್ನು ಹೊಂದುವ, ಎಲ್ಲ ಸೀರೀಸ್ ಗಳನ್ನು ನೋಡಿದ್ದೇವೆ ಎಂಬ ಹೆಮ್ಮೆಯನ್ನು ಹೊಂದುವ, ಎಲ್ಲಾ ಆಟಗಳನ್ನು ಮೊಬೈಲ್ ನಲ್ಲಿಯೇ ಆಡುವ ಭರದಲ್ಲಿ ನಾವು ನಮ್ಮ ಸ್ವಂತಿಕೆಯನ್ನು ಕಳೆದುಕೊಂಡಿದ್ದೇವೆ. ಭ್ರಾಮಕ ಜಗತ್ತಿನಲ್ಲಿ ಸಂಚರಿಸುವ ನಾವು ವಾಸ್ತವ ಜಗತ್ತನ್ನು ಮರೆತೇ ಬಿಟ್ಟಿದ್ದೇವೆ.

ಕೈಯಲ್ಲಿ ಒಂದು ಮೊಬೈಲ್, ಅದರಲ್ಲಿ ಒಂದಷ್ಟು ಡಾಟಾ ಮತ್ತು ಯಾರೂ ಭಂಗಪಡಿಸಲಾಗದ ಏಕಾಂತ ಇದ್ದರೆ ಸಾಕು ಗಂಟೆಗಟ್ಟಲೇ ಅದರ ಸ್ಕ್ರೀನ್ ತೀಡಿದ್ದೇ ತೀಡಿದ್ದು. ಅತಿಯಾದರೆ ಅಮೃತವೂ ವಿಷ ಎಂದು ನಮಗೆ ಗೊತ್ತಿದೆ ಅಲ್ಲವೇ?

ಹಾಗೆಂದು ಗ್ಯಾಜೆಟ್ಗಳದ್ದೇ ಎಲ್ಲಾ ತಪ್ಪು ಎಂದು ಹೇಳುವಂತಿಲ್ಲ.... ಅದರಲ್ಲಿ ದಿಕ್ಕು ತಪ್ಪಿಸುವ ವಿಷಯಗಳು ಇರುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಅತ್ಯುತ್ತಮ ಕಲಿಕೆಯ ವಿಷಯಗಳು, ಸಾಮಗ್ರಿಗಳು ಇದ್ದು ಅವುಗಳನ್ನು ಅರಿಯುವ ಜಾಣ್ಮೆ ನಮ್ಮದಾಗಬೇಕು. ಊಟದಲ್ಲಿ ಉಪ್ಪಿನಕಾಯಿ ಇರಬೇಕೆ ಹೊರತು ಉಪ್ಪಿನಕಾಯಿಯೇ ಊಟವಲ್ಲ ಎಂಬ ಸತ್ಯವನ್ನು ಅರಿತು ನಮ್ಮ ಬದುಕಿನಲ್ಲಿ ವಿದ್ಯುನ್ಮಾನ ಯಂತ್ರಗಳನ್ನು ಅವಶ್ಯಕತೆ ಇರುವಷ್ಟೇ ಬಳಸಬೇಕು.

ಮೌಲ್ಯಗಳು ನಮ್ಮ ಬದುಕಿನ ಭಾಗವಾಗಬೇಕು.... ಬದುಕಿನ ಯಾವುದೇ ಹಂತದಲ್ಲಿಯೂ ನಾವು ನಂಬಿಕೊಂಡು ಬಂದ ಮೌಲ್ಯಗಳೊಂದಿಗೆ ರಾಜಿ ಮಾಡಿಕೊಳ್ಳದೆ ಅತ್ಯುತ್ತಮ ಬದುಕನ್ನು ಕಟ್ಟಿಕೊಳ್ಳಬೇಕು. ಮೌಲ್ಯಗಳೊಂದಿಗೆ ರಾಜಿಯಾಗುವ ಬಹಳಷ್ಟು ಪ್ರಸಂಗಗಳನ್ನು ನಾವು ಬದುಕಿನಲ್ಲಿ ಎದುರಿಸಬೇಕಾಗಬಹುದು..... ಆದರೆ ಒಂದೊಮ್ಮೆ ಹಾಗೆ ಮೌಲ್ಯಗಳೊಂದಿಗೆ ರಾಜಿಯಾದ ಪಕ್ಷದಲ್ಲಿ ನಮ್ಮಲ್ಲಿರುವ ನೈತಿಕತೆಯ ಪತನ ಹೊಂದುತ್ತದೆ ಇದು ನಮ್ಮಲ್ಲಿ ಮಾನಸಿಕ ದಿವಾಳಿತನಕ್ಕೆ ಕಾರಣವಾಗುತ್ತದೆ. ಆರ್ಥಿಕ ದಿವಾಳಿತನದಿಂದ ನೀವು ಖಂಡಿತವಾಗಿಯೂ ಬಚಾವಾಗಬಹುದು ಆದರೆ ಮಾನಸಿಕವಾದ ನೈತಿಕ ದಿವಾಳಿತನವು ನಿಮ್ಮನ್ನು ಅದಪ್ಪತನಕ್ಕೆ ಆತ್ಮ ಸಂಕುಚತೆಗೆ ದೂಡುತ್ತದೆ ಇದೊಂದು ರೀತಿಯಲ್ಲಿ ಮರಣ ಶಾಸನವನ್ನು ನಮಗೆ ನಾವೇ ವಿಧಿಸಿಕೊಂಡಂತೆ. ಖಂಡಿತವಾಗಿಯೂ ಇದು ಬೇಡ.

ಅ... ಗಳನ್ನು ಅಲಕ್ಷಿಸಿ... ಅಸಹನೆ, ಸಹಿಷ್ಣುತೆ ಅಸಮಾಧಾನ,ಅಶಾಂತಿ, ಅತೃಪ್ತಿ, ಅಲ್ಪತೆ ಮುಂತಾದ ನಕಾರಾತ್ಮಕ ವಿಷಯಗಳನ್ನು ಸಂಪೂರ್ಣವಾಗಿ ಅಲಕ್ಷಿಸಿ. ನಕಾರಾತ್ಮಕ ವಿಷಯಗಳು ನಮ್ಮಲ್ಲಿ ವಿನಾಕಾರಣ ಸಂಶಯವನ್ನು ಹುಟ್ಟುಹಾಕುತ್ತವೆ, ನಮ್ಮ ಮಾನಸಿಕ ನೆಮ್ಮದಿಯನ್ನು ಕಸಿಯುತ್ತವೆ. ನಿರಾಶೆಯ ಮಂಕು ಕವಿಯುವಂತೆ ಮಾಡುತ್ತವೆ.... ಆದ್ದರಿಂದ ನಕಾರಾತ್ಮಕ ವಸ್ತು, ವ್ಯಕ್ತಿ ಹಾಗೂ ವಿಷಯಗಳನ್ನು ದೂರವಿಡಬೇಕು. ಪ್ರತಿ ಹೊಸ ಬಟ್ಟೆ, ವಸ್ತು, ವಿಷಯಗಳು ನಮ್ಮ ಬದುಕಿನಲ್ಲಿ ಸಂಭ್ರಮವನ್ನು ತರುವಂತೆಯೇ ಈ ಹೊಸ ವರ್ಷವೂ ನಮ್ಮ ಬದುಕಿನಲ್ಲಿ ನವ ಆಶಯಗಳನ್ನು ಪೂರೈಸುವ ನಿಟ್ಟಿನಲ್ಲಿ ನಮ್ಮನ್ನು ನಾವು ಪ್ರಜ್ಞಾಪೂರ್ವಕವಾಗಿ ತೊಡಗಿಸಿಕೊಳ್ಳುವ ಮೂಲಕ ದೈಹಿಕ ಆರೋಗ್ಯವನ್ನು, ಮಾನಸಿಕ ಹಾಗೂ ಭಾವನಾತ್ಮಕ ಸಂತೃಪ್ತಿಯನ್ನು ಹೊಂದೋಣ. ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು



**ವೀಣಾ ಹೇಮಂತ್ ಗೌಡ ಪಾಟೀಲ್<br>ಮುಂಡರಗಿ ಗದಗ್**

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,